₹ 6 @vishwavaninews epaper.vishwavani.news vishwavani.news ಬೆಂಗಳೂರು | **ಹುಬ್ಬಳ್ಳಿ** | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಮಂಗಳವಾರ 02.06.2026** **ಸಂಪುಟ:** 68 **ಸಂಚಿಕೆ:** 319 **ಪುಟಗಳು:** 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಇಚ್ಛಾಪೂರ್ವಕ ಲೈಂಗಿಕ ವೃತ್ತಿ ತಪ್ಪಲ್ಲ: ಸುಪ್ರೀಂ

ಸರ್ವೋಚ್ಚ ನ್ಯಾಯಪೀಠ ಮಹತ್ವದ ತೀರ್ಪು ನೀಡಿದೆ. ವೇಶ್ಯಾವಾಟಿಕೆ ನಡೆಸುವುದು ತಪ್ಪು, ಆದರೆ ಅಲ್ಲಿ ಸ್ವಯಿಚ್ಛೆಯಿಂದ ಲೈಂಗಿಕವೃತ್ತಿ ನಡೆಸುತ್ತಿದ್ದರೆ ಅಂತಹವರನ್ನು ಬಂಧಿಸಬಾರದು ಎಂದು ಪೊಲೀಸರಿಗೆ ಸೂಚನೆ ನೀಡಿದೆ. ಬಲವಂತವಾಗಿ ಆ ವೃತ್ತಿಗೆ ದೂಡಲ್ಪಟ್ಟವರ ರಕ್ಷಣೆ ಸರಿ, ಆದರೆ ಎಲ್ಲರನ್ನೂ ಒಂದೇ ರೀತಿ ನೋಡಬಾರದು ಎಂದಿದೆ.

ಹೈಕಮಾಂಡ್ ಜತೆ ಮತ್ತೊಂದು ಸುತ್ತಿನ ಸಭೆ ಬಳಿಕ ಪಟ್ಟಿ ಅಂತಿಮ ಕೆಪಿಸಿಸಿ ಅಧ್ಯಕ್ಷತೆ ಚರ್ಚೆ ಮುಂದಕ್ಕೆ, ಬಣ ಮೇಲಾಟದ ಕುತೂಹಲ

ಹೈ ಮುಂದೆ ಸಂಪುಟ ಸರ್ಕಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಲು ಒಂದೇ ದಿನ ಬಾಕಿಯಿದ್ದು, ಈ ಹಂತದಲ್ಲಿಯೂ ನೂತನ ಸಂಪುಟದಲ್ಲಿ ಯಾರಿಗೆಲ್ಲ ಅವಕಾಶ ನೀಡಲಾಗುತ್ತದೆ. ಡಿಕೆಶಿ ಅವರೊಂದಿಗೆ ಎಷ್ಟು ಮಂದಿ ಅಧಿಕಾರ ಸ್ವೀಕರಿಸಲಿದ್ದಾರೆ ಎನ್ನುವ ಸ್ಪಷ್ಟನೆ ಸಿಕ್ಕಿಲ್ಲ.

ಸಚಿವ ಸಂಪುಟ ರಚನೆಗೆ ಹೈಕಮಾಂಡ್‌ನಿಂದ ಅಂತಿಮ ಮುದ್ರೆ ಪಡೆಯಲು ದೆಹಲಿಗೆ ತೆರಳಿದ್ದ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರೊಂದಿಗೆ ಹೈಕಮಾಂಡ್ ನಾಯಕರು ಪ್ರಾಥಮಿಕ ಹಂತದ ಚರ್ಚೆ ನಡೆಸಿದ್ದಾರೆ. ಈ ಹಿಂದೆ ಸೋಮವಾರ ಸಂಜೆ ಸಭೆ ನಿಗದಿಯಾಗಿತ್ತಾದರೂ, ರಾಹುಲ್ ಗಾಂಧಿ ಅವರು 'ಬ್ಯುಸಿ' ಇರುವುದರಿಂದ ಸಭೆ ನಡೆದಿಲ್ಲ ಎಂದು ಮೂಲಗಳು ತಿಳಿಸಿವೆ.

ದೆಹಲಿಯಲ್ಲಿರುವ ಸಿದ್ದರಾಮಯ್ಯ ಅವರು ಮಹದೇವಪ್ಪ ಪುತ್ರ ಸುನೀಲ್ ಬೋಸ್ ನಿವಾಸಕ್ಕೆ ತೆರಳಿ ಭೋಜನ ಮಾಡಿಕೊಂಡು ವಾಪಸಾಗಿದ್ದು, ಈ ವೇಳೆ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಪ್ರಾಥಮಿಕ ಹಂತದ ಸಭೆಯನ್ನು ಮಾತ್ರ ನಡೆಸಿದ್ದಾರೆ. ಮಂಗಳವಾರ ಬೆಳಗ್ಗೆ ಅಥವಾ ಮಧ್ಯಾಹ್ನದ ವೇಳೆ ರಾಹುಲ್ ನೇತೃತ್ವದಲ್ಲಿ ಅಂತಿಮ ಸುತ್ತಿನ ಸಭೆ ನಡೆಸಿ ಸಂಪುಟಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎನ್ನುವುದನ್ನು ಖಾತ್ರಿ ಮಾಡಿಕೊಂಡು ಮಂಗಳವಾರ ರಾತ್ರಿ ಡಿಕೆ ಹಾಗೂ ಸಿದ್ದರಾಮಯ್ಯ ಬೆಂಗಳೂರಿಗೆ ವಾಪಸಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭೆ ಸೀಟು ಇಂದೇ ಅಂತಿಮ: ಕರ್ನಾಟಕದಿಂದ ರಾಜ್ಯಸಭೆ ಮೂರು ಸ್ಥಾನ ಹಾಗೂ ವಿಧಾನ ಪರಿಷತ್‌ನ ನಾಲ್ಕು ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕು ಎನ್ನುವ ಬಗ್ಗೆಯೂ ಮಂಗಳವಾರದ ಸಭೆಯಲ್ಲಿ ಚರ್ಚೆಯಾಗುವ ಸಾಧ್ಯತೆಯಿದೆ. ಈಗಾಗಲೇ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಅಂತಿಮವಾಗಿದೆ.

→ 4



ನಾನು ದೆಹಲಿಗೆ ಹೋಗಲ್ಲ

ಸಚಿವ ಸ್ಥಾನ ಕೊಡುವುದು ಬಿಡುವುದು ಪಕ್ಷಕ್ಕೆ ಬಿಟ್ಟ ವಿಚಾರ. ಹಿಂದೆ ಕೊಟ್ಟಾಗ ಒಳ್ಳೆಯ ಕೆಲಸ ಮಾಡಿದ್ದೇನೆ. ನಾನು ಶಾಸಕನಾಗಿ ಸದನ ವೀರ ಪ್ರಶಸ್ತಿ ಪಡೆದುಕೊಂಡಿದ್ದೆ. ಸಚಿವನಾಗಿದ್ದಾಗ ಒಳ್ಳೆಯ ಕೆಲಸ ಮಾಡಿ ರಾಷ್ಟ್ರ ಪ್ರಶಸ್ತಿ ಪಡೆದುಕೊಂಡಿದ್ದೇನೆ. ನನ್ನ ಕೆಲಸ ಗುರುತಿಸಿ ಸಿದ್ದರಾಮಯ್ಯ ಅವರು ಪ್ರತಿಪಕ್ಷದ ಉಪ ನಾಯಕ ಸ್ಥಾನ ನೀಡಿದ್ದರು. ಈಗ ಸ್ಪೀಕರ್ ಮಾಡಿದ್ದಾರೆ, ಒಳ್ಳೆ ಕೆಲಸ ಮಾಡುತ್ತಿದ್ದೇನೆ. ಮುಂದೆ ಏನು ಕೊಡುತ್ತಾರೆ ನೋಡೋಣ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದ್ದಾರೆ.

ವಿವಾದ ಸೃಷ್ಟಿಸಿದ ಜಮೀರ್ ಆಡಿಯೊ; ಸಚಿವ ಸ್ಥಾನಕ್ಕೂ ಕುತ್ತು?

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಜಮೀರ್ ಅಹ್ಮದ್ ಅವರಿಗೆ ಇದೀಗ ಆಡಿಯೊ ಕಂಟಕ ಎದುರಾಗಿದೆ. ದಾವಣಗೆರೆ ದಕ್ಷಿಣ ಉಪ ಚುನಾವಣೆ ವೇಳೆ ಸ್ಥಳೀಯ ನಾಯಕ ಮೊಹಮ್ಮದ್ ಸಿರಾಜ್ ಜತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಇದೀಗ ವೈರಲ್ ಆಗಿದ್ದು, ಇದರಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಬೀಳದಂತೆ ನೋಡಿಕೊಳ್ಳಬೇಕು ಎನ್ನುವ ಸಂದೇಶ ನೀಡಲಾಗಿದೆ. ಆದರೆ ಈ ಆಡಿಯೊ ತನ್ನದಲ್ಲ ಎಂದು ಜಮೀರ್ ಸ್ಪಷ್ಟನೆ ನೀಡಿದ್ದು, ಇದನ್ನೇ ಮುಂದಿಟ್ಟುಕೊಂಡು ಪಕ್ಷದ ಹೈಕಮಾಂಡ್ ಬಳಿಕ ಕೆಲವರು ದೂರು ಸಲ್ಲಿಸುವ ಸಾಧ್ಯತೆಯಿದೆ.

→ 4

ಆಡಿಯೊದಲ್ಲೇನಿದೆ?

ಆಡಿಯೋ ಸಂಭಾಷಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸಮರ್ಥ್ ಅವರಿಗೆ ಹೆಚ್ಚು ವೋಟು ಹಾಕಬೇಡಿ. ಸಾದಿಕ್ ಪೈಲ್ವಾನ್ ವಾರ್ಡ್‌ನಲ್ಲಿ ಕಾಂಗ್ರೆಸ್‌ಗೆ ವೋಟು ಕಡಿಮೆ ಬರುವಂತೆ ನೋಡಿಕೊಳ್ಳಿ. ಪಕ್ಷೇತರರಿಗೆ ಹೆಚ್ಚು ಮತ ಹಾಕಿಸಿ. ಬಲವಂತವಾಗಿ ಮನೆಯಿಂದ ಕರೆದು ಬಂದು ವೋಟು ಹಾಕಿಸಬೇಡಿ ಎಂದು ಹೇಳಿರುವುದು ದಾಖಲಾಗಿದೆ.

ನನ್ನ ಕುರಿತಾದ ಆಡಿಯೊ ನಕಲಿ, ಎಐ ತಂತ್ರಜ್ಞಾನ ಬಳಸಿ ಮಾಡಲಾಗಿದೆ. ಇದೊಂದು ರಾಜಕೀಯ ಷಡ್ಯಂತ್ರ. ನಕಲಿ ಆಡಿಯೋ ಮಾಡಿ ವೈರಲ್ ಮಾಡಿರುವವರ ವಿರುದ್ಧ ಸೈಬರ್ ಠಾಣೆಯಲ್ಲಿ ದೂರು ದಾಖಲಿಸಲಾಗುವುದು. ಈ ಬಗ್ಗೆ ಯಾವ ತನಿಖೆಗೂ ಸಿದ್ಧ.

-ಜಮೀರ್ ಅಹ್ಮದ್, ಮಾಜಿ ಸಚಿವ

ಕಮರ್ಷಿಯಲ್ ಸಿಲಿಂಡರ್ ದರ ಸತತ 4ನೇ ಬಾರಿ ಏರಿಕೆ

3200 ರು. ದಾಟಿದ ವಾಣಿಜ್ಯ ಸಿಲಿಂಡರ್

ದೆಹಲಿ: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಮತ್ತೊಮ್ಮೆ ಹೆಚ್ಚಿಸಲಾಗಿದ್ದು, ಬೆಂಗಳೂರಿನಲ್ಲಿ ಸಿಲಿಂಡರ್ ದರ 3200 ರು.ಗಳ ಗಡಿ ದಾಟಿದೆ. ಜೂನ್ 1ರಿಂದ ಜಾರಿಗೆ ಬರುವಂತೆ ತೈಲ ಮಾರುಕಟ್ಟೆ ಕಂಪನಿಗಳು 19 ಕೆಜಿ ವಾಣಿಜ್ಯ ಸಿಲಿಂಡರ್‌ಗಳ ದರವನ್ನು ಹೆಚ್ಚಿಸಿದ್ದು, 14.2 ಕಿಲೋ ತೂಕದ ಗೃಹ ಬಳಕೆ ಅಡುಗೆ ಅನಿಲ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ. ಬೆಂಗಳೂರಿನಲ್ಲಿ ಇದೀಗ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ 46 ರುಪಾಯಿ ಏರಿಕೆಯಾಗಿ, 3,198 ರುಪಾಯಿಗೆ ತಲುಪಿದೆ. ಸಿಲಿಂಡರ್ ವಿತರಣೆಗೆ ನೀಡುವ ಟಿಪ್ಸ್ ಸೇರಿದರೆ ಈ ದರ ಕನಿಷ್ಠ 3250 ದಾಟಲಿದೆ. ಕಳೆದ ತಿಂಗಳು ಕಮರ್ಷಿಯಲ್ ಸಿಲಿಂಡರ್ ದರ 991 ರು ಏರಿಕೆ ಕಂಡು 3,152 ರೂ. ತಲುಪಿತ್ತು.

ಏರುಗತಿ

- ಮಾರ್ಚ್ 7ರಿಂದ ಜೂನ್ 1ರವರೆಗೆ ಒಟ್ಟು ಏರಿಕೆ ₹1,356
- ಅತಿ ದೊಡ್ಡ ಏರಿಕೆ: ಮೇ 1ರಂದು ₹993
- ಇತ್ತೀಚಿನ ಏರಿಕೆ: ಜೂನ್ 1ರಂದು ₹46
- ಪ್ರಸ್ತುತ ಬೆಂಗಳೂರಿನ ವಾಣಿಜ್ಯ ಸಿಲಿಂಡರ್ ದರ: ₹3,198

ಕೊಳ್ಳಿ ಇಟ್ಟ ಕೊಲ್ಲಿ ಯುದ್ಧ

ಮಾರ್ಚ್ 7ಕ್ಕೂ ಮೊದಲು	₹1,842
ಮಾರ್ಚ್ 7 (+₹115)	₹1,957
ಏಪ್ರಿಲ್ 2 (+₹202)	₹2,159
ಮೇ 1 (+₹993)	₹3,152
ಜೂನ್ 1 (+₹46)	₹3,198

ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು 42 ರುಪಾಯಿ ಹೆಚ್ಚಿಸಲಾಗಿದ್ದು, 3,113.50 ರುಪಾಯಿಗೆ ತಲುಪಿದೆ. ಕೋಲ್ಕತ್ತಾದಲ್ಲಿ ದರ 53.50 ರುಪಾಯಿ ಏರಿಕೆಯಾಗಿ 3,255.50 ರುಪಾಯಿಗೆ ತಲುಪಿದೆ. ಇದೇ ವೇಳೆ 5 ಕೆಜಿ ಫ್ರೀ ಟ್ರೇಡ್ ಎಲ್‌ಪಿಜಿ (ಎಫ್‌ಟಿಎಲ್) ಸಿಲಿಂಡರ್‌ಗಳ ಬೆಲೆಯನ್ನೂ 11 ರು.ಗಳಷ್ಟು ಏರಿಸಲಾಗಿದೆ. ಪರಿಷ್ಕರಣೆಯ ನಂತರ, ದೆಹಲಿಯಲ್ಲಿ 5 ಕೆಜಿ ಎಫ್‌ಟಿಎಲ್ ಸಿಲಿಂಡರ್‌ನ ಚಿಲ್ಲರೆ ಬೆಲೆ ಈಗ 821.50 ರು. ಆಗಿದೆ.

→ 4

ಅಮೆರಿಕ ದಾಳಿ: ಇರಾನ್ ರೇಡಾರ್ ಕೇಂದ್ರ ಧ್ವಂಸ

ವಾಷಿಂಗ್ಟನ್: ಶಾಂತಿ ಮಾತುಕತೆ ಪ್ರಸ್ತಾಪಗಳ ನಡುವೆಯೇ ಅಮೆರಿಕ ಇರಾನ್‌ನ ರಾಡಾರ್ ಮತ್ತು ಡ್ರೋನ್ ನಿಯಂತ್ರಣ ಕೇಂದ್ರಗಳ ಮೇಲೆ ದಾಳಿ ನಡೆಸಿದೆ. ಇರಾನ್‌ನ ಗೊರುಕ್ ಮತ್ತು ಕ್ವೆಶ್ಮ್ ದ್ವೀಪಗಳಲ್ಲಿರುವ ಕೇಂದ್ರಗಳನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ (ಸೆಂಟ್ಕಾಮ್) ತಿಳಿಸಿದೆ. ಅಂತರರಾಷ್ಟ್ರೀಯ ಜಲಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಮೆರಿಕದ ಎಂಕ್ಯೂ-1 ಡ್ರೋನ್ ಅನ್ನು ಇರಾನ್ ಹೊಡೆದುರುಳಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಈ ದಾಳಿ ನಡೆಸಲಾಗಿದೆ ಎಂದು ಕೇಂದ್ರ ಕಮಾಂಡ್ ಹೇಳಿದೆ. ದಾಳಿಯಲ್ಲಿ ಇರಾನ್‌ನ ವಾಯು ರಕ್ಷಣಾ ವ್ಯವಸ್ಥೆ, ಡ್ರೋನ್ ನಿಯಂತ್ರಣ ಕೇಂದ್ರ ಹಾಗೂ ಎರಡು ದಾಳಿ ನಡೆಸುವ ಡ್ರೋನ್‌ಗಳನ್ನು ನಾಶಪಡಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ಯಾವುದೇ ಅಮೆರಿಕ ಸೇನಾ ಸಿಬ್ಬಂದಿಗೆ ಹಾನಿಯಾಗಿಲ್ಲ ಎಂದು ತಿಳಿಸಲಾಗಿದೆ.

ಭೀಮಾತೀರದ ಹಂತಕರು ಕಸ್ಟಡಿಗೆ

ವಿಜಯಪುರ: ಭೀಮಾತೀರದಲ್ಲಿ ಆರು ಜನರ ಸಾಮೂಹಿಕ ಹತ್ಯೆ ಪ್ರಕರಣದಲ್ಲಿ ಬಂಧಿತ 12 ಜನ ಆರೋಪಿಗಳನ್ನು ನ್ಯಾಯಾಲಯ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಮೇ 29 ರಂದು ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದ ಜಮೀನಿನಲ್ಲಿ ಭೀಕರ ಹತ್ಯಾಕಾಂಡ ನಡೆದಿತ್ತು. ಡಬಲ್ ಬ್ಯಾರಲ್ ಗನ್‌ನಿಂದ ಗುಂಡು, ಮಚ್ಚುಗಳಿಂದ ಕತ್ತರಿಸಿ 6 ಜನರ ಹತ್ಯೆ ಮಾಡಲಾಗಿತ್ತು. ಆರೋಪಿಗಳನ್ನು ಬಂಧಿಸಿದ್ದ ಚಡಚಣ ಪೊಲೀಸರು ಸೋಮವಾರ ಇಂಡಿ ಕೋರ್ಟ್‌ಗೆ ಹಾಜರುಪಡಿಸಿದ್ದರು. ಈ ಹತ್ಯೆ ಗೋವಿಂದಪುರ ಗ್ರಾಮದ ಅಪ್ಪುಗೌಡ ಪಾಟೀಲ್ ಕುಟುಂಬ ಸದಸ್ಯರಿಂದ ನಡೆದಿದೆ ಎಂದು ನಿರಾಳೆ ಕುಟುಂಬಸ್ಥರು ದೂರು ದಾಖಲಿಸಿದ್ದರು. ಸದ್ಯ ಹತ್ಯಾಕಾಂಡ ಸಂಬಂಧ 12 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಚಡಚಣದಲ್ಲಿ ನಿರಂತರವಾಗಿ ಅಪರಾಧ ಕೃತ್ಯಗಳು ನಡೆಯುತ್ತಿರುವುದು ಪೊಲೀಸ್ ಇಲಾಖೆಗೆ ಸವಾಲಾಗಿದೆ.

ಒಬಿಸಿ ಮತ ಸೆಳೆಯಲು ಪಿ.ಸಿ.ಮೋಹನ್‌ಗೆ ಕೇಂದ್ರ ಸಚಿವ ಸ್ಥಾನ?

ಬಿಜೆಪಿಯಲ್ಲಿ ಯಥಾಸ್ಥಿತಿ ಅಶೋಕ್ ಸ್ಥಾನಕ್ಕಿಲ್ಲ ಕುತ್ತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಯಾಗುತ್ತಿದ್ದಂತೆ, ಇದಕ್ಕೆ ಸರಿ ಹೊಂದುವ ರೀತಿಯಲ್ಲಿ ಬಿಜೆಪಿಯೂ ಕೆಲ ಆಯಕಟ್ಟಿನ ಹುದ್ದೆ ಗಳಲ್ಲಿ ಬದಲಾವಣೆ ಮಾಡಲಿದೆ ಎನ್ನುವ ಮಾತುಗಳು ಕೇಳಿ ಬಂದಿತ್ತು. ಜಾತಿ ಲೆಕ್ಕಾಚಾರ, ಜಿಬಿಎ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಸದ್ಯ ಯಥಾಸ್ಥಿತಿ ಕಾಪಾಡಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

ಪ್ರತಿಪಕ್ಷ ನಾಯಕ ಸ್ಥಾನಕ್ಕೆ ಅಶೋಕ್ ಬದಲಿಗೆ ಹಿಂದುಳಿದ ವರ್ಗದ ಒಬ್ಬರನ್ನು ಪ್ರತಿಪಕ್ಷ ಸ್ಥಾನದಲ್ಲಿ ಕೂರಿಸುವ ಮೂಲಕ ಒಬಿಸಿ ಮತಗಳನ್ನು ಸೆಳೆಯುವ ಆಲೋಚನೆಯನ್ನು ಬಿಜೆಪಿ ಮಾಡಿದೆ ಎನ್ನಲಾಗಿತ್ತು. ಆದರೆ ಕೆಲವೇ ತಿಂಗಳಲ್ಲಿ ಜಿಬಿಎ ಚುನಾವಣೆ ಎದುರಾಗಲಿರುವುದರಿಂದ ಪ್ರತಿಪಕ್ಷ ಸ್ಥಾನದಲ್ಲಿಯೇ ಅಶೋಕ್ ಅವರನ್ನು ಮುಂದುವರಿಸುವ ಜತೆಗೆ ಕೇಂದ್ರ ಸಚಿವ ಸಂಪುಟ ಪುನಾರಚನೆಯ ಸಮಯದಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್ ಅವರನ್ನು ಕೇಂದ್ರ ಸಚಿವರನ್ನಾಗಿ ಮಾಡುವ ಮೂಲಕ ಹಿಂದುಳಿದ ವರ್ಗಗಳ ಮತಗಳನ್ನು ಸೆಳೆಯುವ ಲೆಕ್ಕಾಚಾರದಲ್ಲಿ ಬಿಜೆಪಿ ನಾಯಕರಿದ್ದಾರೆ.



ಈ ರೀತಿ ಮಾಡುವುದರಿಂದ ಬೆಂಗಳೂರಿನ ಅಶೋಕ್ ಹಾಗೂ ಪಿ.ಸಿ.ಮೋಹನ್ ಇಬ್ಬರಿಗೂ ಪ್ರಮುಖ ಸ್ಥಾನ ಸಿಗುವ ಜತೆಗೆ ಒಕ್ಕಲಿಗ ಹಾಗೂ ಒಬಿಸಿ ಮತಗಳನ್ನು ಸೆಳೆಯುವ ಆಲೋಚನೆಯಲ್ಲಿ ಬಿಜೆಪಿ ನಾಯಕರಿದ್ದಾರೆ.

→ 4

ವಿಜಯ್ ಮಾದರಿ ಹೊಸ ರಾಜಕೀಯ ಪಕ್ಷ ಸ್ಥಾಪನೆಗೆ ಚಿಂತನೆ

ಶೀಘ್ರದಲ್ಲೇ ಬಿಜೆಪಿಗೆ ಅಣ್ಣಾಮಲೈ ಗುಡ್‌ಬೈ?

ಚೆನ್ನೈ: ತಮಿಳುನಾಡು ಬಿಜೆಪಿಯ ಮಾಜಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಬಿಜೆಪಿ ತೊರೆದು 'ಹೊಸ ಆಂದೋಲನ' ಆರಂಭಿಸಲಿದ್ದಾರೆ ಎಂಬ ವರದಿಗಳು ಬಿಜೆಪಿಯಲ್ಲಿ ಸಂಚಲನ ಸೃಷ್ಟಿಸಿವೆ. ಈಗಾಗಲೇ 'ನಾವು ನಾಯಕರು' ಎಂಬ ಸಂಘಟನೆ ಹೊಂದಿರುವ ಅವರು, ತಮ್ಮದೇ ಆದ ರಾಜಕೀಯ ಹಾದಿ ಹಿಡಿಯುವ ಸಾಧ್ಯತೆಗಳಿವೆ.

ಅಣ್ಣಾಮಲೈ ಅವರನ್ನು ಆಂಧ್ರಪ್ರದೇಶ ವಿಧಾನಸಭೆ ಮೂಲಕ ರಾಜ್ಯಸಭೆಗೆ ಕಳುಹಿಸಲು ಪಕ್ಷ ಆಸಕ್ತಿ ತೋರಿಸಿತ್ತು. ಈ ನಡುವೆಯೇ ತಮಿಳುನಾಡಿನಲ್ಲಿ ಪಕ್ಷದ ಬೆಳವಣಿಗೆಗಳ ಬಗ್ಗೆ ಬೇಸರಗೊಂಡಿರುವ ಅಣ್ಣಾಮಲೈ ಅವರು ಬಿಜೆಪಿ ತೊರೆದು ರಾಜ್ಯದಲ್ಲಿ ಹೊಸ 'ಆಂದೋಲನ' ಆರಂಭಿಸಲಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಚಿದಂಬರಂ ಪುತ್ರ ಕಾರ್ತಿ ಚಿದಂಬರಂ ತಮಿಳುನಾಡಿನಲ್ಲಿ ಮತ್ತೊಂದು ರಾಜಕೀಯ ಪಕ್ಷ ಉದಯಿಸಲಿದೆ ಎಂದು ಎಕ್ಸ್ ಪೋಸ್ಟ್ ಮಾಡಿರುವುದು ಈ ಬೆಳವಣಿಗೆಗಳಿಗೆ ಪುಷ್ಟಿ ನೀಡಿದೆ.

'ನಾವು ನಾಯಕರು' ಎನ್‌ಜಿಒ: ಅಣ್ಣಾಮಲೈ ಈಗಾಗಲೇ 'ನಾವು ನಾಯಕರು' ಎಂಬ ಸ್ವಯಂಸೇವಾ ಸಂಘಟನೆಯನ್ನು ಹೊಂದಿದ್ದಾರೆ. ಮುಂದಿನ ಆರು ತಿಂಗಳವರೆಗೆ ರಾಜಕೀಯ ಪಕ್ಷವನ್ನು ಪ್ರಾರಂಭಿಸುವ ಯಾವುದೇ ಯೋಜನೆ ಇಲ್ಲ. ಆದರೆ ಸಮಾನ ಮನಸ್ಕ ಜನರನ್ನು ಸೇರಿಸಿಕೊಳ್ಳುವುದು, ಬಲವಾದ ಸ್ವಯಂಸೇವಕ ನೆಲೆಯನ್ನು ನಿರ್ಮಿಸುವುದು ಮತ್ತು ಅವರನ್ನು ರಾಜಕೀಯವಾಗಿ ಬೆಳೆಸುವುದು ಅವರ ಗುರಿಯಾಗಿದೆ ಎಂದು ಮೂಲಗಳು ತಿಳಿಸಿವೆ.

→ 4

ಜೂನ್ 6ರಂದು ಸಂಸ್ಥಾಪಕ ದೀಪ್ಕೆ ಭಾರತಕ್ಕೆ ವಾಪಸ್

ಬೀದಿಗಿಳಿದು ಹೋರಾಟಕ್ಕೆ ಜಿರಳೆ ಪಾರ್ಟಿ ನಿರ್ಧಾರ

ದೆಹಲಿ: ದೇಶಾದ್ಯಂತ ಸಂಚಲನ ಮೂಡಿಸಿರುವ ಕಾಕ್ರೋಚ್ ಜನತಾ ಪಾರ್ಟಿ (ಇಒಕೆ) ಆನ್‌ಲೈನ್ ಆಂದೋಲನದ ರೂವಾರಿ ಅಭಿಜೀತ್ ದೀಪ್ಕೆ ಭಾರತಕ್ಕೆ ಮರಳಲು ನಿರ್ಧರಿಸಿದ್ದು, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಜಂತರ್ ಮಂಥರ್‌ನಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಇದರೊಂದಿಗೆ ಜೆನ್ ಜಿ ಸಮೂಹದ ಗಮನ ಸೆಳೆದಿರುವ 'ಜಿರಳೆ ಪಕ್ಷ'ದ ಆಂದೋಲನ ಹೊಸ ರೂಪ ಪಡೆಯುವ ಸಾಧ್ಯತೆ ಇದೆ.

ಭಾರತಕ್ಕೆ ಮರಳುವ ವಿಷಯವನ್ನು ದೀಪ್ಕೆ ಎಕ್ಸ್ ಪೋಸ್ಟ್ ಮೂಲಕ ಹಂಚಿಕೊಂಡಿದ್ದಾರೆ. 'ಕಳೆದ ಕೆಲವು ವಾರಗಳಿಂದ ಅಮೆರಿಕದಲ್ಲಿ ನನಗೆ ಉದ್ಯೋಗವಕಾಶಗಳು ಹುಡುಕಿಕೊಂಡು ಬರುತ್ತಿವೆ. ಆದರೆ ನಾನು ಅವುಗಳನ್ನು ತಿರಸ್ಕರಿಸಿದ್ದೇನೆ. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಭಾರತಕ್ಕಾಗಿ ಏನಾದರೂ ಮಾಡಲು ಬಯಸುತ್ತೇನೆ' ಎಂದು ದೀಪ್ಕೆ ಹೇಳಿದ್ದಾರೆ.

'ಜೂನ್ 6ರ ಶನಿವಾರ ಬೆಳಗ್ಗೆ ದೆಹಲಿಗೆ ಆಗಮಿಸುತ್ತೇನೆ. ನೇರವಾಗಿ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಹೋಗಿ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ಜಂತರ್ ಮಂತರ್‌ನಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಲು ಅನುಮತಿ ಕೋರುತ್ತೇನೆ. ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ಶಾಂತಿಯುತವಾಗಿ ಧ್ವನಿ ಎತ್ತುವ ಹಕ್ಕನ್ನು ನೀಡುತ್ತದೆ' ಎಂದು ದೀಪ್ಕೆ ಹೇಳಿಕೊಂಡಿದ್ದಾರೆ.

ಆದರೆ ಕಾಕ್ರೋಚ್ ಜನತಾ ಪಾರ್ಟಿಯ ಆನ್‌ಲೈನ್ ಆಂದೋಲನದ ಬಗ್ಗೆ ಅನೇಕ ಸಂಶಯಗಳು ಮೂಡಿರುವ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರು ದೀಪ್ಕೆಯನ್ನು ವಿಮಾನ ನಿಲ್ದಾಣದಲ್ಲಿ ಬಂಧಿಸುವ ಸಾಧ್ಯತೆ ಇದೆ. ನ್ಯಾಯಾಂಗ ವಿರುದ್ಧದ ಅವಹೇಳನಕಾರಿ ಹೇಳಿಕೆ ಸಂಬಂಧವೂ ದೀಪ್ಕೆ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಾಗಿದೆ.

ಕಳೆದ ವರ್ಷದ ಅನಾಹುತದಿಂದ ಎಚ್ಚೆತ್ತ ಪೊಲೀಸ್ ಇಲಾಖೆ, ತವರು ನೆಲ ಬೆಂಗಳೂರಿನಲ್ಲಿ ಸಂಭ್ರಮಾಚರಣೆಗೆ ಬ್ರೇಕ್

ಕಪ್ ಗೆದ್ದರೂ ಇಲ್ಲ ವಿಜಯೋತ್ಸವ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಯಲ್ ಚಾಲೆಂಜರ್ಸ್ ಬೆಂಗಳೂರು ಸತತ ಎರಡನೇ ಬಾರಿಗೆ ಐಪಿಎಲ್ ಟ್ರೋಫಿಯನ್ನು ಎತ್ತಿಹಿಡಿದರೂ ತವರು ನೆಲದಲ್ಲಿ ಸಂಭ್ರಮಾಚರಣೆಗೆ ರಾಜ್ಯ ಪೊಲೀಸ್ ಇಲಾಖೆ ದಿಗ್ಬಂಧನ ಹೇರಿದೆ.

18 ವರ್ಷದ ಬಳಿಕ ಮೊದಲ ಬಾರಿಗೆ ಕಪ್ ಗೆದ್ದಾಗ ಸಂಭ್ರಮಾಚರಣೆ ವೇಳೆ 11 ಅಭಿಮಾನಿಗಳು ಕಾಲ್ತುಳಿತದಲ್ಲಿ ಮೃತಪಟ್ಟಿದ್ದರು. ಇದರಿಂದಾಗಿ ಆರ್‌ಸಿಬಿ ಪಂದ್ಯಾವಳಿಗಳಿಗೆ ಹತ್ತು ಹಲವು ನಿಯಮಾವಳಿಗಳನ್ನು ಹೇರಿತ್ತು. ಫೈನಲ್ ಪಂದ್ಯಾವಳಿಗೂ ಮೊದಲೇ ಸಂಭ್ರಮಾಚರಣೆಗೆ ಬ್ರೇಕ್ ಹಾಕಲಾಗಿತ್ತು. ಇದೀಗ ಯಾವುದೇ ರೀತಿಯ ವಿನ್ನಿಂಗ್ ಪರೇಡ್, ಕಾರ್ಯಕ್ರಮ ನಡೆಸದಂತೆ ಸೂಚನೆ ನೀಡಲಾಗಿದೆ. ಇದರೊಂದಿಗೆ ಕಳೆದ ವರ್ಷದಂತೆ ಆರ್‌ಸಿಬಿಯ ಇಡೀ ತಂಡವನ್ನು ಮೆರವಣಿಗೆಯಲ್ಲಿ ಅಭಿಮಾನಿಗಳು ಎದುರುಗೊಳ್ಳುವ ಸಾಧ್ಯತೆ ದೂರವಾಗಿದೆ.

ಆದರೆ ಕಠಿಣ ನಿಯಮದ ಹೊರತಾಗಿಯೂ ಬೆಂಗಳೂರಿನಲ್ಲಿ ಭಾನುವಾರ ರಾತ್ರಿ ಆರ್‌ಸಿಬಿ ವಿಜಯೋತ್ಸವದ ಸಂಭ್ರಮಾಚರಣೆ ಜೋರಾಗಿತ್ತು. ಅಭಿಮಾನಿಗಳು ಬೈಕ್ ರ್‍ಯಾಲಿ, ಆರ್‌ಸಿಬಿ ಪರ ಜಯಘೋಷಗಳನ್ನು ಕೂಗಿ ಹಾಗೂ ಹಲವೆಡೆ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದ್ದಾರೆ. ಕೆಲವೆಡೆ ಸಂಭ್ರಮದ ಮೇರೆ ಮೀರಿದ ಅಭಿಮಾನಿಗಳನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

→ 4

ಸಂತ್ರಸ್ತರಿಗೆ ಅರ್ಪಣೆ

ಇದೇ ವೇಳೆ ಸತತ ಎರಡನೇ ಬಾರಿಗೆ ಗೆದ್ದ 19ನೇ ಆವೃತ್ತಿಯ ಐಪಿಎಲ್ ಕಪ್ ಅನ್ನು ಕಳೆದ ವರ್ಷ ಕಾಲ್ತುಳಿತದಲ್ಲಿ ಮೃತಪಟ್ಟ ಸಂತ್ರಸ್ತರಿಗೆ ಅರ್ಪಿಸಲಾಗುವುದು ಎಂದು ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲೂ ಈ ಕಪ್ ಸಂತ್ರಸ್ತರಿಗೆ ಅರ್ಪಣೆಯಾಗಲಿ ಎಂಬ ಆಶಯ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ನಾಯಕ ಪಾಟೀದಾರ್ ಈ ಹೇಳಿಕೆ ನೀಡಿದ್ದಾರೆ.

75 ವಾಹನಗಳು ಜಪ್ತಿ

ಬೆಂಗಳೂರು ನಗರ ಪೊಲೀಸ್ ಆಯುಕ್ತರು ಹಾಗೂ ಜಂಟಿ ಪೊಲೀಸ್ ಆಯುಕ್ತರ (ಪಶ್ಚಿಮ) ಮಾರ್ಗದರ್ಶನದಲ್ಲಿ, ಉತ್ತರ ವಿಭಾಗದ ಡಿಸಿಪಿ ನೇತೃತ್ವದಲ್ಲಿ ಮೂರು ಉಪ-ವಿಭಾಗಗಳ ಎಸಿಪಿಗಳು, 13 ಠಾಣೆಗಳ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿಗಳನ್ನೊಳಗೊಂಡ ವಿಶೇಷ ತಂಡ ಈ ಯಶಸ್ವಿ ಕಾರ್ಯಾಚರಣೆ ನಡೆಸಿದ್ದು, ನಿಯಮ ಉಲ್ಲಂಘಿಸಿದ ಆರೋಪದಡಿ ಪೊಲೀಸರು ಒಟ್ಟು 71 ದ್ವಿಚಕ್ರ ವಾಹನಗಳು, 3 ಆಟೋರಿಕ್ಷಾಗಳು ಹಾಗೂ 1 ಕಾರು ಸೇರಿದಂತೆ ಒಟ್ಟು 75 ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ವಶಪಡಿಸಿಕೊಂಡ ವಾಹನಗಳ ಸವಾರರು ಮತ್ತು ಚಾಲಕರ ವಿರುದ್ಧ ಮುಂದಿನ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೊಂಪಾದ ಪುಟಗಳು

ಹೋರಾಟದ ಹಾದಿಯಲ್ಲೇ ಬಂದ ಡಿಕೆ ಮುಂದಿದೆ ಸವಾಲು
ಅಶ್ವತ್ಥಕಟ್ಟೆ — ರಂಜಿತ್ ಎಚ್. ಅಶ್ವತ್ಥ 6

ಕೇಳಿದ್ದೆಲ್ಲಾ ಭಗವಂತ ನೀಡುತ್ತಾನೆ ಎಂದೇನಿಲ್ಲ!
ವಿಶ್ವರಂಗ — ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನಿಮ್ಮ ಹವ್ಯಾಸಗಳು ನಿಮಗೆ ಶಾಪವಾಗಬಹುದು, ಇಲ್ಲವೇ ವರದಾನವೂ ಆಗಬಹುದು. ಆದ್ದರಿಂದ ಎಂಥ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು

ವಕ್ರತುಂಡೋಕ್ತಿ

ಮದುವೆ ಅಂದ್ರೆ, ಫೋನಿನ ಚಾರ್ಜಿಂಗ್ ಇದ್ದಂತೆ. ಮನೆಯಿಂದ ಹೊರಡುವಾಗ ಶೇ.100 ಉತ್ಸಾಹ ಇರುತ್ತದೆ, ಸಂಜೆ ಮನೆಗೆ ವಾಪಸ್ ಬರುವಾಗ ಲೋ ಬ್ಯಾಟರಿ ವಾರ್ನಿಂಗ್ ಬರ್ತಿರುತ್ತದೆ.

ಮೇಲ್ಮನೆಗೆ ಕಟೀಲ್ ಹೆಸರು ಶಿಫಾರಸು

ಬೆಂಗಳೂರು: ಕರ್ನಾಟಕ ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸದಸ್ಯ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಅಧಿಸೂಚನೆ ಪ್ರಕಟಿಸಲಾಗಿದ್ದು, ಬಿಜೆಪಿಯಿಂದ ಮಾಜಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿದಂತೆ ಐವರು ಹೆಸರನ್ನು ಹೈಕಮಾಂಡ್‌ಗೆ ಶಿಫಾರಸು ಮಾಡಲಾಗಿದೆ. ನಳಿನ್ ಕುಮಾರ್ ಕಟೀಲ್, ಲಿಂಗರಾಜ್ ಪಾಟೀಲ್, ಎನ್. ಮಹೇಶ್, ರಘು ಕೌಟಿಲ್ಯ ಹಾಗೂ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಹೆಸರು ಶಿಫಾರಸು ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಜೂ.1 ರಿಂದ ಜೂನ್ 8ರ ವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ನೀಡಲಾಗಿದೆ.

ಶಾಸಕ ಮುನಿರತ್ನ ಆರೋಪ ಮುಕ್ತ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ, ಎಸ್‌ಟಿ) ದೌರ್ಜನ್ಯ ತಡೆ ಕಾಯಿದೆಯಡಿ ದಾಖಲಿಸಲಾಗಿದ್ದ ಪ್ರಕರಣದಲ್ಲಿ ಶಾಸಕ ಮುನಿರತ್ನ ಅವರನ್ನು ಆರೋಪಮುಕ್ತಗೊಳಿಸಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ. ಪ್ರಕರಣ ಸಂಬಂಧ ದಾಖಲಾಗಿದ್ದ ಆರೋಪಪಟ್ಟಿ ರದ್ದು ಕೋರಿ ಮುನಿರತ್ನ ಅರ್ಜಿ ಸಲ್ಲಿಸಿದ್ದರು.

ಫನ್‌ತರಂಗ

- ರಘುಪತಿ ಶೃಂಗೇರಿ -

'ನನಗೆ ಹೂವಿನ ಹಾರ ಹಾಕಬೇಡಿ ಅಲರ್ಜಿಯಾಗುತ್ತೆ' – ಡಿಕೆಶಿ

ಸಮಾಚಾರ ಸಣ್ಣದಲ್ಲ

ವೃಕ್ಷಾರೋಪಣ ಅಭಿಯಾನ ಜೂ.5 ಕ್ಕೆ

ಶಿರಸಿ: ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯು ಈಗಾಗಲೇ ಪ್ರಕಟಿಸಿರುವಂತೆ, ನದಿ ತೀರಗಳಲ್ಲಿ ವ್ಯಾಪಕ ವೃಕ್ಷಾರೋಪಣ ಕಾರ್ಯಕ್ಕೆಗೊಳ್ಳಲು ಜೂ.5ರ ಶುಕ್ರವಾರ ಬೃಹತ್ ಹಸಿರು ಸಮಾರಂಭವನ್ನು ಹಮ್ಮಿಕೊಂ ಡಿದೆ. ಜೂ.5ರ ಮಧ್ಯಾಹ್ನ 4 ಗಂಟೆಗೆ ಸೋಂದಾ ಯಾತ್ರಿ ನಿವಾಸದ ಬಳಿ ಇರುವ ಶಾಲ್ಮಲಾ ನದಿ ತೀರದಲ್ಲಿ 'ಪುಟ್ಟ ಪವಿತ್ರ ವನ' ನಿರ್ಮಾಣ ಮಾಡುವ ಮೂಲಕ ಈ ಬೃಹತ್ ಪರಿಸರ ಜಾಗೃತಿ ಅಭಿಯಾನಕ್ಕೆ ಪೂಜ್ಯ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮೀ ಜಿಯವರು ಅಧಿಕೃತ ಚಾಲನೆ ನೀಡಲಿದ್ದಾರೆ. ಯಲ್ಲಾಪುರ, ಶಿರಸಿ ಹಾಗೂ ಸಿದ್ದಾಪುರ ತಾಲೂಕುಗಳ ನದಿ ತೀರಗಳಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರ ಜಾಗೃತಿ ಮೂಡಿಸುವ ವಿಶೇಷ ಯೋಜನೆಯನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಹಸಿರು ಸಮಾರಂಭಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಹಾಗೂ ಶಾಸಕರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿದೆ. ಇವರೊಂದಿಗೆ ಜಿಲ್ಲಾ ಅರಣ್ಯ ಅಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ತಾಲೂಕು ಪಂಚಾಯತ್ ಅಧಿಕಾರಿಗಳಿಗೂ ಆಹ್ವಾನ ನೀಡಲಾಗಿದೆ. ಪರಿಸರ ಸಂರಕ್ಷಣೆಯ ಈ ಮಹತ್ಕಾರ್ಯದಲ್ಲಿ ವಿವಿಧ ಪಂಚಾಯತ್‌ಗಳು, ಶೈಕ್ಷಣಿಕ ಸಂಸ್ಥೆಗಳು, ಮಾತೃ ಮಂಡಳಿಗಳು, ರೈತರು, ವನವಾಸಿಗಳು ಹಾಗೂ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವಂತೆ ಕೋರಲಾಗಿದೆ. ಪ್ರಕೃತಿ ಹಾಗೂ ನದಿ ಮೂಲಗಳ ಉಳಿವಿಗಾಗಿ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಸ್ವರ್ಣವಲ್ಲೀ ಶ್ರೀಗಳು ಈಗಾಗಲೇ ಜೂ. 5ರಂದು ಸೋಂದಾ ಶಾಲ್ಮಲಾ ತೀರಕ್ಕೆ ಬನ್ನಿ ಎಂದು ಸಾರ್ವಜನಿಕರಿಗೆ ಕರೆ ನೀಡಿದ್ದಾರೆ ಎಂದು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯು ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಕಾರವಾರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ಮಧ್ಯಂತರ ಕಂಬ ಅಳವಡಿಕೆ ಮತ್ತು ಲೈನ್ ನಿರ್ವಹಣಾ ಕಾಮಗಾರಿ ಇರುವುದರಿಂದ ಜೂ.2 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಬೈತಕೋಲ್ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕಾರವಾರ ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಇಂಜಿನೀಯರ್ (ವಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈದ್ಯಕೀಯ ಪರೀಕ್ಷೆ: ದೇಶಕ್ಕೆ ಪ್ರೇಕ್ಷಾ ಪ್ರಥಮ

ಕುಮಟಾ: ದೇಶದ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳ ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನವದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಯೋಜಿಸಿದ್ದ 'INI SS-2026' ಪರೀಕ್ಷೆಯ ಡಿಎಂ (Neurology) ವಿಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಾ ಜಯಂತ ಪೈ ಅವರು ರಾಷ್ಟ್ರಮಟ್ಟದಲ್ಲಿ ಪ್ರಥಮ ರ‍್ಯಾಂಕ್ ಗಳಿಸಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ದೇಶಾದ್ಯಂತ ವಿವಿಧ ಕೇಂದ್ರಗಳಲ್ಲಿ ಕಂಪ್ಯೂಟರ್ ಆಧಾರಿತ ಲಿಖಿತ ಪರೀಕ್ಷೆ ಹಾಗೂ ಸಂದರ್ಶನ ಹೀಗೆ ಎರಡು ಹಂತಗಳಲ್ಲಿ ನಡೆದ ಪರೀಕ್ಷೆಯ ಒಟ್ಟಾರೆ ಫಲಿತಾಂಶದ ಆಧಾರದ ಮೇಲೆ ಈ ರ‍್ಯಾಂಕ್ ಪ್ರಕಟಿಸ ಲಾಗಿದೆ. ಪ್ರತಿಭಾವಂತೆಯಾದ ಪ್ರೇಕ್ಷಾ ಪೈ ಅವರು ಈಗಾಗಲೇ ಕೇಂದ್ರ ಸರಕಾರದ ಸಂಪೂರ್ಣ ವಿದ್ಯಾರ್ಥಿವೇತನದೊಂದಿಗೆ ಎಂಬಿಬಿಎಸ್ ಹಾಗೂ ಎಂಡಿ ಪದವಿಗಳನ್ನು ಉನ್ನತ ಶ್ರೇಣಿಯಲ್ಲಿ ಪೂರೈಸಿದ್ದಾರೆ. ಈ ಹಿಂದೆ 2021-2022ರ ಶೈಕ್ಷಣಿಕ ಸಾಲಿನಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಎಂಬಿಬಿಎಸ್‌ನಲ್ಲಿ ಪ್ರಥಮ ರ‍್ಯಾಂಕ್ ಪಡೆದಿದ್ದ ಇವರು, ಬರೋಬ್ಬರಿ 12 ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಳ್ಳುವ ಮೂಲಕ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಇತಿಹಾಸದಲ್ಲೇ ಹೊಸ ಮೈಲಿಗಲ್ಲು ಸ್ಥಾಪಿಸಿದ್ದರು. ಸಾಧಕಿ ಪ್ರೇಕ್ಷಾ ಪೈ ಅವರು ಗೋಕರ್ಣ ಮೂಲದ ಮಾರುತಿ ಜಿ. ಪೈ ಹಾಗೂ ಶಾಂತಾ ಎಂ. ಪೈ ಅವರ ಮೊಮ್ಮಗಳಾಗಿದ್ದು, ಜಯಂತ ಮಾರುತಿ ಪೈ ಹಾಗೂ ಧಾರವಾಡದ ಜೆ.ಎಸ್.ಎಸ್. ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಭಾರತಿ ವೆಂಕಟೇಶ ಶಾನಭಾಗ ದಂಪತಿಯ ಸುಪುತ್ರಿಯಾಗಿದ್ದಾರೆ. ಇವರ ಈ ಅತ್ಯುನ್ನತ ಸಾಧನೆಗೆ ಕುಟುಂಬದ ಸದಸ್ಯರು, ಅವರು ಶಿಕ್ಷಣ ಪಡೆದ ವೈದ್ಯಕೀಯ ಸಂಸ್ಥೆಯ ಆಡಳಿತ ಮಂಡಳಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ತೀವ್ರ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.



ವಿವಿಧೆಡೆ ವಿದ್ಯುತ್ ಪೂರೈಕೆ ವ್ಯತ್ಯಯ

ಕಾರವಾರ: ಹೆಸ್ಕಾಂ ಹೊನ್ನಾವರ ವಿಭಾಗ ವ್ಯಾಪ್ತಿಯಲ್ಲಿ 110ಕೆವಿ ವಿದ್ಯುತ್ ಉಪಕೇಂದ್ರ ಕುಮಟಾ, ಹೊನ್ನಾವರ ಮತ್ತು ಮುರ್ಡೇಶ್ವರ ಉಪಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಇಟ್ಟುಕೊಂಡಿರುವುದರಿಂದ ಜೂ.4 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕುಮಟಾ, ಹೊನ್ನಾವರ ಹಾಗೂ ಭಟ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಹೊನ್ನಾವರ ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರ್ (ವಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಮಲ್ಲಿಕಾರ್ಜುನ ಖರ್ಗೆ }ಎಐಸಿಸಿ ಅಧ್ಯಕ್ಷ

ಕೇಂದ್ರದ ಬಿಜೆಪಿ ಸರಕಾರವು ಬರೀ ಮಾತಿನ ಮಲ್ಲನ ಸರಕಾರವಾಗಿದ್ದು, ದೇಶದ ಜನರ ಬಗ್ಗೆ ಅದಕ್ಕೆ ಯಾವುದೇ ಕಾಳಜಿ ಇಲ್ಲ. ದಿನೇ ದಿನೇ ಬೆಲೆ ಏರಿಕೆ ಮಾಡುವ ಮೂಲಕ ಕೇಂದ್ರ ಸರಕಾರ ಸಾರ್ವಜನಿಕರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ.

ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ | ಜಿಪಂ ಸಿಇಒ ಡಾ.ದಿಲೀಷ್ ಶಶಿ ಹೇಳಿಕೆ

ಗುಣಮಟ್ಟದ ಶಿಕ್ಷಣ ತಲುಪಲಿ

ಕಾರವಾರ: ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಪಾತ್ರ ಮಹತ್ತರವಾಗಿದ್ದು, ಜಿಲ್ಲೆಯ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ತಲುಪಬೇಕು ಮತ್ತು ಶಾಲೆಗಳು ಕಲಿಕಾ ಸ್ನೇಹಿ ವಾತಾವರಣವನ್ನು ನಿರ್ಮಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ದಿಲೀಷ್ ಶಶಿ ಹೇಳಿದರು.

ಅವರು ಸೋಮವಾರ ಅಮದಳ್ಳಿಯ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಜಿಲ್ಲಾ ಮಟ್ಟದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶಿಕ್ಷಣ ಎನ್ನುವುದು ಕೇವಲ ಅಕ್ಷರ ಕಲಿಯುವುದಲ್ಲ, ಅದು ಬದುಕನ್ನು ರೂಪಿಸುವ ಶಕ್ತಿ. ಉತ್ತರ ಕನ್ನಡ ಜಿಲ್ಲೆಯ ಪ್ರತಿಯೊಂದು ಹಳ್ಳಿಯ ಕೊನೆಯ ಮಗುವಿಗೂ ಉನ್ನತ ಮಟ್ಟದ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವುದು ಜಿಲ್ಲಾಡಳಿತದ ಪರಮೋಚ್ಚ ಗುರಿಯಾಗಿದೆ. ಶಿಕ್ಷಕರಿಂದ ಮಾತ್ರ ಬದಲಾವಣೆ ಸಾಧ್ಯವಿಲ್ಲ. ಪಾಲಕರು ಮತ್ತು ಶಾಲಾ ಅಭಿವೃದ್ಧಿ ಸಮಿತಿಗಳು ಸಕ್ರಿಯವಾಗಿ ತೊಡಗಿಸಿಕೊಂಡಾಗ ಮಾತ್ರ ಶಾಲೆಯ ಒಟ್ಟು ಅಭಿವೃದ್ಧಿ ಸಾಧ್ಯ ಎಂದರು.

ಶಿಕ್ಷಕರು ಪ್ರೀತಿ ಮತ್ತು ಕೌಶಲದ ಮೂಲಕ ಮಕ್ಕಳಲ್ಲಿ ಕಲ್ಪನಾ ಶಕ್ತಿಯನ್ನು ಜಾಗೃತಗೊಳಿಸಬೇಕು. ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರಿಗೆ ತರಬೇತಿ ನೀಡುವ ಬಗ್ಗೆ ಮುಂದಿನ ಹಂತದಲ್ಲಿ ಯೋಜನೆ ರೂಪಿಸಬೇಕು. ಸರಕಾರ ನೀಡುತ್ತಿರುವ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ-ಸಾಕ್ಸ್ ಹಾಗೂ ಪೌಷ್ಟಿಕ ಬಿಸಿಯೂಟದಂತಹ ಯೋಜನೆಗಳನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಂಡು ಉನ್ನತ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ಲತಾ ನಾಯಕ ಜಿಲ್ಲೆಯ ಶೈಕ್ಷಣಿಕ ಸಿದ್ಧತೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ದಾಖಲಾತಿ ಆಂದೋಲನ ಹಾಗೂ ಪ್ರಸಕ್ತ ವರ್ಷದ ಶೈಕ್ಷಣಿಕ ಯೋಜನೆಗಳ ರೂಪುರೇಷೆಗಳನ್ನು ಸಭೆಯ ಮುಂದಿಟ್ಟರು. ಈ ಶೈಕ್ಷಣಿಕ ವರ್ಷ ಉತ್ತಮ ಕಲಿಕೆ-ಉಜ್ವಲ ಭವಿಷ್ಯ ಆಶಯದಲ್ಲಿ ಯಡಿಯಲ್ಲಿ ಮಕ್ಕಳ ಕಲಿಕೆಗೆ ವಿಶೇಷ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ತಿಳಿಸಿದರು. ಜಿಲ್ಲೆಯಾದ್ಯಂತ ಗುಣಮಟ್ಟದ ಶಿಕ್ಷಣ ಮತ್ತು ಮೂಲಭೂತ ಸಾಕ್ಷರತೆ ಹಾಗೂ ಸಂಖ್ಯಾಜ್ಞಾನಕ್ಕೆ ವಿಶೇಷ ಒತ್ತು ನೀಡಲಾಗುವುದು. ಶಿಕ್ಷಕರು, ಪಾಲಕರು ಮತ್ತು ಸಮುದಾಯದ ಸಹಭಾಗಿತ್ವದಿಂದ ಮಾತ್ರ ಗುಣಮಟ್ಟದ ಶೈಕ್ಷಣಿಕ ಪ್ರಗತಿ ಸಾಧ್ಯ ಎಂದರು.

ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಶ ರಾಣೆ, ಎಸ್‌ಡಿಎಮ್‌ಸಿ ಅಧ್ಯಕ್ಷ ಉಮಾಕಾಂತ ಗೌಡ, ಶಿಕ್ಷಣಾಧಿಕಾರಿ ಡಾ. ಶುಭಾ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ಉಮೇಶ ನಾಯ್ಕ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ವಿ.ಟಿ. ನಾಯಕ, ಭಾಸ್ಕರ ಗಾಂವಕರ, ಕಲ್ಪನಾ ನಾಯಕ, ಶಾಂತಕುಮಾರ ಪಮ್ಮಾರ, ಗೀತಾ ಪೆಡ್ನೇಕರ, ಸುರೇಶ ಗಾಂವಕರ, ವಿಠೋಬ ನಾಯಕ ಹಾಜರಿದ್ದರು.

ಸ್ಥಳೀಯ ಗ್ರಾಮ ಪಂಚಾಯತ್ ಜನಪ್ರತಿನಿಧಿಗಳು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು, ಮುಖ್ಯೋಪಾಧ್ಯಾಯರು, ಸಹಶಿಕ್ಷಕ ವೃಂದ, ಪಾಲಕರು ಮತ್ತು ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ಸಾಂಕೇತಿಕವಾಗಿ ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಶಾಲೆಗೆ ಮೊದಲ ಮೂರು ಸ್ಥಾನ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಜ್ಞಾನದ ದೇಗುಲಕ್ಕೆ ಮರಳಿ ಹೆಜ್ಜೆ ಇಡುತ್ತಿರುವ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳಲು ಇಡೀ ಶಾಲಾ ಆವರಣವನ್ನು ಹಸಿರು ತಳಿರು-ತೋರಣಗಳು, ವರ್ಣರಂಜಿತ ಬಲೂನ್‌ಗಳು ಹಾಗೂ ಆಕರ್ಷಕ ರಂಗೋಲಿ ಕಲಾಕೃತಿಗಳಿಂದ ಶೃಂಗರಿಸಲಾಗಿತ್ತು. ಶಾಲೆಗೆ ಹೊಸದಾಗಿ ಆಗಮಿಸುತ್ತಿರುವ ಪುಟ್ಟ ಮಕ್ಕಳನ್ನು ಮತ್ತು ಇತರ ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯ ದ್ವಾರದಲ್ಲಿ ಸಾಂಪ್ರದಾಯಿಕವಾಗಿ ಮಂಗಳ ವಾದ್ಯಗಳೊಂದಿಗೆ, ಪುಷ್ಪ ನೀಡಿ ಹಾಗೂ ಪುಷ್ಪ ವೃಷ್ಠಿ ಮಾಡುವ ಮೂಲಕ ಅತ್ಯಂತ ಪ್ರೀತಿಯಿಂದ ಬರಮಾಡಿಕೊಳ್ಳಲಾಯಿತು. ಮಕ್ಕಳ ಮೊಗದಲ್ಲಿ ಉತ್ಸಾಹ ಎದ್ದು ಕಾಣುತ್ತಿತ್ತು.

ಎಂಇಎಸ್ ಶಾಲೆಯಲ್ಲಿ ಅದ್ದೂರಿ ಶಾಲಾ ಪ್ರಾರಂಭೋತ್ಸವ

ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಎಂಇಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವವನ್ನು ಆಚರಿಸಲಾಯಿತು.

ಶಿರಸಿ: ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಎಂಇಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸೋಮವಾರ ಪ್ರಸಕ್ತ ಸಾಲಿನ ಶಾಲಾ ಪ್ರಾರಂಭೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಹೊಸ ಆಶಯಗಳೊಂದಿಗೆ ಶಾಲೆಗೆ ಹೆಜ್ಜೆ ಇಟ್ಟ ವಿದ್ಯಾರ್ಥಿಗಳನ್ನು ಅತ್ಯಂತ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಎಂ.ಇ.ಎಸ್. ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಅಶೋಕ ಎನ್. ಭಟ್ಕಳ ಅವರು ಆಗಮಿಸಿದ್ದರು. ಶಾಲೆಯ ಪ್ರವೇಶದ್ವಾರದಲ್ಲಿ ವಿದ್ಯಾರ್ಥಿಗಳಿಗೆ ಪುಷ್ಪಗಳನ್ನು ನೀಡಿ ಸ್ವಾಗತಿಸಿದ ಅವರು, ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿ ಶುಭ ಹಾರೈಸಿದರು. ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಹೊಸ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳು ಶಿಸ್ತು ಹಾಗೂ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಉನ್ನತ ಗುರಿ ತಲುಪಬೇಕು ಎಂದು ಹಿತನುಡಿಗಳನ್ನಾಡಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯಿನಿ ಜ್ಯೋತಿ ಪೆಡ್ನೇಕರ್ ಹಾಗೂ ಸಮಸ್ತ ಶಿಕ್ಷಕ ವೃಂದದವರು ಉಪಸ್ಥಿತರಿದ್ದು ಪ್ರೀತಿಯಿಂದ ಮಕ್ಕಳನ್ನು ಶಾಲೆಯೊಳಗೆ ಬರಮಾಡಿಕೊಂಡರು.

ಸರಕಾರಿ ಶಾಲೆಗೂ ಬಂತು ಇಂಗ್ಲಿಷ್ ಮೀಡಿಯಂ

ಯಲ್ಲಾಪುರ: ಇಂದಿನ ವಿದ್ಯಾರ್ಥಿಗಳ ಮುಂದೆ ಬಹುದೊಡ್ಡ ಸವಾಲಿದೆ. ಸ್ಪರ್ಧಾತ್ಮಕ ಯುಗದಲ್ಲಿ ಕನಿಷ್ಟ ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಯ ಮೇಲೆ ಪ್ರಬುದ್ಧತೆ ಇದ್ದಾಗ ಮಾತ್ರ ನಾವು ಬಯಸಿದ ಉದ್ಯೋಗ ಪಡೆಯಲು ಸಾಧ್ಯ ಎಂದು ಮುಂಡಗೋಡ ಯಲ್ಲಾಪುರ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ ನುಡಿದರು.

ಅವರು, ಪಟ್ಟಣದ ಪಿ.ಎಂ.ಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಉರ್ದು ಹಾಗೂ ಆಂಗ್ಲ ಮಾಧ್ಯಮ ಶಾಲೆಯ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳಿಗೆ ಮುಖ್ಯವಾಗಿ ಭಾಷಾ ಜ್ಞಾನ ಮತ್ತು ಮೌಲ್ಯ ಶಿಕ್ಷಣದ ಅಗತ್ಯವಿದೆ. ನಗರದ ಮಕ್ಕಳಿಗೆ ಆಂಗ್ಲಮಾಧ್ಯಮ ಅಷ್ಟು ಕಷ್ಟವಲ್ಲ, ಪರಿಣಿತ ಶಿಕ್ಷಕರಿರುತ್ತಾರೆ.

ಹಾಗೆಯೇ ಗ್ರಾಮೀಣ ಭಾಗದಲ್ಲಿ ಶಾಲೆಗಳಿಗೆ ಮಕ್ಕಳೇ ಇಲ್ಲದೆ ಹಲವು ಶಾಲೆ ಮುಚ್ಚುವ ಹಂತಕ್ಕೆ ಹೋಗಿದೆ. ಇದನ್ನು ಅರಿತ ಸರಕಾರ ನಾಲ್ಕು ಐದು ಮಕ್ಕಳು ಇರುವ ಶಾಲೆ ಮಕ್ಕಳನ್ನು ಒಂದಡೆ ಸೇರಿಸಿ ಅವರಿಗೂ ಉತ್ತಮ ಶಿಕ್ಷಣ ಸಿಗಬೇಕು ಎಂದು ಗ್ರಾಮೀಣ ಶಾಲೆಗಳಲ್ಲೂ ಆಂಗ್ಲ ಮಾಧ್ಯಮ ಶಿಕ್ಷಣ ಜಾರಿಗೆ ತಂದಿದೆ. ಯಾವುದೇ ಕಾರಣಕ್ಕೂ ಬಡವರ ಮಕ್ಕಳು ಉತ್ತಮ ಶಿಕ್ಷಣದಿಂದ ವಂಚಿತರಾಗಬಾರದು. ಸರಕಾರಿ ಶಾಲೆಗಳು ಕೂಡ ಕಾಸಗಿ ಶಾಲೆಗೆ ಕಡಿಮೆಯಿಲ್ಲ. ಮಕ್ಕಳು ಇದರ ಪ್ರಯೋಜನ ಪಡೆದುಕೊಳ್ಳಿ. ಶಿಕ್ಷಣವು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಸಾಧನವಾಗಿದ್ದು, ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರೂ ಸಹಕರಿಸಬೇಕೆಂದರು.

ಈ ಸಂದರ್ಭದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ ರೇಖಾನಾಯಕ, ಶಾಲೆಯ ಶಿಕ್ಷಕ ವೃಂದ, ವಿದ್ಯಾರ್ಥಿಗಳು, ಪಾಲಕರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಹೂವು, ಸಿಹಿ,ಪೆನ್ನು ಕೊಟ್ಟು ಮಕ್ಕಳಿಗೆ ಸ್ವಾಗತ

ಯಲ್ಲಾಪುರ: ಮಂಚಿಕೇರಿಯ ಶ್ರೀ ರಾಜರಾಜೇಶ್ವರಿ ಪ್ರೌಢಶಾಲೆಯಲ್ಲಿ 2026- 27ನೇ ಶೈಕ್ಷಣಿಕ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವು ಅತ್ಯಂತ ಹರ್ಷಭರಿತ ಹಾಗೂ ಸಂಭ್ರಮದ ವಾತಾವರಣದಲ್ಲಿ ಜರುಗಿತು. ನೂತನ ಶೈಕ್ಷಣಿಕ ವರ್ಷದ ಮೊದಲ ದಿನದ ಅಂಗವಾಗಿ ಶಾಲೆಗೆ ಉತ್ಸಾಹದಿಂದ ಆಗಮಿಸಿದ ವಿದ್ಯಾರ್ಥಿಗಳನ್ನು ಹೂವು, ಸಿಹಿ ಹಾಗೂ ಪೆನ್ನುಗಳನ್ನು ನೀಡುವ ಮೂಲಕ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಇದೇ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷ ಗುರುಪ್ರಸಾದ್ ಭಟ್ಟ, ಉಪಾಧ್ಯಕ್ಷ ಎಂ.ಕೆ. ಭಟ್ಟ, ಕಾರ್ಯದರ್ಶಿ ನವೀನ್ ಹೆಗಡೆ ಹಾಗೂ ಆಡಳಿತ ಮಂಡಳಿ ಸದಸ್ಯರಾದ ರಾಮ ಹೆಗಡೆ ಕಬ್ಬಿನಗದ್ದೆ ಅವರು ಶಾಲೆಯ ಎಲ್ಲಾ ಶಿಕ್ಷಕರಿಗೆ ಪೆನ್ನುಗಳನ್ನು ನೀಡಿ ಗೌರವಿಸಿ, ನೂತನ ವರ್ಷದ ಶುಭ ಹಾರೈಸಿದರು.

ಶಾಲೆಯ ಮುಖ್ಯಾಧ್ಯಾಪಕ ಎಲ್.ಜಿ.ಗುನಗಾ ಸ್ವಾಗತಿಸಿ, ವಿದ್ಯಾರ್ಥಿಗಳಿಗೆ ನೂತನ ಶೈಕ್ಷಣಿಕ ವರ್ಷದ ಯಶಸ್ಸಿಗೆ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರು ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದು ಪ್ರೀತಿಯಿಂದ ವಿದ್ಯಾರ್ಥಿಗಳನ್ನು ಹರಸಿದರು. ಶಾಲಾ ಪ್ರಾರಂಭೋತ್ಸವದ ವಿಶೇಷವಾಗಿ ಆಡಳಿತ ಮಂಡಳಿಯ ಅಧ್ಯಕ್ಷ ಗುರುಪ್ರಸಾದ್ ಭಟ್ಟ ಅವರು ವಿದ್ಯಾರ್ಥಿಗಳಿಗೆ ಊಟದೊಂದಿಗೆ ವಿಶೇಷವಾಗಿ ಸಿದ್ಧಪಡಿಸಲಾಗಿದ್ದ ಮಾವಿನ ಹಣ್ಣಿನ ರಸಾಯನ ವಿತರಿಸಿದರು.

ಡೊಳ್ಳು ಮೆರವಣಿಗೆಯಲ್ಲಿ ಶಾಲೆಗೆ ಮಕ್ಕಳನ್ನು ಹೊತ್ತು ತಂದ ಪಾಲಕರು

ಯಲ್ಲಾಪುರ: ತಾಲೂಕಿನ ಕಿರವತ್ತಿ ಗ್ರಾಮ ಪಂಚಾಯತ್ ವ್ಯಾಪ್ತಿಯ, ಗೌಳಿ ಸಮುದಾಯದವರೇ ಅಧಿಕವಾಗಿ ವಾಸಿಸುವ ಹಿಂದುಳಿದ ಪ್ರದೇಶವಾದ ಬೈಲಂದೂರು ಗೌಳಿವಾಡದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಪ್ರಸಕ್ತ ಸಾಲಿನ ಶಾಲಾ ಪ್ರಾರಂಭೋತ್ಸವವು ಅತ್ಯಂತ ವಿನೂತನ ಹಾಗೂ ಅದ್ದೂರಿ ರೀತಿಯಲ್ಲಿ ಜರುಗುವ ಮೂಲಕ ಸಾರ್ವಜನಿಕರ ಗಮನ ಸೆಳೆಯಿತು.

ಹೊಸ ಶೈಕ್ಷಣಿಕ ವರ್ಷದ ಮೊದಲ ದಿನದ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ವೇಷಭೂಷಣಗಳನ್ನು ಧರಿಸಲಾಗಿತ್ತು. ಪಾಲಕರು ತಮ್ಮ ಮಕ್ಕಳನ್ನು ಹೆಗಲ ಮೇಲೆ ಹೊತ್ತುಕೊಂಡು, ಡೊಳ್ಳು ಕುಣಿತದ ಭವ್ಯ ಮೆರವಣಿಗೆಯ ಮೂಲಕ ಅತ್ಯಂತ ಉತ್ಸಾಹದಿಂದ ಶಾಲೆಗೆ ಕರೆದುಕೊಂಡು ಬಂದದ್ದು ಈ ಬಾರಿಯ ವಿಶೇಷವಾಗಿತ್ತು.

ಶಾಲೆಯ ಪ್ರವೇಶದ್ವಾರದ ಬಳಿ ಮುಖ್ಯ ಶಿಕ್ಷಕ ನಾರಾಯಣ ಕಾಂಬಳೆ ಹಾಗೂ ಶಿಕ್ಷಕಿ ಸುಗುಣ ಅವರ ಮಾರ್ಗದರ್ಶನದಲ್ಲಿ ಸಜ್ಜಾಗಿದ್ದ ಗ್ರಾಮಸ್ಥರು, ಶಾಲೆಗೆ ಆಗಮಿಸಿದ ಮಕ್ಕಳ ಮೇಲೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಮಕ್ಕಳಿಗೆ ಕೌತುಕ ಮೂಡಿಸುವ 'ಅಕ್ಷರ ಲಾಲಿಪಾಪ್' ನೀಡಿ ಅತ್ಯಂತ ಸಡಗರದಿಂದ ಒಳಗೆ ಬರಮಾಡಿಕೊಳ್ಳಲಾಯಿತು. ತದನಂತರ ಶಾಲಾ ಆವರಣದಲ್ಲಿರುವ ಶಾರದಾ ದೇವಿಯ ಪ್ರತಿಮೆಯ ಬಳಿ ದೀಪ ಬೆಳಗಿಸಿ ಪ್ರಸಕ್ತ ವರ್ಷದ ಶೈಕ್ಷಣಿಕ ಚಟುವಟಿಕೆಗಳಿಗೆ ಅಧಿಕೃತ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಅಗತ್ಯ ಶೈಕ್ಷಣಿಕ ಪರಿಕರಗಳನ್ನು ವಿತರಿಸಲಾಯಿತು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್ಡಿಎಂಸಿ) ಅಧ್ಯಕ್ಷ ಸಾವು ಸೋನು ಕೊಕರೆ, ಗ್ರಾಮದ ಪ್ರಮುಖರಾದ ಜಾನು ಪಟಕಾರೆ, ಲಕ್ಕಿಬಾಯಿ ಪಟಕಾರೆ, ಜಾನು ದಾಕ್ಲು ಪಟಕಾರೆ, ಜಾವು ಪಟಕಾರೆ, ಬಾಗು ಜಾವು ಪಟಕಾರೆ ಹಾಗೂ ಜಾನು ಕೋಯಾ ಕೊಕರೆ ಮುಂತಾದವರು ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಕಾರ್ಯಕ್ರಮದ ಮುಕ್ತಾಯದ ನಂತರ ಎಲ್ಲರಿಗೂ ಸಿಹಿ ಊಟದ ವ್ಯವಸ್ಥೆ ಮಾಡಲಾಗಿದ್ದು, ಮಕ್ಕಳು ಹಾಗೂ ಪಾಲಕರು ಸಿಹಿ ಸವಿಯುವ ಮೂಲಕ ಸಂಭ್ರಮಿಸಿದರು. ಮುಖ್ಯ ಶಿಕ್ಷಕ ನಾರಾಯಣ ಕಾಂಬಳೆ ಕಾರ್ಯಕ್ರಮಕ್ಕೆ ಸ್ವಾಗತಿಸಿ, ನಿರೂಪಿಸಿದರು. ಶಿಕ್ಷಕಿ ಸುಗುಣ ವಂದನಾರ್ಪಣೆ ಮಾಡಿದರು.

ಹಾರ್ಸಿಕಟ್ಟಾದಲ್ಲಿ ದಿ. ಅನಂತ ಶಾನಭಾಗ್ ಪುಣ್ಯಸ್ಮರಣೆ | ಶ್ರೀಪಾದ ಹೆಗಡೆ ಮಾವಿನಗುಂಡಿಗೆ ಗುರುವಂದನೆ

ಕಲೆಗೆ ಪ್ರೋತ್ಸಾಹಿಸುವವರೇ ನಿಜವಾದ ಆಶ್ರಯದಾತರು

ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾದ ಗಣೇಶ ಮಂಟಪದಲ್ಲಿ ಲಕ್ಷ್ಮೀನಾರಾಯಣ ಯಕ್ಷಗಾನ ಕಲಾಮಂಡಳಿ ಹೆಮ್ಮನಬೈಲ್, ಯಕ್ಷತರಂಗಿಣಿ ಹಾರ್ಸಿಕಟ್ಟಾ ಹಾಗೂ ಯಕ್ಷಾಭಿಮಾನಿ ಬಳಗ ಹಾರ್ಸಿಕಟ್ಟಾ ಇವರ ಜಂಟಿ ಆಶ್ರಯದಲ್ಲಿ ದಿ. ಅನಂತ ಶಾನಭಾಗ್ ಹಾರ್ಸಿಕಟ್ಟಾ ಇವರ ಪ್ರಥಮ ವರ್ಷದ ಪುಣ್ಯ ಸ್ಮರಣೆ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಗುರುವಂದನೆ ಹಾಗೂ ಯಕ್ಷಗಾನ ಕಾರ್ಯಕ್ರಮವು ಭಾನುವಾರ ಅತ್ಯಂತ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದಲ್ಲಿ ಹಿರಿಯ ಹವ್ಯಾಸಿ ಯಕ್ಷಗಾನ ಕಲಾವಿದ ಶ್ರೀಪಾದ ಹೆಗಡೆ ಮಾವಿನಗುಂಡಿ ಅವರಿಗೆ ಯಕ್ಷಗಾನ ಕಲಾವಿದ ಕುಮಾರ ನಾಯ್ಕ ಮೆಣಸಿ ಅವರು ಸಾಂಪ್ರದಾಯಿಕವಾಗಿ ಗುರುವಂದನೆ ಸಲ್ಲಿಸಿ, ಭವ್ಯವಾಗಿ ಸನ್ಮಾನಿಸಿದರು. ಡಾ. ಶ್ರೀಕಾಂತ ಭಟ್ಟ ಅವರು ಸನ್ಮಾನಿತರ ಕುರಿತು ಅಭಿನಂದನಾ ನುಡಿಗಳನ್ನಾಡಿದರು ಹಾಗೂ ಗುರುಮೂರ್ತಿ ಶಾನಭಾಗ ಅವರು ಸನ್ಮಾನ ಪತ್ರ ವಾಚಿಸಿದರು. ಗುರುವಂದನೆ ಸ್ವೀಕರಿಸಿದ ಶ್ರೀಪಾದ ಹೆಗಡೆ ಮಾವಿನಗುಂಡಿ ಅವರು ತಮ್ಮ ಕಲಾಜೀವನದ ನೆನಪುಗಳನ್ನು ಹಂಚಿಕೊಂಡು ಕೃತಜ್ಞತೆ ಸಲ್ಲಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಾಟ್ಯಾಚಾರ್ಯ ಶಂಕರ ಭಟ್ಟ ಸಿದ್ದಾಪುರ, ಕಲೆಗೆ ನಿರಂತರ ಪ್ರೋತ್ಸಾಹ ನೀಡುವವರೇ ನಿಜವಾದ ಕಲೆಯ ಆಶ್ರಯದಾತರಾಗಿದ್ದಾರೆ.

ದಿವಂಗತ ಅನಂತ ಶಾನಭಾಗ್ ಅವರು ಕಲೆಯ ಪರಮ ಆರಾಧಕರಾಗಿ ಹಾಗೂ ಉತ್ತಮ ಪ್ರೋತ್ಸಾಹಕರಾಗಿ ಸದಾ ನೆನಪಿನಲ್ಲಿ ಉಳಿಯುತ್ತಾರೆ ಎಂದರು. ಅಲ್ಲದೇ, ಕಲಾವಿದನಾದವನು ತನ್ನ ಪ್ರತಿಭೆಯನ್ನು ಕಲಾರಂಗದಲ್ಲಿ ಸಮರ್ಥವಾಗಿ ಪ್ರದರ್ಶಿಸಿ, ಸಮಾಜದಲ್ಲಿ ತನ್ನದೇ ಆದ ವಿಶಿಷ್ಟ ಗುರುತಿಸುವಿಕೆಯನ್ನು ತಾನೇ ಮಾಡಿಕೊಳ್ಳಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಟಿ.ಎಸ್.ಎಸ್. ನಿರ್ದೇಶಕ ರವೀಂದ್ರ ಹೆಗಡೆ ಹಿರೇಕೈ ಅವರು, ಹಾರ್ಸಿಕಟ್ಟಾ ಪ್ರದೇಶವು ಜಿಲ್ಲೆಯಲ್ಲೇ ಒಂದು ಪ್ರಸಿದ್ಧ ಸಾಂಸ್ಕೃತಿಕ ಕ್ಷೇತ್ರವಾಗಿ ಹೊರಹೊಮ್ಮಿದೆ.

ಇಲ್ಲಿ ಯಕ್ಷಗಾನ ಚಟುವಟಿಕೆಗಳು ಹಲವು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿರುವುದರ ಹಿಂದೆ ಹಲವಾರು ಕಲಾ ಪ್ರೇಮಿಗಳ ಶ್ರಮ ಅಡಗಿದೆ. ಈ ನಿಟ್ಟಿನಲ್ಲಿ ಅನಂತ ಶಾನಭಾಗ್ ಅವರು ಹಾರ್ಸಿಕಟ್ಟಾ ಭಾಗದ ಸಾಂಸ್ಕೃತಿಕ ರಾಯಭಾರಿಯಂತೆ ಗುರುತಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಮತ್ತೊಬ್ಬ ಯಕ್ಷಗಾನ ಕಲಾವಿದ ಅಶೋಕ ಭಟ್ಟ ಸಿದ್ದಾಪುರ ಮಾತನಾಡಿ, ಯಾವುದೇ ರಂಗದಲ್ಲಿ ವ್ಯಕ್ತಿ ಉನ್ನತ ಮಟ್ಟಕ್ಕೆ ಬೆಳೆಯಬೇಕಾದರೆ ಗುರುವಿನ ಮಾರ್ಗದರ್ಶನ ಅತ್ಯಂತ ಅವಶ್ಯಕವಾಗಿದೆ. ಅಂತಹ ಮಾರ್ಗದರ್ಶನ ನೀಡಿದ ಗುರುಗಳನ್ನು ಗೌರವಿಸುವುದು ಪ್ರತಿಯೊಬ್ಬ ಶಿಷ್ಯನ ಪರಮ ಕರ್ತವ್ಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಗತಿಪರ ಕೃಷಿಕ ಪಿ.ವಿ. ಹೆಗಡೆ ಹೊಸಗದ್ದೆ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ ಹಾಗೂ ವರ್ತಕ ಶ್ರೀಕಾಂತ ಶಾನಭಾಗ ಉಪಸ್ಥಿತರಿದ್ದು ಪ್ರಾಸಂಗಿಕವಾಗಿ ಮಾತನಾಡಿದರು.

ಯಕ್ಷಗಾನ ಕಲಾವಿದ ಕುಮಾರ ನಾಯ್ಕ ಕಾರ್ಯಕ್ರಮವನ್ನು ನಿರೂಪಿಸಿದರು ಮತ್ತು ನಂದನ ಅರಶೀನಗೋಡ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಸಭಾ ಕಾರ್ಯಕ್ರಮದ ನಂತರ ಕುಮಾರ ನಾಯ್ಕ ಅವರು ಸ್ವತಃ ರಚಿಸಿದ 'ಸರ್ಪ ಸಂಘರ್ಷ' ಎಂಬ ವಿಶಿಷ್ಟ ಯಕ್ಷಗಾನ ಪ್ರಸಂಗ ಪ್ರದರ್ಶನಗೊಂಡು ನೆರೆದಿದ್ದ ನೂರಾರು ಕಲಾಭಿಮಾನಿಗಳ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ವ್ಯಸನ ಮುಕ್ತ ಸಮಾಜ, ಜಾಗೃತಿ ಅವಶ್ಯ

ಯಲ್ಲಾಪುರ: ಮುಂದಿನ ಯುವ ಪೀಳಿಗೆಯನ್ನು ವ್ಯಸನ ಮುಕ್ತಗೊಳಿಸಲು ಜಾಗೃತಿ ಮತ್ತು ದೃಢ ಸಂಕಲ್ಪ ಅವಶ್ಯವೆಂದು ಆರೋಗ್ಯ ಭಾರತಿ ಯಲ್ಲಾಪುರ ಶಾಖೆಯ ಉಪಾಧ್ಯಕ್ಷ ಡಾ.ನಾಗರಾಜ ಭಟ್ ಹೇಳಿದರು.

ಆರೋಗ್ಯ ಭಾರತಿ ಯಲ್ಲಾಪುರ ಶಾಖೆ, ಆರೋಗ್ಯ ಇಲಾಖೆ ಹಾಗೂ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ನಿಮಿತ್ತ ಆರೋಗ್ಯ ಶಿಕ್ಷಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಾಂಶುಪಾಲ ಬಸವರಾಜ್ ಪಾಟೀಲ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಯುವ ಜನತೆ ಯಾವುದೇ ದುಶ್ಚಟಕ್ಕೆ ಒಳಗಾಗದೆ ಸುಂದರ ಬದುಕನ್ನು ಬಾಳಿ ಎಂದು ಕರೆ ನೀಡಿದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ್ ತಾಳಿಕೋಟಿ ಮಾತನಾಡಿ, ತಂಬಾಕು ತ್ಯಜಿಸಲು ತೀರಾ ಕಷ್ಟ ಎನಿಸಿದರೆ ವೈದ್ಯರ ಸೂಕ್ತ ಸಲಹೆ ಪಡೆದುಕೊಳ್ಳಿ ಹಾಗೂ ಆಪ್ತ ಸಮಾಲೋಚನೆ ಸೌಲಭ್ಯ ಕೂಡ ಇರುವುದಾಗಿ ತಿಳಿಸಿದರು.

ತಾಲೂಕಾ ಅಧ್ಯಕ್ಷಎಸ್.ಟಿ. ಭಟ್ ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ಉಪನ್ಯಾಸ ನೀಡಿದರು.

ಸಹಕಾರ್ಯದರ್ಶಿ ಎಂ.ಬಿ.ಶೇಟ್ ಹಾಗೂ ಆರೋಗ್ಯ ನಿರೀಕ್ಷಣಾಧಿಕಾರಿ ಪ್ರವೀಣ್ಇ ನಾಮದಾರ್ ತಂಬಾಕಿನ ದುಷ್ಪರಿಣಾಮ ಕುರಿತು ಜಾನಪದ ಗೀತೆ ಪ್ರಸ್ತುತಪಡಿಸಿದರು. ಉಪನ್ಯಾಸಕ ಅವಿನಾಶ್ ಇದ್ದರು. ಶಾಖೆಯ ಕರ್ಯಾಶಿ ಶ್ರೀಪಾದ್ ಹೆಗಡೆ ಸ್ವಾಗತಿಸಿದರು. ಸದಸ್ಯೆ ಅಕ್ಷತಾ ಕಲಾಲ್ ಪ್ರಾರ್ಥಿಸಿದರು. ಸದಸ್ಯ ಹರಿಶ್ಚಂದ್ರ ಹರಿಕಾಂತ್ ವಂದಿಸಿದರು. ಎಂ.ಬಿ.ಶೇಟ್ ನಿರ್ವಹಿಸಿದರು.

ವಿಶ್ವ ತಂಬಾಕು ರಹಿತ ದಿನಾಚರಣೆ ನಿಮಿತ್ತ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಆರೋಗ್ಯ ಭಾರತಿ ಯಲ್ಲಾಪುರ ಶಾಖೆಯ ಉಪಾಧ್ಯಕ್ಷ ಡಾ.ನಾಗರಾಜ ಭಟ್ ಉದ್ಘಾಟಿಸಿದರು.

ಉತ್ತಮ ಕಲಿಕೆಗೆ ಉತ್ತಮ ಪರಿಸರವೂ ಅಗತ್ಯ

ವಜ್ರಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವದಲ್ಲಿ ಮಕ್ಕಳಿಗೆ ರೆಕ್ಕೆ ಕಟ್ಟುವ ಮೂಲಕ ಪ್ರಸಕ್ತ ವರ್ಷದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಯಲ್ಲಾಪುರ: ಜೀವನದಲ್ಲಿ ಬಾಲ್ಯದ ನೆನಪು ಅವಿಸ್ಮರಣೀಯವಾದದ್ದು, ಉತ್ತಮ ಕಲಿಕೆಗೆ ಉತ್ತಮ ಪರಿಸರವೂ ಅಗತ್ಯ. ಮಕ್ಕಳ ಮುಗ್ಧ ಮನಸ್ಸಿನ ಭಾವ ಅರಿತು ಅವರನ್ನು ಜಾಣರನ್ನಾಗಿ ಮಾಡುವಲ್ಲಿ ಶಿಕ್ಷಕರ ಶ್ರಮ ವಿಶೇಷವಾದದ್ದು ಎಂದು ಸಾಹಿತಿ ವನರಾಗ ಶರ್ಮಾ ಹೇಳಿದರು.

ಅವರು ವಜ್ರಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವದಲ್ಲಿ ಮಕ್ಕಳಿಗೆ ರೆಕ್ಕೆ ಕಟ್ಟುವ ಮೂಲಕ ಪ್ರಸಕ್ತ ವರ್ಷದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿ, ದೇಹ ಮನಸ್ಸು ಉಲ್ಲಸಿತವಾಗಿದ್ದರೆ ಉತ್ತಮ ಫಲಿತಾಂಶದೊಂದಿಗೆ ಗುರಿ ಸಾಧಿಸಬಹುದು. ಮಕ್ಕಳು ಅಪಾರವಾದ ಕನಸಿನ ರೆಕ್ಕೆ ಕಟ್ಟಿಕೊಂಡು ಓದಬೇಕು. ಹಾಗಾದಾಗ ಉತ್ತಮ ಫಲಿತಾಂಶ ದೊರೆಯಲಿದೆ ಎಂದರು.

ಎಸ್ ಡಿಎಂಸಿ ಅಧ್ಯಕ್ಷ ಹರಿಶ್ಚಂದ್ರ ಗೌಡ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಉಮಾ ಭಟ್ಟ, ಪಠ್ಯದ ಪರಿಕರದ ದೇಣಿಗೆ ನೀಡಿದ ದಯಾನಂದ ಹೆಗಡೆ, ಕೃಷ್ಣಮೂರ್ತಿ ಭಟ್ ಅಬ್ಬಿತೋಟ ಮುಂತಾದವರು ಉಪಸ್ಥಿತರಿದ್ದರು.

ಕೃತಿಕಾ ಭಟ್ಟ ಪ್ರಾರ್ಥಿಸಿದರು. ಶಿಕ್ಷಕಿ ಪ್ರಭಾವತಿ ಭಟ್ಟ ಸ್ವಾಗತಿಸಿದರು. ಮುಖ್ಯ ಶಿಕ್ಷಕಿ ರಾಧಾ ಭಟ್ಟ ವರದಿ ವಾಚಿಸಿದರು.

ಅಂಕಿತಾ ಗೌಡ, ಶಿಕ್ಷಕರಾದ ನಾಗರಾಜ ಹೆಗಡೆ ಹಾಗೂ ನಂದಾ ಮೇಸ್ತ ಕಾರ್ಯಕ್ರಮ ನಿರೂಪಿಸಿದರು.

ಸಮಾಚಾರ ಸಣ್ಣದಲ್ಲ

ಜೂ.8ರಿಂದ ಮೂರು ದಿನ ಉದ್ಯೋಗ ಶಿಬಿರ

ಹುಬ್ಬಳ್ಳಿ: ನಗರದ ನವಶ್ರೀ ಕಲಾಚೇತನ ಹಾಗೂ ದ ಎಲಿಗಂಟ್ ಇನ್ಸ್ಟಿಟ್ಯೂಟ್ ಆಶ್ರಯದಲ್ಲಿ ಜೂ. 8, 9 ಮತ್ತು 10 ರಂದು ಮೂರು ದಿನಗಳ ಉದ್ಯೋಗ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಸಂಗೀತಾ ದೇವದಾಸ್ ತಿಳಿಸಿದ್ದಾರೆ. ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರದಲ್ಲಿ ವಿವಿಧ ತರಹದ ಗೃಹ ಉಪಯೋಗಿ ವಸ್ತುಗಳ ತಯಾರಿಕೆಯ ಬಗ್ಗೆ ಸಾರ್ವಜನಿಕರಿಗೆ ಉಚಿತ ತರಬೇತಿ ನೀಡಲಿದ್ದಾರೆ. ಬಡ ಹೆಣ್ಣುಮಕ್ಕಳು ಹಾಗೂ ಮನೆಯಲ್ಲಿಯೇ ಕುಳಿತು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಬಯಸುವ ಮಹಿಳೆಯರಿಗೆ ಇದೊಂದು ಉತ್ತಮ ಉದ್ಯೋಗಾವಕಾಶ. ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಕೇಂದ್ರವನ್ನಾಗಿ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಶಿಬಿರದ ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಸಂಗೀತಾ ದೇವದಾಸ್, ನಿರ್ಮಲಾ ಪೂಜಾರ, ಸುಧಾ ಮುಲ್ಲಾಪುರ, ಲಕ್ಷ್ಮೀ, ಶಾರದಾ ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ: 7760101540 ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಹುದ್ದೆ ಭರ್ತಿಗೆ ಧರಣಿ ಸತ್ಯಾಗ್ರಹ ಜೂ.3ರಿಂದ

ಧಾರವಾಡ: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆ ವತಿಯಿಂದ ಜೂ. 3ರಿಂದ ಧಾರವಾಡದಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಪ್ರಾರಂಭಿಸಲಾಗುವುದು ಎಂದು ನ್ಯಾಯವಾದಿ, ಗೌರವ ಅಧ್ಯಕ್ಷ ಬಿ.ಡಿ. ಹಿರೇಮಠ ತಿಳಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಅನೇಕ ಭಾರಿ ಹೋರಾಟಗಳು ನಡೆದಿವೆ. ಆದರೆ ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ. ಈ ಭಾರಿ ಪೊಲೀಸ್ ಆಯುಕ್ತರಿಗೆ ಅನುಮತಿ ನೀಡಲು ಮನವಿ ಮಾಡಿದ್ದಾರೆ. ಶಾಂತಿಯುತ ಹೋರಾಟಕ್ಕೆ ಪೊಲೀಸರು ಅನುಮತಿ ನಿರಾಕರಿಸುವುದು ಸರಿಯಲ್ಲ ಎಂದರು. ರಾಜ್ಯ ವಿದ್ಯಾರ್ಥಿ ಸಂಘಟನೆ ಅಧ್ಯಕ್ಷ ಕಾಂತಕುಮಾರ್ ಮಾತನಾಡಿ, ನಮ್ಮ ಬೇಡಿಕೆಗಳಿಗೆ ಸರಕಾರ ಸ್ಪಂದಿಸಬೇಕು. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಒದಗಿಸುವಲ್ಲಿಸರಕಾರ ವಿಫಲವಾಗಿದೆ. ಈ ಕುರಿತು ಹೋರಾಟ ನಡೆಸಲು ಅನುಮತಿ ನಿರಾಕರಿಸಿ ಸಂವಿಧಾನಿಕ ಹಕ್ಕು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು. ಕೆಪಿಎಸ್ಸಿ ಹಾಗೂ ನೀಟ್ ಅಕ್ರಮ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಶಾಸಕ ಮಾನೆಗೆ ಮಂತ್ರಿ ಸ್ಥಾನ ನೀಡಲು ಆಗ್ರಹ

ಹುಬ್ಬಳ್ಳಿ: ಹಾನಗಲ್ ಮತಕ್ಷೇತ್ರದ ಶಾಸಕ ಶ್ರೀನಿವಾಸ ಮಾನೆ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಹುಬ್ಬಳ್ಳಿಯ ಸಮಸ್ತ ಮರಾಠಾ '' ಸಮಾಜ ಸೇವಾ ಸಂಘ ಹಾಗೂ ರಾಜ್ಯ ಮರಾಠಾ ಸಮಾಜ ಜಂಟಿಯಾಗಿ ಒತ್ತಾಯಿಸಿದ್ದಾರೆ. ನಗರದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಧ್ಯಕ್ಷ ದಯಾನಂದ ಚವ್ಹಾಣ, ಶ್ರೀನಿವಾಸ ಮಾನೆ ಅವರು ಪಕ್ಷದ ಸಂಘಟನೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದಾರೆ. ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಹಾಗೂ ಎರಡು ಬಾರಿ ಹಾನಗಲ್ ಮತಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಳೆದ 23 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಸತತವಾಗಿ ಸೇವೆ ಸಲ್ಲಿಸುತ್ತಾ ಯಾವುದೇ ಹುದ್ದೆ ಆಸೆ ಪಡದೇ ಜನಸೇವೆ ಮುಂದುವರೆಸಿಕೊಂಡು ಬಂದಿದ್ದಾರೆ ಎಂದು ತಿಳಿಸಿದರು. ಮರಾಠಾ ಸಮುದಾಯ ರಾಜ್ಯದಲ್ಲಿ 60 ಲಕ್ಷ ಜನಸಂಖ್ಯೆ ಹೊಂದಿದ್ದು, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿಯೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಭಾಗದ ನಾಯಕ ಶ್ರೀನಿವಾಸ ಮಾನೆ ಅವರಿಗೆ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದರು. ಸಂಘದ ಪ್ರಮುಖರಾದ ಬಸವಂತ ಶಿಂದೆ, ದಿನೇಶ ವಾಘಮೋಡೆ, ಸಂತೋಷ ಬೈರೆ, ವಿಶ್ವಾಸರಾವ್ ಜಾಧವ, ಪಾಂಡುರಂಗ ಗಾಯಕವಾಡ, ಡಾ.ಬಾಲಾಜಿ ಸಾವಳೇಕರ ಮತ್ತಿತರರು ಉಪಸ್ಥಿತರಿದ್ದರು.

ಬಿಇ ಶಿಕ್ಷಣದ ಉಚಿತ ಕಾರ್ಯಾಗಾರ 7ರಂದು

ಧಾರವಾಡ: ದ್ವಿತೀಯ ಪಿಯುಸಿ ಮುಗಿಸಿ, ಸಿಇಟಿ ಪರೀಕ್ಷೆ ಬರೆದು ಎಂಜಿನಿಯರಿಂಗ್ ಓದುವ ಕನಸು ಇರುವ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಕೋರ್ಸ್ ಬಗ್ಗೆ ಧಾರವಾಡದ ಐಎಸ್ಸಿಟಿ (ಗ್ಲೋಬಲ್ ಇನ್ನೋಟಿಕ್) ಸಂಸ್ಥೆಯು ತನ್ನ 30ನೇ ವಾರ್ಷಿಕೋತ್ಸವ ನಿಮಿತ್ತ ಧಾರವಾಡ ಹಾಗೂ ಹುಬ್ಬಳ್ಳಿಯಲ್ಲಿ ಪ್ರತ್ಯೇಕವಾಗಿ ಉಚಿತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಐ.ಎಸ್.ಸಿ.ಟಿ ಸಂಸ್ಥಾಪಕ ಅನಿಲ ಘಾಸ್ತೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಜೂ. 7ರಂದು ಬೆಳಿಗ್ಗೆ 10ಕ್ಕೆ ನಗರದ ಕರ್ನಾಟಕ ಕುಲಪುರೋಹಿತ ಆಲೂರು ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಅನೇಕ ವಿದ್ಯಾರ್ಥಿಗಳು ಬಿಇ ಮೊದಲನೇ ವರ್ಷ ಅನೇಕ ತಾಂತ್ರಿಕ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಹೆಸರು ನೋಂದಣಿ ಮಾಡಿಸಬೇಕು. ಪಾಲಕರಿಗೂ ಅವಕಾಶವಿದೆ. ಮಾಹಿತಿಗಾಗಿ ಮೊ. 93434 07006 ಸಂಪರ್ಕಿಸಬಹುದು ಎಂದು ತಿಳಿಸಿದರು. ಮಾರ್ತಾಂಡ ಕತ್ತಿ, ವಾಸುದೇವ ಪರ್ವತಿ, ಸುನೀಲ್ ಇದ್ದರು.

{ವಿ.ಸೋಮಣ್ಣ} ಕೇಂದ್ರ ರೈಲ್ವೆ ಸಚಿವ

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಅಭಿವೃದ್ಧಿ ಕೆಲಸ ಮಾಡಬೇಕು. ಸಾಮರಸ್ಯ ಇಲ್ಲವಾದರೆ ಜನಪರ ಕೆಲಸಗಳು ನಡೆಯುವುದಿಲ್ಲ. ಬೆಂಗಳೂರು ನಗರದಲ್ಲಿ ರೈಲ್ವೆ ಪ್ರಯಾಣಿಕರ ಸಂಖ್ಯೆ 30 ಲಕ್ಷಕ್ಕೂ ಅಧಿಕ. ದೇಶದಲ್ಲಿ 3 ಕೋಟಿಗೂ ಅಧಿಕವಿದೆ. ರೈಲ್ವೆ ಇಲಾಖೆ ಬೆಳೆಸಲು ಪ್ರಧಾನಿ ಸಾಕಷ್ಟು ಅನುದಾನ ನೀಡುತ್ತಿದ್ದಾರೆ.



ವೀರಶೈವ ಸಮಾಜದ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ : ಸಂಸದ ಜಗದೀಶ ಶೆಟ್ಟರ್

ಒಳ ಪಂಗಡ ಕೂಡಿದರೆ ಸಮಾಜ ಬಲಿಷ್ಠ

ವಿಶ್ವವಾಣಿ ಸುದ್ದಿಮನೆ ಹುಬ್ಬಳ್ಳಿ

ವೀರಶೈವ ಲಿಂಗಾಯತ ಸಮಾಜ ದೊಡ್ಡ ಸಮಾಜವಾಗಿದ್ದು, ಬಸವಣ್ಣನವರ ತತ್ವಗಳನ್ನು ಅನುಸರಿಸುವ ನಾವು ಎಲ್ಲರೊಳಗೊಂದಾಗಿ ಬಾಳಬೇಕಾಗಿದೆ. ನಮ್ಮಲ್ಲಿ ಸಾಕಷ್ಟು ಒಳಪಂಗಡಗಳಿದ್ದು, ಅವರನ್ನೂ ನಾವು ಅಪ್ಪಿಕೊಳ್ಳುವ ಕಾರ್ಯಗಳಾಗಬೇಕು ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಜಗದೀಶ ಶೆಟ್ಟರ್‌ಹೇಳಿದರು.

ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ವೀರಶೈವ ಲಿಂಗಾಯತ ಸೇವಾ ಸಮಿತಿಯಿಂದ ವೀರಶೈವ ಲಿಂಗಾಯತ ಒಳಪಂಗಡಗಳ ಸಮಾಜದ ಎಸ್‌ಎಸ್ ಎಲ್ಸಿ ಹಾಗೂ ಪಿಯುಸಿಯಲ್ಲಿ ಗರಿಷ್ಠ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಯೋಜಿಸಿದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲ ಒಳಪಂಗಡದವರು ಒಂದಾದರೆ ಸಮಾಜ ಇನ್ನಷ್ಟು ಮುಂದುವರೆಯಲು ಸಾಧ್ಯವಿದೆ. ಕೇಂದ್ರದ ಒಬಿಸಿ ಪಟ್ಟಿಯಲ್ಲಿ ವೀರಶೈವ ಲಿಂಗಾಯತ ಸೇರ್ಪಡೆಯಾದರೆ ಸಮಾಜಕ್ಕೆ ಸಾಕಷ್ಟು ಸೌಲಭ್ಯಗಳು ದೊರೆಯಲಿದ್ದು, ಈ ಬಗ್ಗೆ ಇನ್ನಷ್ಟು ಪ್ರಯತ್ನ ನಡೆಯಬೇಕಿದೆ ಎಂದು ತಿಳಿಸಿದರು.

ಕೇಂದ್ರದ ಒಬಿಸಿ ಪಟ್ಟಿಯಲ್ಲಿ ವೀರಶೈವ ಲಿಂಗಾಯತ ಸೇರ್ಪಡೆಯಾದರೆ ಸಮಾಜಕ್ಕೆ ಸಾಕಷ್ಟು ಸೌಲಭ್ಯ ದೊರೆಯಲಿವೆ. ವೀರಶೈವ ಲಿಂಗಾಯತ ಸಮಾಜವನ್ನು ಒಡೆಯುವವರಿಂದ ನಾವು ಎಚ್ಚರದಿಂದ ಇರಬೇಕು. ನಮ್ಮ ಸಮಾಜವನ್ನು ಇನ್ನಷ್ಟು ಬಲಪಡಿಸೋಣ ಎಂದರು.

ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಮಾತನಾಡಿ, ಲಿಂಗಾಯತ ಸಮಾಜದವರು ಬಸವಣ್ಣನವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದೇವೆ. ಅನ್ಯ ಸಮಾಜದವರನ್ನು ದೂಷಿಸುವುದಿಲ್ಲ, ಎಲ್ಲರೂ ನಮ್ಮವರೆಂದು ತಿಳಿದು ವೀರಶೈವ ಲಿಂಗಾಯತರು ಬದುಕುತ್ತಿದ್ದೇವೆ. ಅದೇ ರೀತಿ ಸಮಾಜದ ಮಕ್ಕಳು ಎತ್ತರದ ಸ್ಥಾನಕ್ಕೆ ಹೋಗಬೇಕು ಎಂಬ ಉದ್ದೇಶದಿಂದ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುತ್ತ ಅವರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಮಾಜಿ ಶಾಸಕ ಎಂ.ಎಸ್. ಅಕ್ಕಿ ಮಾತನಾಡಿ, ವೀರಶೈವ ಸಮಾಜ ರಾಜಕೀಯ, ಸಾಮಾಜಿಕವಾಗಿ ಒಂದಾಗಬೇಕು. ಶಿಕ್ಷಣ, ಸಂಸ್ಕಾರ ನಮ್ಮ ಸಮಾಜದ ವಿದ್ಯಾರ್ಥಿಗಳಲ್ಲಿದೆ. ನಾವು ಇಂಥದನ್ನು ಪ್ರೋತ್ಸಾಹಿಸೋಣ ಎಂದರು. ರುದ್ರಾಕ್ಷಿಮಠದ ಶ್ರೀ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಸಾವಕಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿವಿಧ ಕ್ಷೇತ್ರದ ಸಾಧಕರಾದ ನಾಗೇಶ ಅಣ್ಣಿಗೇರಿ, ಗಿರೀಶ ಪಟ್ಟಣಶೆಟ್ಟಿ, ಸಮೃದ್ಧಿ ಮುಂಗುರವಾಡಿ, ದೀಪಾ ಗೌರಿ ಅವರನ್ನು ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್, ಸಮಿತಿ ಕಾರ್ಯದರ್ಶಿ ಪ್ರಕಾಶ ಬೆಂಡಿಗೇರಿ, ಪ್ರಮುಖರಾದ ಶಂಕರ ಕೋಳಿವಾಡ, ಮಲ್ಲಿಕಾರ್ಜುನ ರಡೇರ, ಎಸ್. ಎಂ. ಶಿವಯೋಗಿಮಠ, ಸದಾಶಿವ ಚೌಶೆಟ್ಟಿ, ಶಂಭು ಲಕ್ಷ್ಮೇಶ್ವರಮಠ, ಮಹಾಂತೇಶ ಗಿರಿಮಠ, ತಾರಾದೇವಿ ವಾಲಿ ಇತರರು ಇದ್ದರು.

ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ವೀರಶೈವ ಲಿಂಗಾಯತ ಸೇವಾ ಸಮಿತಿಯಿಂದ ವೀರಶೈವ ಸಮಾಜದ ಎಸ್‌ಎಸ್‌ಎಲ್ಸಿ ಹಾಗೂ ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಉದ್ಯೋಗ ಗಳಿಕೆಯೇ ವಿದ್ಯಾರ್ಜನೆ ಗುರಿಯಲ್ಲ

ಧಾರವಾಡ: ಕೇವಲ ಉದ್ಯೋಗ ಸಂಪಾದನೆಯನ್ನಷ್ಟೇ ವಿದ್ಯಾರ್ಜನೆಯ ಉದ್ದೇಶವಲ್ಲ. ತನ್ನ ಬದುಕನ್ನು ಅಗತ್ಯ ಜೀವನ ಮೌಲ್ಯಗಳೊಂದಿಗೆ ಅತ್ಯಂತ ಯಶಸ್ವಿಯಾಗಿ ಬದುಕುವಂತೆ ಮಾಡುವುದು ಶಿಕ್ಷಣದ ಗುರಿ ಎಂದು ಶಾಲಾ ಶಿಕ್ಷಣ ಇಲಾಖೆಯ ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ ಹೆಚ್ಚುವರಿ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ ಪ್ರತಿಪಾದಿಸಿದರು.

ನಗರದ ಡಿಡಿಪಿಐ ಕಚೇರಿಯ ಶಿಕ್ಷಣಾಧಿಕಾರಿ ಪ್ರಭಯ್ಯ ಕೆ. ಚಿಕ್ಕಮಠ, ತಮ್ಮ ಕಚೇರಿಯ ವೃತ್ತಿಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕ ಬಿ.ವೈ.ಭಜಂತ್ರಿ ಹಾಗೂ ಪ್ರಥಮ ದರ್ಜೆ ಸಹಾಯಕ ಶಶಿಧರ ಕಟ್ಟಿಮನಿ ಅವರ ಸೇವಾ ನಿವೃತ್ತಿಯ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಭಾಗೀದಾರರು ರಾಷ್ಟ್ರವನ್ನು ಸಮರ್ಥವಾಗಿ ಮುನ್ನಡೆಸಲು ಅಗತ್ಯ ಉತ್ಕೃಷ್ಟ ಮಾನವ ಸಂಪನ್ಮೂಲ ನಿರ್ಮಾಣಕ್ಕೆ ತೆರೆದುಕೊಳ್ಳಬೇಕು. ನಿವೃತ್ತಿ ಹೊಂದಿದ ಎಲ್ಲರ ಜೀವನ ಆರೋಗ್ಯ, ಸಂತೋಷ, ನೆಮ್ಮದಿಯಿಂದ ಕೂಡಿರಲಿ ಎಂದು ಹಾರೈಸಿದರು.

ಇಲಾಖೆಯ ನಿರ್ದೇಶಕ ಈಶ್ವರ ನಾಯಕ, ಉಪನಿರ್ದೇಶಕ ಗಿರೀಶ ಪದಕಿ, ಡಯಟ್ ಪ್ರಾಚಾರ್ಯ ಬಸವರಾಜ ನಾಲತವಾಡ, ಸಹಾಯಕ ನಿರ್ದೇಶಕ ಪ್ರಕಾಶ ಹೊಸಮನಿ, ಪ್ರಭುಕುಮಾರ ಅಗಡಿ, ವೀರೇಶ ಕಲಬುರ್ಗಿ ಇದ್ದರು.

ಡಯಟ್ ಸಭಾಭವನ: ಡಯಟ್ ಭವನದಲ್ಲಿ ನಡೆದ ಪ್ರತ್ಯೇಕ ಸಮಾರಂಭದಲ್ಲಿ ಶಿಕ್ಷಣಾಧಿಕಾರಿ ಪ್ರಭಯ್ಯ ಚಿಕ್ಕಮಠ ಅವರನ್ನು ಶಾಲಾ ಶಿಕ್ಷಣ ಇಲಾಖೆ, ವಿವಿಧ ಶಿಕ್ಷಕ ಸಂಘಟನೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ವತಿಯಿಂದ ಗೌರವಿಸಿ ಬೀಳ್ಕೊಡಲಾಯಿತು.

ಅಭಿವೃದ್ಧಿ ಉಪನಿರ್ದೇಶಕ ಬಸವರಾಜ ನಾಲತವಾಡ, ಪ್ರಭಾರಿ ಡಿಡಿಪಿಐ ಉಮೇಶ ಬೊಮ್ಮಕ್ಕನವರ, ಇಲಾಖೆಯ ಅಧಿಕಾರಿಗಳಾದ ಎಸ್. ಎಂ. ಹುಡೇದಮನಿ, ಡಾ. ರೇಣುಕಾ ಅಮಲಝರಿ, ನಫೀಜಾ ದಾವಲಸಾಬನವರ, ನಿವೃತ್ತ ಉಪನಿರ್ದೇಶಕರುಗಳಾದ ಎಸ್.ಎಸ್. ಕೆಳದಿಮಠ, ಡಾ. ಗುರುನಾಥ ಹೂಗಾರ, ವಿರೂಪಾಕ್ಷಯ್ಯ ಚಿಕ್ಕಮಠ, ಕಾರ್ತಿಕ ಚಿಕ್ಕಮಠ, ಅನೂಷಾ ಚಿಕ್ಕಮಠ, ಜಯಶ್ರೀ ಕಲ್ಮಠ ಮಾತನಾಡಿದರು.

ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಪ್ರಭಯ್ಯ ಚಿಕ್ಕಮಠ, 1999ರಲ್ಲಿ ಕೆ.ಇ.ಎಸ್. ತೇರ್ಗಡೆಯಾಗಿ ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕ, ಡಯಟ್ ಉಪನ್ಯಾಸಕ, ಬಿಇಒ ಜೊತೆಗೆ ತತ್ಸಮಾನ ವೃಂದದ ಹುದ್ದೆಗಳಲ್ಲಿ ಸಲ್ಲಿಸಿದ 32 ವರ್ಷಗಳ ಸೇವಾ ನೆನಪುಗಳನ್ನು ಹಂಚಿಕೊಂಡರು. ಪ್ರಭಯ್ಯ ಚಿಕ್ಕಮಠರ ತಾಯಿ ದ್ರಾಕ್ಷಾಯಣವ್ವ, ಪತ್ನಿ ಸವಿತಾ ಇದ್ದರು. ಐ. ಜಿ. ವೆಂಕಟಾಪೂರಮಠ ಸ್ವಾಗತಿಸಿದರು. ರಾಜು ಭೂಶೆಟ್ಟಿ ವಂದಿಸಿದರು.

ಸೇವಾ ನಿವೃತ್ತರಾದ ನಗರದ ಡಿಡಿಪಿಐ ಕಚೇರಿಯ ಶಿಕ್ಷಣಾಧಿಕಾರಿ ಪ್ರಭಯ್ಯ ಕೆ. ಚಿಕ್ಕಮಠ ಅವರಿಗೆ ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು.

ಶಿಕ್ಷಣವಿಲ್ಲದೆ ಬದುಕು ಕಟ್ಟಿಕೊಳ್ಳೋದು ಕಷ್ಟ

ರಟ್ಟಿಹಳ್ಳಿ: ವಿದ್ಯೆ ಮನುಷ್ಯನ ಬದುಕಿಗೆ ಅತ್ಯಗತ್ಯವಾಗಿದ್ದು, ವಿದ್ಯೆಯೊಂದಿಗೆ ಸಂಸ್ಕಾರವೂ ಸೇರಿಕೊಂಡಾಗ ಮಾತ್ರ ಶಿಕ್ಷಣಕ್ಕೆ ನಿಜವಾದ ಅರ್ಥ ಮತ್ತು ಮಹತ್ವ ದೊರೆಯುತ್ತದೆ ಎಂದು ಅಗಡಿ ಆನಂದವನ ಕ್ಷೇತ್ರದ ಗುರುದತ್ತಸ್ವಾಮಿ ಚಕ್ರವರ್ತಿ ಸ್ವಾಮೀಜಿ ಹೇಳಿದರು.

ಪಟ್ಟಣದ ನಾಡಿಗೇರ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆರಂಭಿಸಲಾದ ಜ್ಞಾನಮುದ್ರಾ ಪೂರ್ವಪ್ರಾಥಮಿಕ ಶಾಲೆ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯೆ ಪಡೆಯುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ. ಬಡತನದಲ್ಲಿಯೂ ಜೀವನ ಸಾಗಿಸಬಹುದು, ಆದರೆ ಶಿಕ್ಷಣವಿಲ್ಲದೆ ಬದುಕು ಕಟ್ಟಿಕೊಳ್ಳುವುದು ಕಷ್ಟ. ಸಂಸ್ಕಾರದೊಂದಿಗೆ ಶಿಕ್ಷಣ ಪಡೆದಾಗ ಮಾತ್ರ ಸಮಾಜಕ್ಕೆ ಉತ್ತಮ ವ್ಯಕ್ತಿಗಳನ್ನು ರೂಪಿಸಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಶಾಸಕ ಯು.ಬಿ. ಬಣಕಾರ ಮಾತನಾಡಿ, ಶಿಕ್ಷಣದ ಮಹತ್ವವನ್ನು ಅರಿತು ಸರ್ಕಾರದ ಜೊತೆಗೆ ಮಠಗಳು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಕಾರ್ಯ. ಜ್ಞಾನಮುದ್ರಾ ಪೂರ್ವಪ್ರಾಥಮಿಕ ಶಾಲೆಯು ಮಕ್ಕಳಿಗೆ ಗುಣಮಟ್ಟದ ಹಾಗೂ ಮೌಲ್ಯಾಧಾರಿತ ಶಿಕ್ಷಣ ನೀಡಿ ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸಲಿ ಎಂದು ಹಾರೈಸಿದರು.

ರಟ್ಟಿಹಳ್ಳಿಯ ಕಬ್ಬಿಣಕಂಥಿ ಮಠದ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜ್ಞಾನಕ್ಕಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ. ಜ್ಞಾನ ಮನುಷ್ಯನ ಬದುಕನ್ನು ಸಾರ್ಥಕಗೊಳಿಸುವ ಪವಿತ್ರ ಶಕ್ತಿ ಎಂದು ಹೇಳಿದರು.

ಇದಕ್ಕೂ ಮುನ್ನ ಶಾಲೆಯಲ್ಲಿ ಸರಸ್ವತಿ ಪೂಜೆ ನಂತರ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ನಡೆಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶ ಪ್ರಕಾಶ ನಾಡಿಗೇರ, ಕ್ಷೇತ್ರ ಶಿಕ್ಷಣಾಧಿಕಾರಿ ಎನ್. ಶ್ರೀಧರ, ನಾಡಿಗೇರ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ಸುಶೀಲಾ ನಾಡಿಗೇರ, ಕಾರ್ಯದರ್ಶಿ ಸುರಭಿ ನಾಡಿಗೇರ, ಸದಸ್ಯರಾದ ಶಕುಂತಲಾ ನಾಡಿಗೇರ, ಸೀತಾ ನಾಡಿಗೇರ, ಬಸವರಾಜ ಸಾಲಿ, ಸುನೀಲ ನಾಡಿಗೇರ, ಲಕ್ಷ್ಮೀಕಾಂತ ಪಾಟೀಲ, ಸಲಹಾ ಸಮಿತಿ ಸದಸ್ಯರಾದ ರವೀಂದ್ರ ನಾಡಿಗೇರ, ಗುರುರಾಜ ನಾಡಿಗೇರ, ವನಿತಾ ಪಾಟೀಲ, ವೀಣಾ ನಾಡಿಗೇರ, ನವೀನ ನಾಡಿಗೇರ ಹಾಗೂ ಸಂದೇಶ ನಾಡಿಗೇರ ಉಪಸ್ಥಿತರಿದ್ದರು. ಪೋಷಕರು ಹಾಗೂ ಮಕ್ಕಳಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ರಟ್ಟಿಹಳ್ಳಿ ಪಟ್ಟಣದಲ್ಲಿ ನಾಡಿಗೇರ ಎಜುಕೇಷನ್ ಟ್ರಸ್ಟ್ ವತಿಯಿಂದ ಜ್ಞಾನಮುದ್ರಾ ಪೂರ್ವಪ್ರಾಥಮಿಕ ಶಾಲೆಯನ್ನು ಅಗಡಿ ಆನಂದವನ ಕ್ಷೇತ್ರದ ಗುರುದತ್ತಸ್ವಾಮಿ ಚಕ್ರವರ್ತಿ ಸ್ವಾಮಿಜಿ ಉದ್ಘಾಟಿಸಿದರು. ಶಾಸಕ ಯು.ಬಿ.ಬಣಕಾರ ಪಾಲ್ಗೊಂಡಿದ್ದರು.

ಪರಿಶ್ರಮದಿಂದ ಯಶಸ್ಸು ಗಳಿಸಲು ಸಾಧ್ಯ

ಧಾರವಾಡ: ನಿರಂತರ ಪರಿಶ್ರಮ, ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಯಶಸ್ಸು ಗಳಿಸಲು ಸಾಧ್ಯ ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಚಾರ್ಯೆ ಡಾ. ನಳನಿ ಬೆಂಗೇರಿ ಅಭಿಪ್ರಾಯಪಟ್ಟರು.

ಕರ್ನಾಟಕ ಕಾಲೇಜಿನ ಸಮಾಜಶಾಸ್ತ್ರ ಅಧ್ಯಯನ ವಿಭಾಗ ಕಾಲೇಜಿನ ಬಿಬಿಎ ಸಭಾಂಗಣದಲ್ಲಿ ಆಯೋಜಿಸಿದ ಅಂತಿಮ ವರ್ಷದ ಸಮಾಜಶಾಸ್ತ್ರ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ದೂರವಿರಬೇಕು. ಅಧ್ಯಯನ ಪೂರಕ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಬೇಕು. ಪ್ರಸ್ತುತ ಸಮಾಜಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉತ್ತಮ ಅವಜಾಶಗಳಿದ್ದು ಬೋಧನೆ.ಸಂಶೋಧನೆ ಮತ್ತು ಆಡಳಿತ ವಲಯದಲ್ಲಿ ಹೆಚ್ಚು ಅವಕಾಶಗಳಿವೆ. ನಿಷ್ಠೆಯಿಂದ ಓದಿನತ್ತ ಗಮನ ಕೊಡಬೇಕು ಎಂದರು.

ಕಲಾ ಕಾಲೇಜಿನ ಪ್ರಾಂಶುಪಾಲ ಡಾ. ಐ.ಸಿ. ಮುಳಗುಂದ ಮಾತನಾಡಿ, ವಿದ್ಯಾರ್ಥಿಗಳು ನಿರ್ದಿಷ್ಟವಾದ ಗುರಿ ಇಟ್ಟುಕೊಂಡು ಮುನ್ನಡೆಯಬೇಕು. ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳಿ, ಸಂವಹನ ಕೌಶಲಗಳನ್ನು ಬೆಳೆಸಿಕೊಂಡು ಭಾಷಾ ಪ್ರಾವೀಣ್ಯತೆಯನ್ನು ಪಡೆಯುವುದರಿಂದ ಭವಿಷ್ಯದಲ್ಲಿ ಬಹಳ ಸಹಕಾರಿ ಆಗಲಿದೆ ಎಂದರು.

ಉಪನ್ಯಾಸಕರಾದ ಡಾ. ಅನುಷಾ ಕೆ, ಪ್ರೊ. ಅಶ್ವಿನಿ ಬಡಿಗೇರ, ವಿದ್ಯಾರ್ಥಿಗಳು ಹಾಜರಿದ್ದರು.

ಧಾರವಾಡ ಕರ್ನಾಟಕ ಕಾಲೇಜಿನ ಸಭಾಂಗಣದಲ್ಲಿ ನಡೆದ ಅಂತಿಮ ಪದವಿಯ ಸಮಾಜಶಾಸ್ತ್ರ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಡಾ. ನಳನಿ ಬೆಂಗೇರಿ ಮಾತನಾಡಿದರು.

ಗೊಬ್ಬರ, ಬಿತ್ತನೆ ಬೀಜ ಒದಗಿಸಿ

ಧಾರವಾಡ : ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜ, ಕೃಷಿ ಚಟುವಟಿಕೆಗೆ ಪೆಟ್ರೋಲ್, ಡೀಸೆಲ್ ಸಮರ್ಪಕವಾಗಿ ಪೂರೈಸಬೇಕು, ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ 5 ಲಕ್ಷದವರೆಗೆ ಸಾಲ ನೀಡಬೇಕು ಎಂದು ಅಖಿಲ ಭಾರತ ರೈತ ಕೃಷಿಕಾರ್ಮಿಕರ ಸಂಘಟನೆ ಕಾರ್ಯಕರ್ತರು ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ''ಸಮರ್ಪಕ ಗೊಬ್ಬರ, ಬೀಜ ಒದಗಿಸಿ'', ಡೀಸೆಲ್, ಪೆಟ್ರೋಲ್ ಒದಗಿಸಿ'' ಫಲಕಗಳನ್ನು ಪ್ರದರ್ಶಿಸಿದರು.

ಜಿಲ್ಲಾಡಳಿತದಿಂದ ವಿಶ್ವ ತಂಬಾಕು ರಹಿತ ದಿನಾಚರಣೆ – ಜಾಥಾ

ತಂಬಾಕು ಸೇವನೆಯ ಹಾನಿ ಕುರಿತು ಅರಿವು ಅಗತ್ಯ

ಹಾವೇರಿ: ಭಾರತ ಹಳ್ಳಿಗಳ ದೇಶ, ಗ್ರಾಮೀಣ ಭಾಗದ ಜನರು ಮುಗ್ದರು, ತಂಬಾಕು ಸೇವನೆಯಿಂದ ಉಂಟಾಗುವ ಹಾನಿಗಳ ತಿಳುವಳಿಕೆ ಇಲ್ಲದೆ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಹಾಗಾಗಿ ಸಾರ್ವಜನಿಕರಿಗೆ ತಂಬಾಕು ಉತ್ಪನ್ನಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಜಿ.ಶಿವಳ್ಳಿ ಅವರು ಹೇಳಿದರು.

ಹಾವೇರಿ ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಸೋಮವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆಡಳಿತ, ಜಿಪಂ, ಜಿಲ್ಲಾ ಆರೋಗ್ಯ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಿಲ್ಲಾ ನ್ಯಾಯವಾದಿಗಳ ಸಂಘ, ಜಿಲ್ಲಾ ಆಸ್ಪತ್ರೆ, ಪೊಲೀಸ್ ಇಲಾಖೆ ಹಾಗೂ ವಾರ್ತಾ ಇಲಾಖೆ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಪ್ರಯುಕ್ತ ಜಾಥಾ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ತಂಬಾಕು ಉತ್ಪನ್ನಗಳ ಸೇವನೆಯಿಂದ ಸ್ವಾಸಕೋಶ ಸಮಸ್ಯೆ, ಹಾಗೂ ಕ್ಯಾನ್ಸರ್‌ನಂತರ ಗಂಭೀರ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಿದ್ದರೂ ಸಹ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಸೇವನೆ ಮಾಡುತ್ತಿರುವುದು ವಿಷಾಧಕರ ಸಂಗತಿಯಾಗಿದೆ. ಹಣದ ಸಂಪತ್ತಿಗಿಅತ ಆರೋಗ್ಯ ಭಾಗ್ಯ ದೊಡ್ಡದು. ತಂಬಾಕು ಉತ್ಪನ್ನಗಳ ಸೇವನೆ ತಡೆಗೆ ಆರೋಗ್ಯ ಇಲಾಖೆಯೊಂದಿಗೆ ಇತರೆ ಇಲಾಖೆಗಳು ಹಾಗೂ ಸಾರ್ವಜನಿಕರು ಕೈಜೋಡಿಸಬೇಕು ಎಂದು ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿ ತಂಬಾಕು ಸೇವನೆಯಿಂದ ಮಾನವನ ದೇಹದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಿ, ಕೋಟ್ಪಾ-2003 ರ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಗೊಳಿಸಿ, ತಂಬಾಕು ಸೇವನೆ ತ್ಯಜಿಸಲು ಅಗತ್ಯ. ಆಪ್ತ ಸಮಾಲೋಚನೆಯ ಮೂಲಕ ತಂಬಾಕು ಸೇವನೆಯನ್ನು ತ್ಯಜಿಸುವಂತೆ ಪ್ರೇರೇಪಿಸಿ, ಯುವ ಸಮುದಾಯ ವ್ಯಸನಕ್ಕೆ ಬಲಿಯಾಗದಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ಭಾರತದಲ್ಲಿ ಸುಮಾರು 27 ಕೋಟಿಗೂ ಅಧಿಕ ಜನ ತಂಬಾಕು ಬಳಕೆದಾರರಿದ್ದು, ಪ್ರತಿವರ್ಷ 13 ಲಕ್ಷಕ್ಕೂ ಹೆಚ್ಚು ಜನರು ತಂಬಾಕು ಸೇವನೆ ಕಾಯಿಲೆಗಳಿಂದ ಮರಣಹೊಂದುತ್ತಿದ್ದಾರೆ. ವಿಪರ್ಯಾಸವೆಂದರೆ, ಶೇ.48 ರಷ್ಟು ತಂಬಾಕು ಬಳಕೆದಾರರು ಗ್ರಾಮೀಣ ಪ್ರದೇಶದವರಾಗಿದ್ದು, ಕರ್ನಾಟಕದಲ್ಲಿ ಶೇ.22.8 ರಷ್ಟು ವ್ಯಕ್ತಿಗಳು ತಂಬಾಕು ಉತ್ಪನ್ನ ಸೇವನೆ ಮಾಡುತ್ತಾರೆ ಎಂದು ವಿಷಾದವ್ಯಕ್ತಪಡಿಸಿದರು.

ಹಿರಿಯ ದಿವಾಣಿ ನ್ಯಾಯಾಧೀಶರಾದ ಶ್ರೀಶೈಲಜಾ ಎಚ್.ವಿ., ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸಿದ್ದನಗೌಡ ಎಚ್.ಸಿ., ಕಾರ್ಯದರ್ಶಿ ಪಿ.ಎಸ್.ಹೆಬ್ಬಾಳ, ಜಿಲ್ಲಾ ಶಸ್ತ್ರ ಚಿಕಿತ್ಸಕ ಮತ್ತು ವೈದ್ಯಕೀಯ ಅಧೀಕ್ಷಕ ಡಾ.ಪಿ.ಆರ್.ಹಾವನೂರ, ಜಿಲ್ಲಾ ಜಾರಿ ಅಧಿಕಾರಿ ಹಾಗೂ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ದೇವರಾಜ ಸಾರಥಿ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ಭಾರತಿ ಎಚ್., ಡಾ.ನಿಲೇಶ, ಡಾ.ಪರಸಪ್ಪ ಚುರ್ಚಿಹಾಳ, ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ ಹಾಗೂ ಜಿಲ್ಲಾ ಶುಶ್ರೂಷಕ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಸರಸ್ವತಿ ವೈ.ಎಚ್.,ಡಾ.ಸಂತೋಷ ದಡ್ಡಿ, ದಾದಾಪೀರ ಇತರರು ಉಪಸ್ಥಿತರಿದ್ದರು.

ಹಾವೇರಿಯಲ್ಲಿ ಜಿಲ್ಲಾಡಳಿತದಿಂದ ವಿಶ್ವ ತಂಬಾಕು ರಹಿತ ದಿನಾಚರಣೆ ನಿಮಿತ್ತ ನಡೆದ ಜಾಥಾಗೆ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಜಿ.ಶಿವಳ್ಳಿ ಹಸಿರು ನಿಶಾನೆ ನೀಡಿದರು.

ಮಕ್ಕಳಿಗೆ ಉನ್ನತ ಶಿಕ್ಷಣವನ್ನೇ ದೊಡ್ಡ ಆಸ್ತಿಯನ್ನಾಗಿ ಮಾಡಿ

ವಿಶ್ವವಾಣಿ ಸುದ್ದಿಮನೆ ಹಾವೇರಿ

ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಉದ್ಘಾಟನೆಗೊಂಡಿರುವುದು ಹಾವೇರಿ ಇತಿಹಾಸದಲ್ಲಿ ಶೈಕ್ಷಣಿಕವಾಗಿ ಮಹತ್ತರ ಹೆಜ್ಜೆ ಇರಿಸಿದಂತಾಗಿದೆ. ಗುಣಮಟ್ಟದ ಶಿಕ್ಷಣ, ಒಳ್ಳೆಯ ಸಂಸ್ಕಾರ ಪಡೆದ ವ್ಯಕ್ತಿ ಒಳ್ಳೆಯ ಪ್ರಜೆ ಆಗಿ ದೇಶ ಸೇವೆ ಮಾಡುತ್ತಾರೆ. ದೇಶ ಭಕ್ತ ಶ್ರೇಷ್ಠ ಪ್ರಜೆಗಳನ್ನು ರೂಪಿಸುವ ಕೆಲಸವನ್ನು ಈ ವಿದ್ಯಾಕೇದ್ರ ಮಾಡುತ್ತದೆ ಎಂದು ಹುಕ್ಕೇರಿಮಠದ ಡಾ.ಸದಾಶಿವ ಮಹಾಸ್ವಾಮೀಜಿ ಹೇಳಿದರು.

ಹಾವೇರಿ ತಾಲೂಕು ದೇವಿಹೊಸೂರ ಗ್ರಾಮದಲ್ಲಿ ನೂತನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲಾ ಕಟ್ಟಡದ ಲೋಕಾರ್ಪಣೆ, ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಆಂಗ್ಲ ಭಾಷೆ ಶಿಕ್ಷಣದ ಜತೆಗೆ ಮಕ್ಕಳಿಗೆ ಉತ್ತಮ ಸಂಸ್ಕಾರವೂ ಅವಶ್ಯ. ಶಿಕ್ಷಣದೊಂದಿಗೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಟ್ಟರೆ ಅವರ ತಲೆಗೆ ಬಂಗಾರದ ಕಳಸ ಇಟ್ಟಂತೆ. ಅಂತಹ ಕೆಲಸವನ್ನು ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಮಾಡಲಿದೆ. ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಅವರನ್ನೇ ಆಸ್ತಿಯನ್ನಾಗಿ ಮಾಡಿದರೆ ಅವರು ದೇಶದ ಆಸ್ತಿ ಆಗುತ್ತಾರೆ. ಪಡೆದ ವಿದ್ಯೆಗೆ ತೆರಿಗೆ ಕಟ್ಟುವ ಅವಶ್ಯಕತೆ ಇಲ್ಲ, ಶಿಕ್ಷಣ ಬಳಸಿದಂತೆ ಬೆಳೆಯುತ್ತೆ. ನಕ್ಷತ್ರವಾಗಿ ಹೊಳೆಯುತ್ತೆ ವಿನಃ ಕೊಳೆಯುವುದಿಲ್ಲ, ಮೊಬೈಲ್ ಸಂಸ್ಕೃತಿಯನ್ನು ಬಿಡಿಸುವ ಜವಾಬ್ದಾರಿ ತಾಯಂದಿರ ಕೈಯಲ್ಲಿದೆ. ಆರಂಭದ 3 ವರ್ಷ ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಟ್ಟರೆ ಅವರು 100 ವರ್ಷ ಶ್ರೇಷ್ಠ ವ್ಯಕ್ತಿಗಳಾಗಿ ಬಾಳುತ್ತಾರೆ. ಮೊಬೈಲ್ ಸಂಸ್ಕೃತಿ ನಮ್ಮಿಂದ ದೂರವಾಗಿ ಓದುವ ಸಂಸ್ಕೃತಿ ಹೆಚ್ಚಾಗಬೇಕು. ಬೇರೆ ಜಿಲ್ಲೆಯ ಮಕ್ಕಳು ಸಹ ಇಲ್ಲಿಗೆ ಬಂದು ಸರದಿಯಲ್ಲಿ ನಿಂತು ದಾಖಲಾತಿ ಮಾಡಿಕೊಳ್ಳುವಷ್ಟರ ಮಟ್ಟಿಗೆ ಈ ವಿದ್ಯಾಕೇಂದ್ರ ಬೆಳೆಯಲಿ ಎಂದು ಆಶಿಸಿದರು.

ರಾಷ್ಟ್ರೋತ್ಥಾನ ಪರಿಷತ್ನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ ಹೆಗ್ಡೆ ಮಾತನಾಡಿ, ರಾಷ್ಟ್ರೋತ್ಥಾನ ಪರಿಷತ್ನ ಸೇವಾ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದು, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಬಡಮಕ್ಕಳಿಗೆ ಐಐಟಿ, ಮೆಡಿಕಲ್ ಕಲಿಯಲು ತರಬೇತಿ ಕೊಡಿಸುವ ಕೆಲಸ ಮಾಡುತ್ತಿದೆ. ಒಂದು ವರ್ಷದ ಹಿಂದೆ ಇಲ್ಲಿ ಭೂಮಿ ಪೂಜೆ ನೆರವೇರಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ತರಗತಿ ಆರಂಭಿಸುವುದಾಗಿ ವಾಗ್ದಾನ ಮಾಡಿದ್ದೇವು. ಅನೇಕ ಅಡೆತಡೆಗಳ ನಡುವೆಯೂ ಇಲ್ಲಿನ ಉದ್ಯಮಿ ಪವನ ಬಹದ್ದೂರದೇಸಾಯಿ ಅವರ ಸಹಕಾರದೊಂದಿಗೆ 7ಎಕರೆ ಜಮೀನಿನಲ್ಲಿ 85ಸಾವಿರ ಚದರ್‌ಅಡಿಯಲ್ಲಿ ಕಟ್ಟಡ ನಿರ್ಮಾಣವಾಗಿದೆ ಎಂದರು.

ಶಾಲೆ ಅಂದರೆ ಅದೊಂದು ಕಟ್ಟಡ ಅಲ್ಲ, ಪ್ರತಿಭಾವಂತ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಅವರಿಗೆ 10 ದಿನಗಳ ಕಾಲ ಪಂಚಮುಖಿ ಶಿಕ್ಷಣದ ಬಗ್ಗೆ ದಾವಣಗೆರೆಯಲ್ಲಿ ತರಬೇತಿ ಕೊಟ್ಟಿದ್ದೇವೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಸಂಸ್ಕೃತಿ, ಸಂಸ್ಕಾರ ಕಲಿಸುತ್ತೇವೆ ಎಂದರು. ಆರ್‌ಎಸ್‌ಎಸ್ನ ಉ.ಕ. ಪ್ರಾಂತ ಕಾರ್ಯವಾಹಕರಾದ ರಾಘವೇಂದ್ರ ಕಾಗವಾಡ ಮಾತನಾಡಿದರು. ಡಿಡಿಪಿಐ ಮೋಹನ್ ದಂಡಿನ್ ಮಾತನಾಡಿ, ಶಿಕ್ಷಣ ಇಲಾಖೆಯ ನಿಯಮದ ಪ್ರಕಾರವೇ ಭವ್ಯವಾದ ಕಟ್ಟಡ ನಿರ್ಮಾಣವಾಗಿದೆ, ಶಾಲೆಯೊಂದಿಗೆ ಮನೆಯಲ್ಲಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬೇಕು ಎಂದರು.

ರಾಷ್ಟ್ರೋತ್ಥಾನ ಪರಿಷತ್ ಸದಸ್ಯರಾದ ಪವನ ಬಹದ್ದೂರದೇಸಾಯಿ, ಪ್ರಧಾನ ಗುರುಮಾತೆ ಶ್ಯಾಮಲಾ ವೇದಿಕೆ ಮೇಲಿದ್ದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಕಾರಿ ಡಾ.ನಾಗರಾಜ್ ಎಲ್., ಹಾವೇರಿ ವಿವಿ ಕುಲಪತಿ ಪ್ರೊ. ಸುರೇಶ ಜಂಗಮಶೆಟ್ಟಿ, ಹುಡಾ ಅಧ್ಯಕ್ಷ ಎಸ್‌ಎಫ್‌ಎನ್ ಗಾಜೀಗೌಡ್ರ, ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಗವಿಸಿದ್ದಪ್ಪ ದ್ಯಾಮಣ್ಣನವರ, ಬಿಇಒ ಮಾರುತಿ ಇತರರಿದ್ದರು. ರಾಷ್ಟ್ರೋತ್ಥಾನ ಪರಿಷತ್ ಸದಸ್ಯರಾದ ಜಯಣ್ಣ ಸ್ವಾಗತಿಸಿದರು. ದಾವಣಗೆರೆ, ಹಾನಗಲ್ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳು, ಶಿಕ್ಷಕರು ಇದ್ದರು.

ಹಾವೇರಿ ತಾಲೂಕು ದೇವಿಹೊಸೂರ ಬಳಿ ನೂತನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲಾ ಕಟ್ಟಡದ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಗಣ್ಯರು ಚಾಲನೆ ನೀಡಿದರು.

ಸಂಗೀತ ಸಮ್ಮೇಳನ ಜೂ. 3ರಂದು

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಜೂ. 3ರಂದು ಬೆಳಗ್ಗೆ 10.30ಕ್ಕೆ ನಾದಲಹರಿ ಸಂಗೀತ ಸಾಂಸ್ಕೃತಿಕ ಟ್ರಸ್ಟ್ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕವಿವಿ ಕುಲಸಚಿವ ಡಾ. ಮೃತ್ಯುಂಜ ಅಗಡಿ ಹೇಳಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕವಿವಿ ಸಂಗೀತ ಅಧ್ಯಯನ ವಿಭಾಗ, ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್ ಚೇರ್‌ಹಾಗೂ ನಾದಲಹರಿ ಸಂಗೀತ ಸಾಂಸ್ಕೃತಿಕ ಟ್ರಸ್ಟ್ ಆಶ್ರಯದ ಕಾರ್ಯಕ್ರಮದಲ್ಲಿ ಸಂಗೀತ ಸಮ್ಮೇಳನ ನಡೆಯಲಿದೆ ಎಂದರು. ಮನಸೂರು ಶ್ರೀ ರೇವಣಸಿದ್ದೇಶ್ವರ ಮಠದ ಬಸವರಾಜ ದೇವರು ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಕವಿವಿ ಕುಲಪತಿ ಪ್ರೊ. ಎ.ಎಂ. ಖಾನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿಂದೂಸ್ತಾನಿ ಗಾಯಕ ಪದ್ಮಶ್ರೀ ವೆಂಕಟೇಶಕುಮಾರ ಭಾಗವಹಿಸುವರು. ಈ ವೇಳೆ ಹಿರಿಯ ಗಾಯಕ ಪಂ. ಸೋಮನಾಥ ಮರಡೂರ್ ಹಾಗೂ ಪಂ. ಸುಧಾಕರ್‌ಚವಾಣ್ ಅವರಿಂದ ಗಾಯನ ನಡೆಯಲಿದೆ. ಸತ್ತಿಂಗಪ್ಪ ದೇಸಾಯಿ ಕಲ್ಲೂರ, ಶ್ರೀಧರ ಮಾಂಡ್ರೆ, ಡಾ. ಪರಶುರಾಮ ಕಟ್ಟಿಸಂಗವಿ ಸಾಥ್ ನೀಡಲಿದ್ದಾರೆ ಎಂದರು.

ಮಗನ ಕಣ್ಣೆದುರೇ ತಂದೆ ಜಲಸಮಾಧಿ

ಜೇವರ್ಗಿ: ಮಗನ ಕಣ್ಣೆದುರೇ ತಂದೆಯೊಬ್ಬರು ಭೀಮಾ ನದಿಯಲ್ಲಿ ಮುಳುಗಿ ಸಾವನ್ನಪ್ಪಿರುವ ಹೃದಯವಿದ್ರಾವಕ ಘಟನೆ ತಾಲೂಕಿನ ಕಟ್ಟಿ ಸಂಗಾವಿ ಗ್ರಾಮದ ಬಳಿ ಸಂಭವಿಸಿದೆ.

ವಿಜಯರಾಜು ಬಳ್ಳಾರಿ (45) ನದಿಯಲ್ಲಿ ಮುಳುಗಿ ಮೃತಪಟ್ಟ ದುರ್ದೈವಿ. ತಂದೆ ಮಗ ಇಬ್ಬರು ಸೇರಿ ಕಳೆದ 2 ದಿನಗಳ ಹಿಂದೆ ಎಮ್ಮೆ ತೊಳೆಯಲು ಭೀಮಾನದಿಗೆ ತೆರಳಿದ್ದರು. ಈ ವೇಳೆ ಎಮ್ಮೆಗಳು ಆ ದಡಕ್ಕೆ ಹೋಗಿದ್ದವು. ಆ ದಂಡೆಯಿಂದ ಎಮ್ಮೆಗಳನ್ನು ವಾಪಸ್ ಈ ದಂಡೆಗೆ ಓಡಿಸಿಕೊಂಡು ತಂದೆ ಬರುತ್ತಿದ್ದರು. ಎಮ್ಮೆಗಳನ್ನು ಓಡಿಸುತ್ತಿದ್ದ ತಂದೆಯ ವಿಡಿಯೊವನ್ನು ಮಗ ಕುತೂಹಲದಿಂದ ಮಾಡುತ್ತಿದ್ದನು. ನೀರಿನ ಸೆಳವಿಗೆ ಸಿಕ್ಕ ವಿಜಯರಾಜು ನದಿಯಲ್ಲಿ ಮಗನ ಕಣ್ಣೆದುರೆ ಜಲಸಮಾಧಿ ಆಗಿದ್ದಾರೆ. ಸಾವಿನ ಕೊನೆ ಘಳಿಗೆಯ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ. ನಿಸ್ಸಾಯಕ ಸ್ಥಿತಿಯಲ್ಲಿದ್ದ ಮಗನ ಕಂಡು ಜನ ಮಮ್ಮಲ ಮರುಗುತ್ತಿದ್ದಾರೆ. ಈ ಸಂಬಂಧ ಫರಹತಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

3200 ರು. ದಾಟಿದ ವಾಣಿಜ್ಯ ಸಿಲಿಂಡರ್

← ಮೊದಲ ಪುಟದಿಂದ

ಜಾಗತಿಕ ಇಂಧನ ಮಾರುಕಟ್ಟೆಯಲ್ಲಿನ ಅಸ್ಥಿರತೆಯ ನಡುವೆ ಇಂಧನ ಭದ್ರತೆಯನ್ನು ಬಲಪಡಿಸಲು ಹಾಗೂ ಸಮರ್ಪಕ ಪ್ರಮಾಣದ ಸಂಗ್ರಹವನ್ನು ಕಾಯ್ದುಕೊಳ್ಳಲು ಸರಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದ ಕೆಲವೇ ದಿನಗಳ ಬಳಿಕ ಈ ಪರಿಷ್ಕರಣೆ ಮಾಡಲಾಗಿದೆ. ಅಂತರ ಸಚಿವಾಲಯದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ, ' ಸರಕಾರವು ತೈಲ ಮಾರುಕಟ್ಟೆ ಕಂಪನಿಗಳು ಕನಿಷ್ಠ 30 ದಿನಗಳ ಎಲ್‌ಪಿಜಿ ಮೀಸಲು ಕಾಯ್ದುಕೊಳ್ಳುವಂತೆ ಕೇಳಿಕೊಂಡಿದೆ. ಪ್ರಸ್ತುತ ಇಂಧನ ಪೂರೈಕೆಯ ಕೊರತೆಯಿಲ್ಲ' ಎಂದು ತಿಳಿಸಿದರು. ಜಾಗತಿಕ ಇಂಧನ ಬೆಲೆಗಳ ಏರಿಳಿತದ ನಡುವೆ ಕಳೆದ ಕೆಲವು ತಿಂಗಳಲ್ಲಿ ವಾಣಿಜ್ಯ ಎಲ್‌ಪಿಜಿ ದರಗಳನ್ನು ನಿರಂತರವಾಗಿ ಏರಿಸಲಾಗಿದೆ. ಕಳೆದ ಎರಡು ವರ್ಷಗಳಿಂದ ಒಂದೇ ದರ ಕಾಯ್ದುಕೊಂಡಿದ್ದ ಗೃಹ ಬಳಕೆ ಎಲ್‌ಪಿಜಿ ದರವನ್ನೂ ಕಳೆದ ತಿಂಗಳು ಏರಿಸಲಾಗಿತ್ತು. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಮುಖ್ಯವಾಗಿ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ರಸ್ತೆಬದಿ ಉಪಹಾರ ಗೃಹಗಳು ಹಾಗೂ ಆಸ್ಪತ್ರೆ ಮುಂತಾದ ವಾಣಿಜ್ಯ ಸಂಸ್ಥೆಗಳು ಬಳಸುತ್ತವೆ. ಸಬ್ಸಿಡಿ ಹೊಂದಿರುವ ಗೃಹಬಳಕೆಯ ಎಲ್‌ಪಿಜಿ ವರ್ಗದ ವ್ಯಾಪ್ತಿಗೆ ಬಾರದ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಫ್ರೀ ಟ್ರೇಡ್ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಸಲಾಗುತ್ತದೆ.

ಸಚಿವ ಸ್ಥಾನ ಕೊಡಿಸೋದು ಸಿದ್ದರಾಮಯ್ಯ ಜವಾಬ್ದಾರಿ

ಬೆಂಗಳೂರು: ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಸಚಿವ ಸ್ಥಾನವನ್ನು ನನಗೆ ಕೊಡಿಸುವುದು ಸಿದ್ದರಾಮಯ್ಯ ಅವರ ಜವಾಬ್ದಾರಿ ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ್ ಒತ್ತಡ ಹೇರಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ಸಿದ್ದರಾಮಯ್ಯನವರು ಜೆಡಿಎಸ್ ಬಿಟ್ಟು ಹೊರಬಂದಾಗ ನಾನು ಏಕೈಕ ಲಿಂಗಾಯಿತ ಸಮುದಾಯದವನಾಗಿ ಅಹಿಂದ ಚಳುವಳಿಯಲ್ಲಿ ಸಿದ್ದರಾಮಯ್ಯನವರ ಜತೆ ಇಡೀ ರಾಜ್ಯವನ್ನು ಸುತ್ತಾಡಿ ಹೋರಾಟಕ್ಕೆ ಹೆಗಲುಕೊಟ್ಟು ಅಹೋರಾತ್ರಿ ದುಡಿದಿರುತ್ತೇನೆ. ಒಟ್ಟಿಗೆ ಎಂಟು ಶಾಸಕರು ಜೆಡಿಎಸ್ ಬಿಟ್ಟು ಬಂದ ಸಂಕಷ್ಟ ಪರಿಸ್ಥಿತಿಯಲ್ಲಿ ವಿಧಾನಸಭೆಯ ಸದಸ್ಯತ್ವ ರದ್ದಾದರೂ ಚಿಂತಿಸದೇ ನೈತಿಕವಾಗಿ ಸಿದ್ದರಾಮಯ್ಯನವರರೊಟ್ಟಿಗೆ ಬೆನ್ನೆಲುಬಾಗಿ ನಿಂತು ಬಂದಿರುತ್ತೇನೆ. ಆದರೆ, ನನ್ನೊಬ್ಬನನ್ನು ಬಿಟ್ಟು ಬಹುತೇಕ ಶಾಸಕರು ಮಂತ್ರಿಗಳಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಅಂದಿನಿಂದ ಮಂತ್ರಿ ಸ್ಥಾನದಿಂದ ವಂಚಿತನಾಗಿರುವ ನನಗೆ ಸಿದ್ದರಾಮಯ್ಯನವರೇ ಮುತುವರ್ಜಿ, ಕಾಳಜಿ ವಹಿಸಿ ಮಾಂತ್ರಿ ಸ್ಥಾನ ನನಗೆ ಸಿಗುವಲ್ಲಿ ಕಾರಣೀಭೂತರಾಗಿ ಸಹಾಯ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ವಿದ್ಯಾರ್ಥಿ ಜೀವನದಿಂದ ಸತತವಾಗಿ ಹೋರಾಟ ಮಾಡಿಕೊಂಡು 1978 ರಲ್ಲಿ ಆಳಂದ ತಾಲೂಕು ಬೋರ್ಡ್‌ನಿಂದ ಮೊದಲ ಬಾರಿಗೆ ಗೆದ್ದುಬಂದು, 1983ರಲ್ಲಿ ನಾನು ಕೇಳದೇ ಆ ದಿನಮಾನದಲ್ಲಿ ಜನತಾ ಪಕ್ಷದಿಂದ ಟಿಕೆಟ್ ಪಡೆದು ವಿಧಾನಸಭೆಗೆ ಆಯ್ಕೆಯಾಗಿ ಅಂದಿನಿಂದ ಇಲ್ಲಿಯವರೆಗೆ ಸುಮಾರು ಐದು ದಶಕಗಳ ಸುಧೀರ್ಘ ಕಾಲ ಜನಪರ ಹೋರಾಟಗಳಾದ ಅಹಿಂದ ಚಳುವಳಿ, ರೈತ ಹೋರಾಟ, ಪರಿಸರ ಕಾಳಜಿ ಹೋರಾಟ, ಕಾರ್ಮಿಕ ಚಳುವಳಿ ಹಾಗೂ ವಿವಿಧ ನೀರಾವರಿ ಹೋರಾಟದಲ್ಲಿ ತೊಡಗಿಸಿಕೊಂಡಿರುವ ನಾನು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿರುತ್ತೇನೆ. ಮಂತ್ರಿ ಪದವಿ ಕೇಳುವುದು ನನ್ನ ಹಕ್ಕಾಗಿದ್ದು, ಸಿದ್ದರಾಮಯ್ಯನವರು ಮಂತ್ರಿ ಪದವಿಯನ್ನು ನನಗೆ ಕೊಡಿಸುವುದು ಅವರ ಕರ್ತವ್ಯವಾಗಿರುತ್ತದೆಂದು ಭಾವಿಸುತ್ತೇನೆ ಎಂದಿದ್ದಾರೆ.

ಮೇಧಾ ಪಾಟ್ಕರ್, ರೈತ ಮುಖಂಡರಾದ ರಾಕೇಶ್ ಟಿಕಾಯತ್, ಪರಿಸರವಾದಿ ರಾಜೇಂದ್ರ ಸಿಂಗ್, ಯೋಗೇಂದ್ರ ಯಾದವ್ ಮುಂತಾದವರುಗಳು ಭಾಗಿಗಳಾಗಿದ್ದ ಎಲ್ಲ ಹೋರಾಟಗಳಲ್ಲಿ ನಾನು ಭಾಗಿಯಾಗಿ ಅವರೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತೇನೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ನನಗೆ ಸಚಿವ ಸ್ಥಾನ ನೀಡುವುದಾಗಿ ಭರವಸೆ ನೀಡಿದ್ದರು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯವರು ಪ್ರಜಾತಂತ್ರವನ್ನು ಕಗ್ಗೊಲೆ ಮಾಡಲು ನನ್ನ ಆಳಂದ ಕ್ಷೇತ್ರದಲ್ಲಿ ವೋಟ್ ಚೋರಿ ಮಾಡಲು ರೂಪಿಸಿದ ವ್ಯವಸ್ಥಿತ ಕುತಂತ್ರವನ್ನು ನಾನು ಬಯಲಿಗೆಳೆದೆ. ಆ ಕಾರಣ ರಾಹುಲ್ ಗಾಂಧಿ ಅವರು ಈ ಸಂಬಂಧ ಹೋರಾಟಕ್ಕೆ ಇಳಿದು ಈ ಪ್ರಕರಣವನ್ನು ಇಡೀ ದೇಶದ ಮುಂದೆ ಬಿಚ್ಚಿಟ್ಟು ಹೋರಾಟಕ್ಕೆ ನಾಂದಿ ಹಾಡಿದರು. ಇಡೀ ದೇಶದಲ್ಲೆ ಚಾರ್ಜ್‌ಶೀಟ್ ದಾಖಲಾದ ಏಕೈಕ ಪ್ರಕರಣ ಇದಾಗಿದೆ. ಆ ಕಾರಣಕ್ಕಾಗಿ, ನನಗೆ ಮಂತ್ರಿ ಸ್ಥಾನ ನೀಡುವಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಸಹಮತಿ ಸೂಚಿಸುತ್ತಾರೆಂದು ಅಚಲ ವಿಶ್ವಾಸದಿಂದ ಕೋರುತ್ತೇನೆ ಎಂದು ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

ಬಿಜೆಪಿಯಲ್ಲಿ ಯಥಾಸ್ಥಿತಿ ಅಶೋಕ್ ಸ್ಥಾನಕ್ಕಿಲ್ಲ ಕುತ್ತು

← ಮೊದಲ ಪುಟದಿಂದ

ಚುನಾವಣೆಗೆ ಎರಡು ವರ್ಷವಿರುವುದರಿಂದ ಬಿಜೆಪಿ ಸಾಮಾಜಿಕ ಹಾಗೂ ಜಾತಿ ಸಮೀಕರಣಗಳನ್ನು ಪುನರ್‌ಪರಿಶೀಲಿಸುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೆ ಜಿಬಿಎ ಚುನಾವಣೆ ಹಾಗೂ ನಗರ ಪ್ರದೇಶಗಳಲ್ಲಿ ಪಕ್ಷದ ಸಂಘಟನೆಯನ್ನು ಗಮನದಲ್ಲಿರಿಸಿಕೊಂಡು ಪ್ರತಿಪಕ್ಷ ನಾಯಕ ಆರ್. ಅಶೋಕ ಅವರನ್ನು ಆಯಕಟ್ಟಿನ ಸ್ಥಾನದಲ್ಲೇ ಮುಂದುವರಿಸುವ ಸಾಧ್ಯತೆಯಿದೆ. ಈ ಮೂಲಕ ಬೆಂಗಳೂರಿನಲ್ಲಿ ಒಕ್ಕಲಿಗ ಸಮುದಾಯದ ಪ್ರಭಾವ ಮತ್ತು ಚುನಾವಣೆಯಲ್ಲಿ ಅವರ ನಾಯಕತ್ವದ ಉಪಯೋಗ ಪಡೆಯುವ ಲೆಕ್ಕಾಚಾರವಿದೆ. ಇನ್ನೊಂದೆಡೆ, ಒಬಿಸಿ ಸಮುದಾಯಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಕೇಂದ್ರದಲ್ಲಿ ಹೊಸ ಮುಖಗಳಿಗೆ ಅವಕಾಶ ನೀಡುವ ಚರ್ಚೆ ಶುರುವಾಗಿದೆ. ಪ್ರಮುಖವಾಗಿ ಮೂರು ಬಾರಿಯ ಸಂಸದ ಪಿ.ಸಿ. ಮೋಹನ್ ಅವರಿಗೆ ಕೇಂದ್ರ ಸಚಿವ ಸ್ಥಾನ ನೀಡುವ ಮೂಲಕ ಒಬಿಸಿ ಸಮುದಾಯಕ್ಕೆ ಸ್ಪಷ್ಟ ಸಂದೇಶ ನೀಡುವ ಲೆಕ್ಕಾಚಾರದಲ್ಲಿ ಬಿಜೆಪಿ ನಾಯಕರಿದ್ದಾರೆ ಎನ್ನಲಾಗಿದೆ. ಮೂಲಗಳ ಪ್ರಕಾರ, ಒಕ್ಕಲಿಗ, ಒಬಿಸಿ ಮತ್ತು ಲಿಂಗಾಯತ ಸಮುದಾಯಗಳ ನಾಯಕರಿಗೆ ಸೂಕ್ತ ಸ್ಥಾನಮಾನ ನೀಡುವ ಜತೆಗೆ ಎಲ್ಲರಿಗೂ ಸಮಾನ ಅವಕಾಶ ನೀಡುವುದು ಬಹುದೊಡ್ಡ ಸವಾಲಾಗಿದೆ. ಆದರೆ ಕಾಂಗ್ರೆಸ್‌ನಲ್ಲಾಗಿರುವ ಸ್ಥಾನಪಲ್ಲಟಗಳಿಗೆ ಪ್ರತಿಯಾಗಿ ಬಿಜೆಪಿಯೂ ತನ್ನ ಸಮೀಕರಣವನ್ನು ಮತ್ತಷ್ಟು ಬಲಪಡಿಸುವ ದಿಕ್ಕಿನಲ್ಲಿ ಹೆಜ್ಜೆ ಇಡುವ ಸಾಧ್ಯತೆಗಳಿವೆ.

ಕಪ್ ಗೆದ್ದರೂ ಇಲ್ಲ ವಿಜಯೋತ್ಸವ!

← ಮೊದಲ ಪುಟದಿಂದ

ಸಂಚಾರಿ ಪೊಲೀಸರು ಭಾನುವಾರ ಒಂದೇ ರಾತ್ರಿಯಲ್ಲಿ 260 ಡ್ರಂಕ್ ಆ್ಯಂಡ್ ಡ್ರೈವ್ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಿಯಮ ಉಲ್ಲಂಘಿಸಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದ ಹಾಗೂ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಒಟ್ಟು 75 ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉತ್ತರ ವಿಭಾಗದ 13 ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಹಿರಿಯ ಅಧಿಕಾರಿಗಳು ಸೇರಿದಂತೆ ಎಲ್ಲಾ ವರ್ಗದ ಸಿಬ್ಬಂದಿ ರಾತ್ರಿ ಗಸ್ತು ಕಾರ್ಯದಲ್ಲಿ ತೊಡಗಿದ್ದರು. ಪ್ರಮುಖ ರಸ್ತೆಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿ ತೀವ್ರ ವಾಹನ ತಪಾಸಣೆ ನಡೆಸಲಾಯಿತು. ಈ ವೇಳೆ ರಸ್ತೆಗಳಲ್ಲಿ ಅಪಾಯಕಾರಿಯಾಗಿ ದ್ವಿಚಕ್ರ ವಾಹನಗಳಲ್ಲಿ ವೀಲಿಂಗ್ ಮಾಡುತ್ತಿದ್ದ ಪುಂಡರು, ತ್ರಿಬಲ್ ರೈಡಿಂಗ್ ಮಾಡುತ್ತಿದ್ದವರು ಹಾಗೂ ಅನುಮಾನಾಸ್ಪದವಾಗಿ ಕಂಡು ಬಂದ ವಾಹನಗಳನ್ನು ಪೊಲೀಸರು ತಡೆದು ಪರಿಶೀಲಿಸಲಾಗಿದೆ.

ಶೀಘ್ರದಲ್ಲೇ ಬಿಜೆಪಿಗೆ ಅಣ್ಣಾಮಲೈ ಗುಡ್‌ಬೈ?

← ಮೊದಲ ಪುಟದಿಂದ

ಇಷ್ಟಾದೂ ಪ್ರಧಾನಿ ನರೇಂದ್ರ ಮೋದಿ, ಅಣ್ಣಾಮಲೈ ಅವರಿಗೆ ಸ್ಫೂರ್ತಿಯಾಗಿ ಮುಂದುವರಿದಿದ್ದಾರೆ ಎಂದು ಅವು ತಿಳಿಸಿವೆ. ಕೇಂದ್ರ ನೀತಿಗೆ ವಿರೋಧ: ಇತ್ತೀಚೆಗೆ ಸಿಬಿಎಸ್‌ಇ ತ್ರಿಭಾಷಾ ನೀತಿ ಸೇರಿ ಕೇಂದ್ರ ಸರಕಾರದ ನಿಲುವನ್ನು ಅಣ್ಣಾಮಲೈ ವಿರೋಧಿಸಿದ್ದರು. ಅಲ್ಲದೆ, ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ್ದರು. ಹೀಗಾಗಿ ಅವರ ಮುಂದಿನ ನಿಲುವು ಏನು ಎಂಬ ಪ್ರಶ್ನೆ ಉದ್ಭವಿಸಿದ್ದವು. ಬಿಜೆಪಿಯಲ್ಲಿ ಅಣ್ಣಾಮಲೈ ಅವರನ್ನು ಕಡಗಣನೆ ಮಾಡಲಾಗುತ್ತಿದೆ ಎಂಬ ಮಾತುಗಳ ನಡುವೆ ತಮ್ಮ ಹೊಸ ಆಂದೋಲನದ ಮೂಲಕ ಬಿಜೆಪಿಗೆ ಶಾಕ್ ಕೊಡಲು ಅಣ್ಣಾಮಲೈ ಮುಂದಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಹೈ ಮುಂದೆ ಸಂಪುಟ ಸರ್ಕಸ್

← ಮೊದಲ ಪುಟದಿಂದ

ಮಹಿಳಾ ಅಭ್ಯರ್ಥಿ ಯಾಗಿ ಶರ್ಮಿಳಾ ರೆಡ್ಡಿ ಅವರ ಹೆಸರು ಓಡುತ್ತಿದೆ. ಇನ್ನುಳಿದ ಒಂದು ಸ್ಥಾನವನ್ನು ಸಿದ್ದರಾಮಯ್ಯ ಪತ್ನಿ ಅವರಿಗೆ ನೀಡಲು ಹೈಕಮಾಂಡ್ ಬಯಸಿದ್ದರೂ, ಇದಕ್ಕೆ ಸಿದ್ದರಾಮಯ್ಯ ಒಪ್ಪದೇ ಇರುವುದರಿಂದ ಬಿ.ಕೆ. ಹರಿಪ್ರಸಾದ್ ಅವರನ್ನು ಕಳುಹಿಸುವ ಚರ್ಚೆಗಳು ಮುನ್ನಲೆಗೆ ಬಂದಿದೆ. ಈ ಬಗ್ಗೆ ಡಿಕೆಶಿ, ಸಿದ್ದರಾಮಯ್ಯ ಅವರ ಅಭಿಪ್ರಾಯ ಪಡೆದು ಪಕ್ಷದ ಹೈಕಮಾಂಡ್ ಹೆಸರು ಪ್ರಕಟಿಸಲಿದೆ ಎನ್ನಲಾಗಿದೆ.

ಕೆಪಿಸಿಸಿ ಅಧ್ಯಕ್ಷತೆ ಚರ್ಚೆ ಮುಂದಕ್ಕೆ: ಇದೇ ವೇಳೆ ಡಿಕೆಶಿ ಉತ್ತರಾಧಿಕಾರಿಯಾಗಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಯಾರನ್ನು ನೇಮಿಸಬೇಕೆನ್ನುವ ಬಗ್ಗೆ ಪಕ್ಷ ಇದುವರೆಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಸತೀಶ್ ಜಾರಕಿಹೊಳಿ ಅವರನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದೆಂದು ಈ ಮೊದಲು ಹೇಳಲಾಗಿತ್ತು. ಆದರೆ ಕೆಪಿಸಿಸಿ ಅಧ್ಯಕ್ಷತೆಯ ಬಗ್ಗೆ ಇನ್ನೂ ಯಾವುದೇ ತೀರ್ಮಾನ ಆಗಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದ್ದಾರೆ.

ಜಮೀರ್ ಸಚಿವ ಸ್ಥಾನಕ್ಕೂ ಕುತ್ತು?

← ಮೊದಲ ಪುಟದಿಂದ

ಈ ಆಡಿಯೊ ಬೆನ್ನಲ್ಲೇ ಜಮೀರ್ ಅಹ್ಮದ್ ಅವರಿಗೆ ಡಿಸಿಎಂ ಸ್ಥಾನ ಹೋಗಲಿ, ಸಚಿವ ಸ್ಥಾನ ಸಿಗುವ ಬಗ್ಗೆಯೂ ಹಲವು ಅನುಮಾನಗಳಿವೆ. ಈ ಆಡಿಯೊ ವೈರಲ್ ಆಗುತ್ತಿದ್ದಂತೆ ನಸೀರ್ ಅಹ್ಮದ್ ಜತೆ ಜಮೀರ್ ಸುದೀರ್ಘ ಚರ್ಚೆ ನಡೆಸಿದ್ದಾರೆ. ಜಮೀರ್ ಹಾಗೂ ಸಿರಾಜ್ ಇಬ್ಬರೂ ಈ ಆಡಿಯೊ ನಕಲಿ ಎಂದು ಹೇಳಿ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಕಾನಿಇಂ/ಸ.ಕಾ.ಇಂ(ಕ)/ಯೋ.ವಿ.ಕೋ/ಎಫ್–25/26–27/305–06 ದಿನಾಂಕ:25.05.2026

ಪ್ರಕಟಣೆ

ಕವಿಪ್ರನಿನಿಯು ವಿದ್ಯುತ್ ಸರಬರಾಜು ಕಾಯಿದೆ 2003 ಸೆಕ್ಷನ್ 67 ರಡಿಯಲ್ಲಿ ಯೋಜನೆಗಳನ್ನು ರೂಪಿಸಿದೆ ಮತ್ತು ಇದೇ ಕಾಯಿದೆ ಸೆಕ್ಷನ್ 67(2)(C) ರನ್ವಯ ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿ ನೀಡುವ ದೃಷ್ಟಿಯಿಂದ ಈ ಪ್ರಕಟಣೆಯನ್ನು ಇಲ್ಲಿ ಪ್ರಕಟಿಸಲಾಗಿದೆ.

1. ಯೋಜನೆಯ ಹೆಸರು: ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ವೇಮಗಲ್ ಬಳಿ ಪ್ರಸ್ತಾಪಿತ 2x150ಎಂವಿಎ & 1x12.5ಎಂವಿಎ 220/66/11ಕೆ.ವಿ. ವಿದ್ಯುತ್ ಉಪಕೇಂದ್ರ ಮತ್ತು 220/66 ಕೆವಿ ವಿದ್ಯುತ್ ಪ್ರಸರಣ ಮಾರ್ಗಗಳ ನಿರ್ಮಾಣ. ಮೊತ್ತ (ಲಕ್ಷಗಳಲ್ಲಿ): **ರೂ.17242.83**

1. ಕೋಲಾರ ಜಿಲ್ಲೆಯ ಪ್ರಸ್ತಾಪಿತ 220/66 ಕೆವಿ ವೇಮಗಲ್ ಕೈಗಾರಿಕಾ ಪ್ರದೇಶಕ್ಕೆ ಅಸ್ತಿತ್ವದಲ್ಲಿರುವ 400/220 ಕೆವಿ ಕೋಲಾರ ಹೆಚ್‌ವಿಡಿಸಿ (ಪಿಜಿಸಿಐಎಲ್) ಉಪಕೇಂದ್ರದಿಂದ ಡ್ರೇಕ್ ಎಸಿಎಸ್‌ಆರ್ ಕಂಡಕ್ಟರ್‌ನೊಂದಿಗೆ 220ಕೆವಿ ಡಿಸಿ ಲೈನ್ 17.817 ಕಿ.ಮೀ.ಗಳ ಉದ್ದದ ವಿದ್ಯುತ್ ಮಾರ್ಗ ನಿರ್ಮಾಣ.

ಹೊಸ ಮಾರ್ಗ ಹಾದುಹೋಗುವ ಹಳ್ಳಿಗಳ ಸರ್ವೆ.ನಂ/ವಿವರಗಳು: **ಕೋಲಾರ ತಾಲ್ಲೂಕು ಮತ್ತು ಜಿಲ್ಲೆ**

ಹಳ್ಳಿಯ ಹೆಸರು: **ಮೈಲಪ್ಪನಹಳ್ಳಿ,** ಹೋಬಳಿ: **ವೇಮಗಲ್,** ಗೋಪುರ ಸಂಖ್ಯೆ: ಬೇ ರಿಂದ ಎಪಿ–1, ಸ.ಸಂ.: 38, ಗೋ.ಸಂ: ಎಪಿ–1 ರಿಂದ ಎಪಿ–2, ಸ.ಸಂ: 38, ಗೋ. ಸಂ.: ಎಪಿ–2 ರಿಂದ ಎಪಿ–3, ಸ.ಸಂ.: 38, 37/10, 35/6, 35/4, 35/9, 35/2, 36/2, ಹಳ್ಳಿಯ ಹೆಸರು: **ಹಾಲಜೇನಹಳ್ಳಿ,** ಗೋ.ಸಂ: ಎಪಿ–3 ರಿಂದ ಎಪಿ–4, ಸ.ಸಂ: 112, 111, ಹಳ್ಳಿಯ ಹೆಸರು: **ಕಾಮಂಡಹಳ್ಳಿ** ಗೋ.ಸಂ: ಎಪಿ–3 ರಿಂದ ಎಪಿ–4, ಸ.ಸಂ: 144, 181, 144, ಗೋ.ಸಂ: ಎಪಿ–4 ರಿಂದ ಎಪಿ–5, ಸ.ಸಂ: 144, 71, 73, 75, 79/4, 79, 76, ಗೋ.ಸಂ: ಎಪಿ–5 ರಿಂದ ಎಪಿ–6, ಸ.ಸಂ.: 106, 182, 107, ಹಳ್ಳಿಯ ಹೆಸರು: **ಬೈರಂಡಹಳ್ಳಿ,** ಗೋ.ಸಂ: ಎಪಿ–5 ರಿಂದ ಎಪಿ–6, ಸ.ಸಂ: 77, ಗೋ.ಸಂ.: ಎಪಿ–6 ರಿಂದ ಎಪಿ–7, ಸ.ಸಂ.: 77, ಗೋ.ಸಂ: ಎಪಿ–7 ರಿಂದ ಎಪಿ–8, ಸ.ಸಂ.: 77, 76, 88, ಗೋ.ಸಂ: ಎಪಿ–8ರಿಂದ ಎಪಿ–9, ಸ.ಸಂ.: 88, 90/2, 90/1, 99/5, 90/4, 99/4, 99/1, 99/3, 102/2ಸಿ, 103, 104/1, 104/2, ಗೋ.ಸಂ.: ಎಪಿ–9ರಿಂದ ಎಪಿ–10, ಸ.ಸಂ.:105/2, 105/3, ಗೋ.ಸಂ.: ಎಪಿ–10ರಿಂದ ಎಪಿ–11, ಸ.ಸಂ.:108/2, 108/3, 109/1, 109/2, 109/4, 109/5, 110/6, 110/3, ಹಳ್ಳಿಯ ಹೆಸರು: **ಸೀತಿ,** ಗೋ. ಸಂ: ಎಪಿ–10ರಿಂದ ಎಪಿ–11, ಸ.ಸಂ:200, ಹಳ್ಳಿಯ ಹೆಸರು: **ಹುಲ್ಲನಕಲ್ಲು,** ಗೋ.ಸಂ: ಎಪಿ–10ರಿಂದ ಎಪಿ–11, ಸ.ಸಂ:119, ಗೋ.ಸಂ: ಎಪಿ–11ರಿಂದ ಎಪಿ–12, ಸ. ಸಂ: 119, 131/2, 131/4, 131/6, ಗೋ.ಸಂ: ಎಪಿ–12ರಿಂದ ಎಪಿ–13, ಸ.ಸಂ.:131/3, 313/5, 131/6, 131/7, 119, ಹಳ್ಳಿಯ ಹೆಸರು: **ಸೀತಿ,** ಗೋ.ಸಂ: ಎಪಿ–12ರಿಂದ ಎಪಿ–13, ಸ.ಸಂ.:178, ಗೋ.ಸಂ.: ಎಪಿ–13ರಿಂದ ಎಪಿ–14, ಸ.ಸಂ: 178, 177, 176, 146/1, 146/2, ಹಳ್ಳಿಯ ಹೆಸರು: **ಹುಲ್ಲನಕಲ್ಲು,** ಗೋ.ಸಂ.: ಎಪಿ–13ರಿಂದ ಎಪಿ–14, ಸ. ಸಂ.:31/1, 32, 31/2, ಗೋ.ಸಂ.: ಎಪಿ–14ರಿಂದ ಎಪಿ–15, ಸ.ಸಂ.:31/2, 33/1, 33/2, 33/3, 37, 38, ಹಳ್ಳಿಯ ಹೆಸರು: **ತೊಕಲಘಟ್ಟ** ಗೋ. ಸಂ.: ಎಪಿ–14ರಿಂದ ಎಪಿ–15, ಸ.ಸಂ.:102, ಹಳ್ಳಿಯ ಹೆಸರು: **ವೀರಾಪುರ,** ಗೋ.ಸಂ: ಎಪಿ–15ರಿಂದ ಎಪಿ–16, ಸ.ಸಂ.: 43, 44, ಹಳ್ಳಿಯ ಹೆಸರು: **ಕಲ್ಲಹಳ್ಳಿ,** ಗೋ.ಸಂ.: ಎಪಿ–15ರಿಂದ ಎಪಿ–16, ಸ.ಸಂ.:116, ಗೋ.ಸಂ.: ಎಪಿ–16ರಿಂದ ಎಪಿ–17, ಸ.ಸಂ.:116, ಗೋ.ಸಂ.: ಎಪಿ–17ರಿಂದ ಎಪಿ–18, ಸ.ಸಂ:116, ಗೋ. ಸಂ.: ಎಪಿ–18ರಿಂದ ಎಪಿ–19, ಸ.ಸಂ.:70, ಹಳ್ಳಿಯ ಹೆಸರು: **ತೊಕಲಘಟ್ಟ,** ಗೋ.ಸಂ.: ಎಪಿ–18ರಿಂದ ಎಪಿ–19, ಸ.ಸಂ.:105, ಗೋ.ಸಂ.: ಎಪಿ–19ರಿಂದ ಎಪಿ–20, ಸ.ಸಂ.:105, ಗೋ.ಸಂ.: ಎಪಿ–20ರಿಂದ ಎಪಿ–21, ಸ.ಸಂ.:105, ಹಳ್ಳಿಯ ಹೆಸರು: **ಶೆಟ್ಟಿಹಳ್ಳಿ,** ಗೋ.ಸಂ.: ಎಪಿ–20ರಿಂದ ಎಪಿ–21, ಸ.ಸಂ.:87, 89, ಗೋ. ಸಂ.: ಎಪಿ–21ರಿಂದ ಎಪಿ–22, ಸ.ಸಂ.: 89, 116/8, 116/7, 87, ಗೋ.ಸಂ.: ಎಪಿ–22ರಿಂದ ಎಪಿ–23, ಸ.ಸಂ.: 87, ಗೋ.ಸಂ.: ಎಪಿ–23ರಿಂದ ಎಪಿ–24, ಸ. ಸಂ.: 87, 13/1, 13/2, 14/2, 14/1, 15/1, 15/7, 87, ಗೋ. ಸಂ.: ಎಪಿ–24ರಿಂದ ಎಪಿ–25, ಸ.ಸಂ.: 87, ಗೋ. ಸಂ: ಎಪಿ–25ರಿಂದ ಎಪಿ–26, ಸ.ಸಂ.: 87, ಗೋ.ಸಂ.: ಎಪಿ–26ರಿಂದ ಎಪಿ–27, ಸ.ಸಂ.: 87, ಹೋಬಳಿ: **ಸುಗಟೂರು** ಹಳ್ಳಿಯ ಹೆಸರು: **ದಿನ್ನೆಹಳ್ಳಿ,** ಗೋ.ಸಂ.: ಎಪಿ–26ರಿಂದ ಎಪಿ–27, ಸ. ಸಂ.:54, 32, 33/1, 33/2, 33/3, 33/4, 35/1, 35/2, 35/3, 36, 37/2, 38, 39/1, 39, 39/3, 39/4, 27/1, 27/2, 26/1, 26/2, 26/3, 26/4, 25/1, 25/2, 25/3, 25/4, 23, 22, ಗೋ. ಸಂ.: ಎಪಿ–27ರಿಂದ ಎಪಿ–28, ಸ.ಸಂ.:22, 26/1, ಹಳ್ಳಿಯ ಹೆಸರು: **ಉರಗಲಿ,** ಗೋ.ಸಂ.: ಎಪಿ–27ರಿಂದ ಎಪಿ–28, ಸ.ಸಂ.: 60, ಗೋ. ಸಂ.: ಎಪಿ–28ರಿಂದ ಎಪಿ–29, ಸ. ಸಂ.: 60, 59, 63/2, ಗೋ. ಸಂ.: ಎಪಿ–29ರಿಂದ ಎಪಿ–30, ಸ. ಸಂ.: 63/2, 63/1, 64/2, 64/1, 64/4, 65/2, 65/3, 65/4, 66, 46, 48, ಗೋ. ಸಂ.: ಎಪಿ–30ರಿಂದ ಎಪಿ–31, ಸ.ಸಂ.: 48, 47, 45/4, 50, 45/2, 45/3, 43/2, 43/5, 43/2, ಗೋ.ಸಂ.: ಎಪಿ–31ರಿಂದ ಎಪಿ–32, ಸ. ಸಂ.: 43/1, 41, 53/1, 129/3, 129/1, 28, ಗೋ.ಸಂ.: ಎಪಿ–32ರಿಂದ ಎಪಿ–33, ಸ.ಸಂ.:28, ಹಳ್ಳಿಯ ಹೆಸರು: **ಬೂಸನಹಳ್ಳಿ,** ಗೋ.ಸಂ: ಎಪಿ–32ರಿಂದ ಎಪಿ–33, ಸ.ಸಂ.:41, ಗೋ.ಸಂ.: ಎಪಿ–33ರಿಂದ ಎಪಿ–34, ಸ.ಸಂ.:41, 42/1, 42/2, 31/10, 31/6, 26, 27/1, 27/2, 23, 22, 21, 20, ಗೋ.ಸಂ.: ಎಪಿ–34ರಿಂದ ಎಪಿ–35, ಸ.ಸಂ.:1, ಗೋ.ಸಂ.: ಎಪಿ–35ರಿಂದ ಎಪಿ–36, ಸ.ಸಂ.: 1, 48, 49, ಗೋ. ಸಂ.: ಎಪಿ–36ರಿಂದ ಎಪಿ–37, ಸ.ಸಂ.: 49, 1, ಗೋ.ಸಂ.: ಎಪಿ–37ರಿಂದ ಎಪಿ–38, ಸ.ಸಂ.: 1, ಹಳ್ಳಿಯ ಹೆಸರು: **ಚೊಕ್ಕಹಳ್ಳಿ,** ಹೋಬಳಿ: **ವಕ್ಕಲೇರಿ,** ಗೋ.ಸಂ.: ಎಪಿ–37ರಿಂದ ಎಪಿ–38, ಸ.ಸಂ.: 61/3, 61/2, 62, 63, 68, ಹಳ್ಳಿಯ ಹೆಸರು: **ಶ್ರೀಪುರ,** ಹೋಬಳಿ: **ಕಸಬಾ,** ಗೋ.ಸಂ.: ಎಪಿ–37ರಿಂದ ಎಪಿ–38, ಸ.ಸಂ.: 104, 103, 132, 134/1, 134/3, 134/2, 137/1, 136, 137/2, 124/1, 124/2ಎಫ್, 123/2, 123/1, 104, 121/1, 121/4, 121/2, 121/1, 116/1, ಗೋ.ಸಂ.: ಎಪಿ–38ರಿಂದ ಎಪಿ–39, ಸ.ಸಂ.: 116/1, 115/2, 116/2, 115/3, ಗೋ.ಸಂ:ಎಪಿ–39ರಿಂದ ಎಪಿ–40, ಸ.ಸಂ.: 115/3, 9/2, ಗೋ.ಸಂ.:ಎಪಿ–40ರಿಂದ ಎಪಿ–41, ಸ.ಸಂ.:9/2, 12/2, 13/1, ಗೋ.ಸಂ.: ಎಪಿ–41ರಿಂದ ಎಪಿ–42, ಸ.ಸಂ.: 13/1, 13/2, ಗೋ.ಸಂ.: ಎಪಿ–42ರಿಂದ ಎಪಿ–43, ಸ.ಸಂ.: 13/2, 29/6, 29/2ಎ, 70, ಹಳ್ಳಿಯ ಹೆಸರು: **ಹೂಹಳ್ಳಿ,** ಗೋ.ಸಂ: ಎಪಿ–43ರಿಂದ ಎಪಿ–44, ಸ.ಸಂ: 26, 23, 24/2, ಗೋ.ಸಂ.: ಎಪಿ–44ರಿಂದ ಎಪಿ–45, ಸ.ಸಂ.:24/2, 24/7, 24/4, 24/5, 26, 63/2, ಗೋ.ಸಂ: ಎಪಿ–45 ರಿಂದ ಎಪಿ–46, ಸ.ಸಂ:3, ಗೋ. ಸಂ.:ಎಪಿ–46ರಿಂದ ಎಪಿ–47, ಸ.ಸಂ.:3, 63/2, ಗೋ.ಸಂ.:ಎಪಿ–47ರಿಂದ ಎಪಿ–48, ಸ.ಸಂ.:72, ಗೋ.ಸಂ.:ಎಪಿ–48ರಿಂದ ಬೇ, ಸ.ಸಂ.:72, ಗೋ.ಸಂ:ಎಪಿ–48ರಿಂದ ಬೇ, ಸ.ಸಂ.:58

(2) ಕೋಲಾರ ತಾಲ್ಲೂಕು ಮತ್ತು ಜಿಲ್ಲೆಯ ಪ್ರಸ್ತಾಪಿತ 220/66 ಕೆವಿ ವೇಮಗಲ್ ಕೈಗಾರಿಕಾ ಪ್ರದೇಶಕ್ಕೆ ಹಾಲಿ ಇರುವ 66/11 ಕೆವಿ ನಂದಗುಡಿ ಉಪಕೇಂದ್ರದಿಂದ ಪ್ಯಾಂಥರ್ ಕಂಡಕ್ಟರ್‌ನೊಂದಿಗೆ 66 ಕೆವಿ ಡಿಸಿ ಲೈನ್ ನಿರ್ಮಾಣ, 110 ಕೆವಿ ಕಿರಿದಾದ ಅಡಿಭಾಗದ ಆಧಾರಿತ ಕೆಪಿಟಿಸಿಎಲ್ ವಿನ್ಯಾಸ ಗೋಪುರಗಳನ್ನು 8.830 ಕಿಮೀ.ಗಳ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ.

ಹೊಸ ಮಾರ್ಗ ಹಾದುಹೋಗುವ ಹಳ್ಳಿಗಳ ಸರ್ವೆ.ನಂ/ವಿವರಗಳು:

ತಾಲ್ಲೂಕು: ಹೊಸಕೋಟೆ, ಜಿಲ್ಲೆ: ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ತಾಲ್ಲೂಕು ಮತ್ತು ಜಿಲ್ಲೆ

ಹಳ್ಳಿಯ ಹೆಸರು: **ನಂದಗುಡಿ,** ಹೋಬಳಿ: **ನಂದಗುಡಿ,** ಗೋ.ಸಂ.: ಬೇರಿಂದ ಎಪಿ–1, ಸ.ಸಂ.: 5, ಗೋ.ಸಂ: ಎಪಿ–1 ರಿಂದ ಎಪಿ–2, ಸ.ಸಂ.: 5, ಗೋ.ಸಂ: ಎಪಿ–2 ರಿಂದ ಎಪಿ–3, ಸ.ಸಂ.: 5, 4/1, 4/3, ಹಳ್ಳಿಯ ಹೆಸರು: **ಗೆದ್ದಲಹಳ್ಳಿಪುರ,** ಗೋ.ಸಂ.: ಎಪಿ–3 ರಿಂದ ಎಪಿ–4, ಸ.ಸಂ.:133/1, ಹಳ್ಳಿಯ ಹೆಸರು: **ಸರ್ಕಾರಿ ವಡ್ಡರಹಳ್ಳಿ,** ಗೋ.ಸಂ.: ಎಪಿ–3 ರಿಂದ ಎಪಿ–4, ಸ.ಸಂ.:25/4, 25/5, 25/2, ಹಳ್ಳಿಯ ಹೆಸರು: **ಸರ್ಕಾರಿ ಗೆದ್ದಲಹಳ್ಳಿಪುರ,** ಗೋ.ಸಂ: ಎಪಿ–3 ರಿಂದ ಎಪಿ–4, ಸ.ಸಂ.: 134/10, 134/9, ಗೋ.ಸಂ: ಎಪಿ–4 ರಿಂದ ಎಪಿ–5, ಸ.ಸಂ.: 134/9, 134/13, 134/12, 134/11, ಗೋ.ಸಂ.: ಎಪಿ–5 ರಿಂದ ಎಪಿ–6, ಸ.ಸಂ.: 134/11, 135/1, 135/7, ಹಳ್ಳಿಯ ಹೆಸರು: **ಬನಹಳ್ಳಿ,** ಗೋ.ಸಂ: ಎಪಿ–5 ರಿಂದ ಎಪಿ–6, ಸ.ಸಂ.:76/4, ಹಳ್ಳಿಯ ಹೆಸರು: **ಸರ್ಕಾರಿ ವಡ್ಡರಹಳ್ಳಿ,** ಗೋ.ಸಂ.: ಎಪಿ–5 ರಿಂದ ಎಪಿ–6, ಸ.ಸಂ.:23, ಗೋ.ಸಂ.: ಎಪಿ–6 ರಿಂದ ಎಪಿ–7, ಸ.ಸಂ.:23, 18/1, 18/2, 20/3, 19/5, 21/3, 19/9, 19/7, ಗೋ.ಸಂ.: ಎಪಿ–7 ರಿಂದ ಎಪಿ–8, ಸ.ಸಂ.:19/7, 19/3, 17, 16/4, 15/1, 15/8, 15/6, ಗೋ.ಸಂ: ಎಪಿ–8 ರಿಂದ ಎಪಿ–9, ಸ.ಸಂ.:15/6, ಗೋ. ಸಂ: ಎಪಿ–8 ರಿಂದ ಎಪಿ–9, ಸ.ಸಂ.:5/6, 5/5, 5/4, 5/1, 7/1, 7/2, 8/1, 8/2, 8/3, 10/5, 11/1, 11/2, 11/3, ಹಳ್ಳಿಯ ಹೆಸರು: **ಬನಹಳ್ಳಿ,** ಗೋ.ಸಂ: ಎಪಿ–8 ರಿಂದ ಎಪಿ–9, ಸ.ಸಂ.:45, 44, ಹಳ್ಳಿಯ ಹೆಸರು: **ಸಿದ್ದನಹಳ್ಳಿ,** ಗೋ.ಸಂ: ಎಪಿ–8 ರಿಂದ ಎಪಿ–9, ಸ.ಸಂ.:120, ಗೋ.ಸಂ.:ಎಪಿ–9 ರಿಂದ ಎಪಿ–10, ಸ.ಸಂ.: 120, 122, 117/2, ಗೋ.ಸಂ: ಎಪಿ–10 ರಿಂದ ಎಪಿ–11, ಸ.ಸಂ.: 117/2, 116/1, 116/3, 116/4, 116/2, 115/1, 115/4, 115/5, 115/2, 162/1, 162/2, 160, 2/7, 2/8, 2/12, 2/9, 2/5, 2/10, ಗೋ.ಸಂ.: ಎಪಿ–11 ರಿಂದ ಎಪಿ–12, ಸ.ಸಂ.:2/10, 2/6, 20/1, 20/2, 19/1ಎ, 19/1ಬಿ. 19/2, 24, ಗೋ.ಸಂ.:ಎಪಿ–12 ರಿಂದ ಎಪಿ–13, ಸ.ಸಂ.: 24, 25, ಹಳ್ಳಿಯ ಹೆಸರು: **ಸರಕನೂರು,** ಗೋ.ಸಂ.: ಎಪಿ–12 ರಿಂದ ಎಪಿ–13, ಸ.ಸಂ.:31/3, 32/4, 32/8, 32/7, 31/2, 28/5, 28/1, ಗೋ.ಸಂ.: ಎಪಿ–13 ರಿಂದ ಎಪಿ–14, ಸ.ಸಂ.: 28/1, 27/1, 27/2, ಹಳ್ಳಿಯ ಹೆಸರು: **ಕೆ.ಶೆಟ್ಟಿಹಳ್ಳಿ,** ಗೋ.ಸಂ.: ಎಪಿ–13 ರಿಂದ ಎಪಿ–14, ಸ.ಸಂ.:96/1, 97/3, 97/2, 97/1, 98/2, 98/1, 99, ಹಳ್ಳಿಯ ಹೆಸರು: **ನೆಲವಾಗಿಲು,** ಗೋ.ಸಂ: ಎಪಿ–13 ರಿಂದ ಎಪಿ–14, ಸ.ಸಂ.:194, 178, 177, 161/1, 161/2, 165/2, 165/3ಎ, 164/2ಎ, 162, ಗೋ.ಸಂ.: ಎಪಿ–14 ರಿಂದ ಎಪಿ–15, ಸ.ಸಂ.:162, 163, 133/1, 132, 133/2, 131/1, 126/1, 125/1, 125/2, 125/3, 125/4, 125/5, 124, ಹೋಬಳಿ: **ನೇಮಗಲ್,** ಹಳ್ಳಿಯ ಹೆಸರು: **ಮಡಿವಾಳ,** ಗೋ.ಸಂ.: ಎಪಿ–14 ರಿಂದ ಎಪಿ–15, ಸ.ಸಂ.: 57, ಗೋ.ಸಂ.: ಎಪಿ–15 ರಿಂದ ಎಪಿ–16, ಸ.ಸಂ.: 57, 49, 48, 47/1, 47/2, 47/3, 47/4, 41/3, 42/1, 43/1, 43/2, 32/1, 32/2, 28, 29/4, 29/3, 29/5, 29/1, 29/2, 16/2, 16/1, ಗೋ.ಸಂ.: ಎಪಿ–16 ರಿಂದ ಎಪಿ–17, ಸ.ಸಂ.: 17/1, 7, 8, 6/1, 6/2, 4, 71, ಗೋ.ಸಂ.: ಎಪಿ–17 ರಿಂದ ಎಪಿ–18, ಸ.ಸಂ.: 71, 80, 132, 129, 113/1, 113/2, 114, ಹಳ್ಳಿಯ ಹೆಸರು: **ಮಲಿಯಪ್ಪನಹಳ್ಳಿ,** ಗೋ.ಸಂ.: ಎಪಿ–17 ರಿಂದ ಎಪಿ–18, ಸ.ಸಂ.: 82/1, 83/3, ಗೋ.ಸಂ.: ಎಪಿ–18 ರಿಂದ ಎಪಿ–19, ಸ.ಸಂ.: 83/3, 83/4, 83/8, 89/2, 89/1, 90/2ಬಿ, 90/2ಎ, 88/2, 88/5, 93/2, 93/1, 94/1, 94/2, 94/3, 94/4, 95/1, ಗೋ.ಸಂ.: ಎಪಿ–19 ರಿಂದ ಎಪಿ–20, ಸ.ಸಂ.: 95/1, 95/5, 73, 136/2, 5/2, 72, 32, 32/2, ಗೋ.ಸಂ: ಎಪಿ–20 ರಿಂದ ಎಪಿ–21, ಸ.ಸಂ.: 32, 33/2, 33/1, ಗೋ.ಸಂ.: ಎಪಿ–21 ರಿಂದ ಎಪಿ–22, ಸ.ಸಂ.: 33/1, 34, ಗೋ.ಸಂ.: ಎಪಿ–22 ರಿಂದ ಬೇ ವರೆಗೆ, ಸ.ಸಂ.: 34

(3) ಹಾಲಿ ಇರುವ 66KV ವೇಮಗಲ್ ಕೈಗಾರಿಕಾ ಪ್ರದೇಶ–ತಲಗವಾರ ಎಸ್.ಸಿ. ಕೊಯೋಟ್ ಮಾರ್ಗವನ್ನು ಎಸ್.ಸಿ. ಡ್ರೇಕ್ ಮೂಲಕ ಬಲಪಡಿಸುವುದು ಮತ್ತು 15.935 ಕಿ.ಮೀ.ಗಳ ದೂರದ ಕ್ಯಾಲನೂರು ಉಪ–ಕೇಂದ್ರಕ್ಕೆ ಲಿಲೋ ಭಾಗದ ನಿರ್ಮಾಣ.

ಹೊಸ ಮಾರ್ಗ ಹಾದುಹೋಗುವ ಹಳ್ಳಿಗಳ ಸರ್ವೆ.ನಂ/ವಿವರಗಳು:

ಚಿಂತಾಮಣಿ ತಾಲ್ಲೂಕು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ

ಹೋಬಳಿ: **ವೇಮಗಲ್,** ಹಳ್ಳಿಯ ಹೆಸರು: **ಪರ್ಜೇನಹಳ್ಳಿ,** ಗೋ.ಸಂ.: ಡಿಡಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 50/2, ಗೋ.ಸಂ.: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 43/2, ಗೋ.ಸಂ: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 45/2, ಗೋ.ಸಂ.: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 36/7, ಗೋ.ಸಂ.: ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 5/1, ಗೋ.ಸಂ.: ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 9/2, ಗೋ.ಸಂ.:ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 165/1, ಹಳ್ಳಿಯ ಹೆಸರು: **ಹುಲ್ಲನಕಲ್ಲು,** ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 109/1ಎ, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 108/6, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 75/1, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 119, ಗೋ.ಸಂ.: ಡಿಡಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 119, ಹಳ್ಳಿಯ ಹೆಸರು: **ಬೈರಂಡಹಳ್ಳಿ,** ಗೋ.ಸಂ.:ಡಿಡಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 107/3, ಗೋ.ಸಂ.: ಡಿಡಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 116/4, ಗೋ.ಸಂ.: ಡಿಡಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 118/4, ಗೋ.ಸಂ.: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 124, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 131, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 146, ಹಳ್ಳಿಯ ಹೆಸರು: **ಸೀತಿ,** ಗೋ.ಸಂ: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 221, ಗೋ.ಸಂ.: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 329/2, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 331/2, ಗೋ.ಸಂ.:ಡಿಎ+6 110ಕೆ.ವಿ ಎನ್.ಬಿ.ಟಿ, ಸ.ಸಂ.: 241, ಗೋ.ಸಂ.:ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 241, ಗೋ.ಸಂ.:ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 243/1, ಹಳ್ಳಿಯ ಹೆಸರು: **ಮಾತಾಪುರ,** ಗೋ.ಸಂ: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 13/1, ಗೋ.ಸಂ.:ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 16/1, ಗೋ.ಸಂ.: ಡಿಡಿ+3 (Box Arm) 110ಕೆ.ವಿ ಎನ್.ಬಿ.ಟಿ, ಸ.ಸಂ.: 28, ಗೋ.ಸಂ.: ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 28, ಗೋ. ಸಂ.:ಡಿಎ+3 110ಕೆ.ವಿ ಎನ್.ಬಿ.ಟಿ ಸ.ಸಂ.: 28, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ ಸ.ಸಂ.: 28, ಹಳ್ಳಿಯ ಹೆಸರು: **ತಿಪ್ಪೇನಹಳ್ಳಿ,** ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 81, ಗೋ.ಸಂ.: ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 124, 86/3ಬಿ, ಗೋ.ಸಂ.: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.:88/3, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 99/1, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 10/2, ಗೋ. ಸಂ.:ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 37, ಹಳ್ಳಿಯ ಹೆಸರು: **ಕಾದಹಳ್ಳಿ,** ಗೋ.ಸಂ.: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 98/1, 99/1, ಗೊ.ಸಂ: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 101/1, 102, ಗೋ.ಸಂ.: ಡಿಡಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 72, ಗೋ.ಸಂ: ಡಿಡಿ+3 110 ಕೆ.ವಿಎನ್.ಬಿ.ಟಿ (ತಂಬಿಹಳ್ಳಿ ಡಿಸೈನ್), ಸ.ಸಂ.: 72, ಗೋ.ಸಂ.: ಡಿಡಿ+3 110ಕೆ.ವಿ ಎನ್.ಬಿ.ಟಿ (ತಂಬಿಹಳ್ಳಿ ಡಿಸೈನ್), ಸ.ಸಂ.: 72, ಗೋ.ಸಂ.: ಡಿಡಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 72, ಗೋ. ಸಂ: ಡಿಡಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 67/1, 67/2, ಗೋ.ಸಂ: 1 ಟಿ 1, ಸ.ಸಂ.: 67/1, ಗೋ.ಸಂ.: 1 ಟಿ 1, ಸ.ಸಂ.: 67/1, ಗೋ.ಸಂ.:ಡಿಡಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 66/3ಬಿ, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 72, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 48/2, ಗೋ.ಸಂ.: ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 32/1, 4ಎ2, ಹಳ್ಳಿಯ ಹೆಸರು: **ಅಮ್ಮನಲ್ಲೂರು,** ಗೋ.ಸಂ.: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 112/2, ಗೋ.ಸಂ.:ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 114/1, ಗೋ.ಸಂ.:ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 170/4, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 191/1ಬಿ, 1ಎ, ಗೋ. ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 199/3, ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 147/1ಎ, 2/1, ಗೋ.ಸಂ.: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 11, ಗೋ.ಸಂ.: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 20, ಗೋ.ಸಂ.: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 33, ಹೋಬಳಿ: **ಕೈವಾರ,** ಹಳ್ಳಿಯ ಹೆಸರು: **ತಳಗವಾರ ಅಮಾನಿಕರೆ,** ಗೋ.ಸಂ.:ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 69/5, ಗೋ.ಸಂ.: ಡಿಎ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 78/2, ಗೋ.ಸಂ: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 86, ಗೋ.ಸಂ.: ಡಿಸಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 92, ಹಳ್ಳಿಯ ಹೆಸರು: **ತಳಗವಾರ,** ಗೋ.ಸಂ.: ಡಿಎ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 49/3, 4, ಗೋ.ಸಂ.: ಡಿಸಿ+3 110ಕೆ.ವಿ ಎನ್.ಬಿ.ಟಿ, ಸ.ಸಂ.: 41/4, ಗೋ.ಸಂ.: ಡಿಡಿ+0 110ಕೆ.ವಿ ಎನ್.ಬಿ.ಟಿ, ಸ.ಸಂ.: 26/2, ಹಳ್ಳಿಯ ಹೆಸರು: **ಮಾತಾಪುರ,** ಗೋ.ಸಂ.: ಡಿಸಿ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 18/1, 29/1, ಗೋ.ಸಂ.:ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 17, ಗೋ.ಸಂ.:ಡಿಸಿ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 17, ಗೋ.ಸಂ.:ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 99, ಹಳ್ಳಿಯ ಹೆಸರು: **ಮೈಲಸಂದ್ರ ಅಮಾನಿಕೆರೆ,** ಗೋ.ಸಂ.: ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 96/3, ಗೋ.ಸಂ.:ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 93/2ಎ, 2, ಗೋ.ಸಂ.:ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 18/1, ಗೋ.ಸಂ: ಡಿಸಿ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 15/3ಎ, ಹಳ್ಳಿಯ ಹೆಸರು: **ರಘುಪತಿ ಅಗ್ರಹಾರ,** ಗೋ.ಸಂ: ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 55, ಗೋ. ಸಂ.: ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 102, ಗೋ.ಸಂ.: ಡಿಎ+3 66ಕೆ.ವಿ ಎನ್.ಬಿ.ಟಿ, ಸ.ಸಂ.: 72

ಕವಿಪ್ರನಿನಿಯು ಮೇಲೆ ತಿಳಿಸಿದ ಯೋಜನೆಯನ್ನು ಕಾರ್ಯಗತಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್–III (ಕೇಂದ್ರಿಯ ಕಾಯ್ದೆ 1885ರ 13ರ ಅನ್ವಯ) ಅಧಿನಿಯಮ, ಟೆಲಿಗ್ರಾಫ್ ಹೊಂದಿರುವ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಯೋಜನೆಗೆ ಅಕ್ಷೇಪಣೆಗಳೇನಾದರೂ ಇದ್ದಲ್ಲಿ, ನಿಗಮದ ಪರಿಗಣನೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ **ಪ್ರಕಟವಾದ 15 ದಿನಗಳ ಒಳಗಾಗಿ** ಕೆಳಸಹಿದಾರರಿಗೆ ಲಿಖಿತವಾಗಿ ಕಳುಹಿಸುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆಗಳ ವಿಭಾಗ, ಕವಿಪ್ರನಿನಿ, ಕೋಲಾರ

ನಗರಸಭಾ ಕಾರ್ಯಾಲಯ, ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ

ಕಛೇರಿ ವಿಳಾಸ: ಬೆಂಗಳೂರು ರಸ್ತೆ, ವಾರ್ಡ್ 10, ಎನ್ ಆರ್ ಬಡಾವಣೆ ಚಿಂತಾಮಣಿ–563 125, ದೂರವಾಣಿ: 08154–252056/ ಸಹಾಯವಾಣಿ: 08154–252117, ಇ–ಮೇಲ್:itstaff_ulb_chintamanicity@yahoo.in, cmc.chintamani@gmail.com, ವೆಬ್‌ಸೈಟ್:www.chintamanicity.gov.in

ಸಂಖ್ಯೆ: ನಸಚಿ/ತಾಂಶಾ/ಸಿ.ಆರ್/15/2026–27 ದಿನಾಂಕ: 26.05.2026

ಇ–ಪ್ರಕ್ಯೂರ್‌ಮೆಂಟ್ ಮೂಲಕ ಕೆಜಿ, ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/15/2026–27 ದಿನಾಂಕ: 26.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ–ಪ್ರಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ: **(1)** DMA/2026- 27/RD/work Indent 57796 **(2)** DMA/2025-26/SE/7426 Call-4 **(3)**DMA/2025-26/IND/5643 call-3 ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿರುತ್ತಾರೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಸೂಚನೆಗಳು ಕ್ರಮ ಸಂಖ್ಯೆ ಇ–ಪ್ರಕ್ಯೂಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 11.06.2026 ರಂದು ಸಮಯ ಸಂಜೆ 17:30 ಗಂಟೆಯವರೆಗೆ** ತಾಂತ್ರಿಕ ಬಿಡ್ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ: 15.06.2026ರಂದು ಸಮಯ ಬೆಳಗ್ಗೆ 11:00 ಗಂಟೆಗೆ ತೆರೆಯಲಾಗುವುದು.**

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:78/ಕೆಎಸ್‌ಎಂಸಿಎ/2026–27

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೋಲಾರ ಜಿಲ್ಲೆ.

ದೂರವಾಣಿ ಸಂಖ್ಯೆ:08152–295257

ದಿನಾಂಕ: 30.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೊರಾರ್ಜಿ ದೇಸಾಯಿ ಪದವಿ ಪೂರ್ವ ಬಾಲಕ ಮತ್ತು ಬಾಲಕಿಯರ ವಸತಿ ಕಾಲೇಜು ಹಾಗೂ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ ಆಹಾರ, ತರಕಾರಿ ಮತ್ತು ಇತರೆ ಪದಾರ್ಥಗಳನ್ನು ಸರಬರಾಜು ಮಾಡಲು ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಚೆಯುಳ್ಳ ಸಂಸ್ಥೆಯವರು **https://kppp.karnataka.gov.in/** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಅಂದಾಜು ಮೊತ್ತ: **ರೂ. 3,64,00,000/–ಲಕ್ಷಗಳು.** ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ. 5,46,000–.** ಟೆಂಡರ್ ಸಲ್ಲಿಸಲು ಪ್ರಾರಂಭ **ದಿನಾಂಕ: 30.05.2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.06.2026, ಸಂಜೆ 5.00 ಗಂಟೆಗೆ**

ಸಹಿ/– ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:/ಕೆಎಸ್‌ಎಂಸಿಎ/2026–27

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ

ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.

ಸಂ : ಆ.ಅ./ತೋವಿವಿಬಾ/ಸಖಕ/ಟೆ.ನಂ–221/2026–27 ದಿನಾಂಕ : 01–06–2026

ಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಡಿಯಲ್ಲಿ ಬರುವ ತೋ.ಮ.ವಿ., ಆಲಮೇಲಗೆ ಬೇಕಾಗಿರುವ Bus, Tractor and trailer etc. ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	10–06–2026	@	14.00 ಘಂ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	16–06–2026	@	16.00 ಘಂ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	18–06–2026	@	11.00 ಘಂ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	20–06–2026	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354–230258.

ಸಹಿ/–ಆಸ್ತಿ ಅಧಿಕಾರಿಗಳು,
ತೋ.ವಿ.ವಿ, ಬಾಗಲಕೋಟ

DIPR/BGK/RO-NO-70/KSMCA/2026-27

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:03:2026–27 ದಿನಾಂಕ:29–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿಪಿ ಪೋರ್ಟಲ್ ಮುಖಾಂತರ)

2025–26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ. –16 ಕಾಮಗಾರಿ, 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ–01 ಕಾಮಗಾರಿ, 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿದಿ ಶೇ. 7.25 : 01 ಕಾಮಗಾರಿ, 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಎಸ್‌ಸಿಎಸ್‌ಪಿ – 01 ಕಾಮಗಾರಿ, 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಶೇ. 5– 01 ಕಾಮಗಾರಿ, 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ (ಸಿ.ಎಂ.ಐ.ಡಿ.ಪಿ) ಅನುದಾನಡಿ(3ನೇ ಕರೆ) – 01 ಕಾಮಗಾರಿ, ಒಟ್ಟು 21 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ದತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕ್ರಮ ಸಂ.3 ಹಾಗೂ 07 ರಿಂದ 16ರ ಕಾಮಗಾರಿಗಳಿಗೆ ಅಲ್ಪಾವದಿ ಟೆಂಡರ್ :
ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿ: 01–06–2026
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 08–06–2026 ಸಮಯ : 16.00
ಟೆಂಡರ್/ತಾಂತ್ರಿಕ ಬಿಡ್ ತೆರೆಯುವ : 08–06–2026 ಸಮಯ : 16.00
ಟೆಂಡರ್ ತೆರೆಯುವ ದಿನಾಂಕ & ವೇಳೆ : 10–06–2026 ಸಮಯ : 11.00

ಕ್ರಮ ಸಂ.1, 2, 4, 5, 6 ಹಾಗೂ 17 ರಿಂದ 21ರ ಕಾಮಗಾರಿಗಳಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 01–06–2026
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ:15–06–2026 ಸಮಯ : 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 15–06–2026 ಸಮಯ : 17.00
ಟೆಂಡರ್ ತೆರೆಯುವ ದಿನಾಂಕ & ವೇಳೆ : 17–06–2026 ಸಮಯ : 11.00

ವಾಸಾಇ/ದಾವಣಗೆರೆ/115/ಕೆಎಸ್‌ಎಂಸಿಎ/2026–27

ಸಹಿ/–ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಸಮಾಚಾರ ಸಣ್ಣದಲ್ಲ

ಸಚಿವ ಸ್ಥಾನಕ್ಕಾಗಿ ದೆಹಲಿಗೆ ಹೋಗಲ್ಲ

ಚಿಕ್ಕಬಳ್ಳಾಪುರ: ನನಗೆ ಸಚಿವ ಸ್ಥಾನ ಕೊಡುವುದು ಬಿಡುವುದು ಪಕ್ಷಕ್ಕೆ ಬಿಟ್ಟ ವಿಚಾರ ನಾನು ಸಚಿವ ಸ್ಥಾನ ಕ್ಕಾಗಿ ಲಾಬಿ ನಡೆಸಲು ದೆಹಲಿಗೆ ಹೋಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸಲು ಮಂಗಳೂರಿಗೆ ತೆರಳುತ್ತಿದ್ದೇನೆ ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ನನಗೆ ಹಿಂದೆ ಸಚಿವ ಸ್ಥಾನ ಕೊಟ್ಟಾಗ ಒಳ್ಳೆಯ ಕೆಲಸ ಮಾಡಿದ್ದೇನೆ. ನಾನು ಶಾಸಕನಾಗಿ ಸದನ ವೀರ ಪ್ರಶಸ್ತಿ ಪಡೆದುಕೊಂಡಿದ್ದೆ. ಸಚಿವನಾಗಿದ್ದಾಗ ಒಳ್ಳೆಯ ಕೆಲಸ ಮಾಡಿ ರಾಷ್ಟ್ರ ಪ್ರಶಸ್ತಿಯೂ ಪಡೆದುಕೊಂಡಿದ್ದೇನೆ. ನನ್ನ ಕೆಲಸ ಗುರುತಿಸಿ ಸಿದ್ದರಾಮಯ್ಯನವರು ವಿರೋಧ ಪಕ್ಷದ ಉಪನಾಯಕನಾಗಿ ಮಾಡಿದ್ದರು. ಈಗ ಸ್ಪೀಕರ್ ಮಾಡಿದ್ದಾರೆ, ಒಳ್ಳೆ ಕೆಲಸ ಮಾಡುತ್ತಿದ್ದೇನೆ. ಮುಂದೆ ಏನು ಕೊಡುತ್ತಾರೆ ನೋಡೋಣ. ನಾನು ಯಾವುದೇ ಸ್ಥಾನ ಬಯಸಿ ಪಡೆದವನಲ್ಲ. ಪಕ್ಷ ಏನೇ ತೀರ್ಮಾನ ಮಾಡಿದರೂ ಸಂತೋಷ, ಸಮಾಧಾನದಿಂದ ಇರುತ್ತೇನೆ. ನಾನು ದೆಹಲಿಗೆ ಹೋಗಲ್ಲ, ಮಂಗಳೂರಿಗೆ ಹೋಗುತ್ತಿದ್ದೇನೆ ಎಂದು ತಿಳಿಸಿದರು.

ಹೊಂದಾಣಿಕೆ ಇಲ್ಲದೆ ಅಭಿವೃದ್ಧಿ ಮಾಡಿ

ಯಾದಗಿರಿ: ರಾಜ್ಯದಲ್ಲಿ ಅಧಿಕಾರ ನಡೆಸಿದ ಮೂವರು ಮುಖ್ಯಮಂತ್ರಿಗಳು ತಮ್ಮ ಜನಪರ ಆಡಳಿತದಿಂದ ಜನ ಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ ಎಂದು ಶಾಸಕ ಶರಣಗೌಡ ಕಂದಕೂರ ಹೇಳಿದರು. ನೂತನ ಸಿಎಂ ಆಗಲಿರುವ ಡಿ.ಕೆ. ಶಿವಕುಮಾರ್ ಅವರಿಗೆ ಶುಭಕೋರಿ ಮಾತನಾಡಿದ ಅವರು, ಮುಂದಿನ ಸಿಎಂ ಕೂಡ ಜನಮಾನಸದಲ್ಲಿ ಉಳಿಯಬೇಕಾದರೆ ಹೊಂದಾಣಿಕೆ ಮಾಡದೆ ಅಭಿವೃದ್ಧಿ ರಾಜಕಾರಣ ಮಾಡಬೇಕು. ಈ ಮೂಲಕ ಜನತೆಗೆ ಉತ್ತಮ ಆಡಳಿತ ನೀಡಲಿ ಎಂದರು.

ಕೋಚಿಮುಲ್ ನೇಮಕ ಹೈಕೋರ್ಟ್ ಮೊರೆ

ಕೋಲಾರ: 2023ರಲ್ಲಿ ಕೋಚಿಮುಲ್‌ನಲ್ಲಿ ನಡೆದ 70ಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿಯಲ್ಲಿ ಹಗರಣ ಆಗಿದೆ ಎನ್ನಲಾಗಿದ್ದು, ಈ ಸಂಬಂಧ ಆರೋಪಿತರ ಮೇಲೆ ತನಿಖೆ ಕೈಗೊಳ್ಳಲು ನೇಮಕಾತಿ ಪ್ರಾಧಿಕಾರಿಗಳು ಅನುಮತಿ ನಿರಾಕರಣೆ ಹಿನ್ನೆಲೆ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಸ್ವಯಂ ಪ್ರೇರಿತವಾಗಿ ಹೈಕೋರ್ಟ್‌ನಲ್ಲಿ ವಿಧಾನಸಭಾಧ್ಯಕ್ಷರು ಮತ್ತು ಮಾಲೂರು ಶಾಸಕ ಕೆ.ವೈ.ನಂಜೇಗೌಡ ಅವರನ್ನು ಪ್ರತಿವಾದಿಯನ್ನಾಗಿಸಿ ಪ್ರಕರಣ ದಾಖಲಿಸಿದ್ದಾರೆ. ನ್ಯಾಯಾಲಯ ಉಭಯೇತರರಿಗೂ ತುರ್ತು ನೋಟಿಸ್ ನೀಡಲು ಸೂಚಿಸಿದೆ. ಲೋಕಾಯುಕ್ತ ಪರವಾಗಿ ವಿಶೇಷ ವಕೀಲ ಯರಬಟ್ಟಿ ವೆಂಕಟೇಶ್ ಅವರನ್ನು ನೇಮಿಸಿದೆ.

ನೌಕರರ ಸಾರ್ವತ್ರಿಕ ವರ್ಗಾವಣೆ 30ರವರೆಗೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2026-27) ರಾಜ್ಯ ಸರಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ನಿಗದಿಪಡಿಸಿದ್ದ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಿ ರಾಜ್ಯ ಸರಕಾರವು ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಸರಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಸಂಬಂಧಿಸಿದಂತೆ ಏಪ್ರಿಲ್ 13ರಂದು ಆದೇಶ ಹೊರಡಿಸಿದ್ದ ಸರಕಾರ, ಏಪ್ರಿಲ್ 15ರಿಂದ ಮೇ 31ರವರೆಗೆ ಅವಕಾಶವನ್ನು ನೀಡಿತ್ತು. ಇದೀಗ ಅದನ್ನು ವಿಸ್ತರಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
02.06.2026
ಸಂಜೆ: 06.55 ರಿಂದ 08.05 ರವರೆಗೆ



ಮಂಗಳವಾರದ ಅತಿಥಿ
ಶ್ರೀ ರವಿಕುಮಾರ ಚಿತ್ರದುರ್ಗ
ವಿಷಯ
ಮಂಕುತಿಮ್ಮನ ಕಗ್ಗ-2

vishwavani.news

ದಿನ ವಿಶೇಷ

02 ಜೂನ್ 2026 ಮಂಗಳವಾರ

» ಸೂರ್ಯೋದಯ	: 5-42
» ಸೂರ್ಯಾಸ್ತ	: 7-05
» ತಿಥಿ	: ದ್ವಿತೀಯ
» ನಕ್ಷತ್ರ	: ಮೂಲ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಕೃಷ್ಣಪಕ್ಷ

ವೈರಲ್ ಆಡಿಯೋ ಬಗ್ಗೆ ಹೈಕಮಾಂಡ್ ತನಿಖೆ ಮಾಡಲಿ: ಶಾಸಕ ಸಮರ್ಥ್ ಶಾಮನೂರು

ಜಮೀರ್ ಆಡಿಯೋ ವೈರಲ್?

ದಾವಣಗೆರೆ: ಇತ್ತೀಚೆಗಷ್ಟೇ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ಮುಗಿದ ಬೆನ್ನಲ್ಲೇ ಪಕ್ಷದ ಸೋಲಿಗೆ ಜಮೀರ್ ಷಡ್ಯಂತ್ರ ನಡೆಸಿದ್ದರು ಎನ್ನಲಾದ ಆಡಿಯೋ ಕ್ಲಿಪ್ ರಾಜಕೀಯ ವಲಯದಲ್ಲಿ ಭಾರೀ ಸದ್ದು ಮಾಡಿದ್ದು, ಪಕ್ಷದ ಆಂತರಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಉಪಚುನಾವಣೆ ಸಮಯದಲ್ಲಿ ಇಂತಹ ವಿದ್ಯಮಾನಗಳು ಸಾಮಾನ್ಯವಾದರೂ, ಈ ಬಾರಿ ವೈರಲ್ ಆಗಿರುವ ಆಡಿಯೋ ಕ್ಲಿಪ್‌ನ ಸತ್ಯಾಸತ್ಯತೆಯನ್ನು ಪಕ್ಷದ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಲಿ ಎಂದು ಶಾಸಕ ಸಮರ್ಥ್ ಶಾಮನೂರು ಹೇಳಿದ್ದಾರೆ.

ಈ ವಿಚಾರದ ಸಂಬಂಧ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ವೈರಲ್ ಆಗಿರುವ ಆಡಿಯೋದಲ್ಲಿನ ಧ್ವನಿ ಯಾರದ್ದು ಎಂಬುದನ್ನು ಖಚಿತಪಡಿಸಿಕೊಳ್ಳಲು ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ನೆರವು ಪಡೆದು ವಾಯ್ಸ್ ವೆರಿಫಿಕೇಶನ್ (ಧ್ವನಿ ಪರೀಕ್ಷೆ) ನಡೆಸಿ ಸತ್ಯ ಹೊರತರಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ವಿರೋಧ ಪಕ್ಷಗಳೊಂದಿಗೆ ಒಳಸಂಚು ಇರಬಹುದು? ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಬದಲು, ಪಕ್ಷ ವಿರೋಧಿ ಚಟುವಟಿಕೆ ನಡೆಸಿರುವ ಶಂಕೆ ವ್ಯಕ್ತವಾಗಿದೆ. ವೈರಲ್ ಆಡಿಯೋದಲ್ಲಿ ಬಿಜೆಪಿ, ಎಸ್‌ಡಿಪಿಐ ಹಾಗೂ ಪಕ್ಷೇತರ ಅಭ್ಯರ್ಥಿಗಳೊಂದಿಗೆ ಒಳಸಂಚು ನಡೆಸಿರುವ ಬಗ್ಗೆ ಮಾತುಕತೆ ನಡೆದಿರುವುದು ಸ್ಪಷ್ಟವಾಗಿ ಕೇಳಿಸುತ್ತಿದೆ. ಮತದಾರರನ್ನು ಮತ್ತು ಜನರನ್ನು ವಿಭಜಿಸಿ ಚುನಾವಣೆ ಗೆಲ್ಲುವ ತಂತ್ರ ರೂಪಿಸಲಾಗಿತ್ತು ಎಂಬ ಗಂಭೀರ ಆರೋಪ ಕೇಳಿ ಬಂದಿದೆ ಎಂದು ತಿಳಿಸಿದರು.

ಅಭಿವೃದ್ಧಿ ಕೆಲಸಗಳೇ ನಮಗೆ ಶ್ರೀರಕ್ಷೆ: ಷಡ್ಯಂತ್ರಗಳಿಂದ ಸದಾ ಕಾಲ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ. ನಾವು ಬಸವಾಪುರ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಶಾಲೆಗಳ ಕೊಠಡಿಗಳ ಉದ್ಘಾಟನೆ, ಎಲ್‌ಕೆಜಿ-ಯುಕೆಜಿ ತರಗತಿಗಳ ಆರಂಭದಂತಹ ಜನಪರ ಕೆಲಸಗಳನ್ನು ಮಾಡಿದ್ದೇವೆ. ಗ್ರಾಮೀಣ ಭಾಗದ ಜನ ನಮ್ಮ ಅಭಿವೃದ್ಧಿ ಕೆಲಸಗಳನ್ನು ಗುರುತಿಸಿ ಮತ ನೀಡುತ್ತಾರೆಯೇ ಹೊರತು, ಇಂತಹ ಕುತಂತ್ರಗಳಿಗೆ ಮಣಿಯುವುದಿಲ್ಲ ಎಂದರು.

ಸದ್ಯಕ್ಕೆ ವೈರಲ್ ಆಗಿರುವ ಆಡಿಯೋ ವಿಚಾರವನ್ನು ಪಕ್ಷದ ಹೈಕಮಾಂಡ್ ಬಿಟ್ಟಿದ್ದೇವೆ. ತನಿಖೆ ನಡೆಸಿ ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಹೈಕಮಾಂಡ್ ಕಠಿಣ ಕ್ರಮ ಕೈಗೊಳ್ಳಲಿ.

-ಸಮರ್ಥ್ ಶಾಮನೂರು, ಶಾಸಕ.

ಜಮೀರ್ ಅಹಮದ್ ಆ ರೀತಿ ಯಾವುದೇ ಮಾತುಕತೆ ಆಡಿಲ್ಲ: ಸಿರಾಜ್ ಅಹಮ್ಮದ್

ದಾವಣಗೆರೆ: ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆಡಿಯೋ ಸತ್ಯಕ್ಕೆ ದೂರವಾಗಿದೆ ಎಂದು ಜಮೀರ್ ಅಹಮ್ಮದ್ ಆಡಿಯೋದಲ್ಲಿ ಅವರೊಂದಿಗೆ ಮಾತನಾಡಿದ್ದಾರೆ ಎನ್ನಲಾದ ಕಾಂಗ್ರೆಸ್ ಮುಖಂಡ ಹಾಗೂ ವಕ್ಫ್ ಮಂಡಳಿ ಮಾಜಿ ಜಿಲ್ಲಾಧ್ಯಕ್ಷ ಸಿರಾಜ್ ಅಹಮ್ಮದ್ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವು ಮತ್ತು ಜಮೀರ್ ಅಹ್ಮದ್ ಖಾನ್ ಅವರು ಫೋನ್ ಮುಖಾಂತರ ಆ ತರಹದ ಯಾವುದೇ ಮಾತುಕತೆ ನಡೆಸಿಲ್ಲ. ಜಮೀರ್ ಸಾಹೇಬರು ಯಾವಾಗಲೂ ಪಕ್ಷದ ಗೆಲುವಿನ ಬಗ್ಗೆಯೇ ಮಾತನಾಡಿದ್ದರು ಎಂದು ತಿಳಿಸಿದರು. ಇದು, ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಹೊಸ ಸರಕಾರ ರಚನೆ ಆಗುತ್ತಿರುವ ಸಂದರ್ಭದಲ್ಲಿ ಜಮೀರ್ ಅಹ್ಮದ್ ಖಾನ್ ಅವರಿಗೆ ದೊಡ್ಡ ಮಟ್ಟದಲ್ಲಿ ಹಿನ್ನಡೆ ಉಂಟು ಮಾಡಲು ಮತ್ತು ಅವರಿಗೆ ಸೂಕ್ತ ಸ್ಥಾನ ಸಿಗಬಾರದು ಎಂದು ರೂಪಿಸಲಾಗಿರುವ ಸ್ಪಷ್ಟ ಷಡ್ಯಂತ್ರವಾಗಿದೆ. ಹಿಂದೆ ನಸೀರ್ ಸಾಹೇಬರು ಹಾಗೂ ಜಬ್ಬಾರ್ ಸಾಹೇಬರ ವಿಷಯದಲ್ಲೂ ಇದೇ ರೀತಿ ಮಾಡಲಾಗಿತ್ತು ಎಂದು ಆರೋಪಿಸಿದರು.

ಆಡಿಯೋ ಎಡಿಟ್ ಮಾಡಲಾಗಿದೆ?

ಈ ಆಡಿಯೋವನ್ನು 100% ಎಡಿಟ್ ಮಾಡಿ ಸೃಷ್ಟಿಸಲಾಗಿದೆ. ಇದನ್ನು ಯಾರು ಮಾಡಿದ್ದಾರೆ ಮತ್ತು ಎಲ್ಲಿಂದ ಇದು ಹರಿದಾಡಿದೆ ಎಂಬುದನ್ನು ಪತ್ತೆ ಹಚ್ಚಬೇಕಿದೆ ಎಂದು ಹೇಳಿದರು. ಶ್ರೀನಿವಾಸ್ ದಾಸಕರಿಯಪ್ಪ ಜತೆ ಮಾತುಕತೆ ನಡೆಸಿಲ್ಲ. ಶ್ರೀನಿವಾಸ್ ದಾಸಕಯರಿಪ್ಪ ಅವರು ತಮಗೆ ಆಪ್ತರಾಗಿದ್ದರೂ, ಮತದಾನ ದಿನ ಬೂತ್‌ನಲ್ಲಿ ಭೇಟಿಯಾಗಿದ್ದು ಬಿಟ್ಟರೆ, ಈವರೆಗೂ ಅವರ ಜತೆ ಯಾವುದೇ ಫೋನ್ ಸಂಭಾಷಣೆ ನಡೆಸಿಲ್ಲ ಪ್ರಶ್ನೆಗೆ ಉತ್ತರಿಸಿದರು.

ಜಮೀರ್ ಅವರೊಂದಿಗೆ ಮಾತನಾಡಿಲ್ಲ

ಇತ್ತೀಚೆಗೆ ಜಮೀರ್ ಅವರೊಂದಿಗೆ ಮಾತನಾಡಿಲ್ಲ, ಬಕ್ರೀದ್ ದಿನ ಜಮೀರ್ ಅವರಿಗೆ ಶುಭ ಹಾರೈಸಿದ್ದು ಬಿಟ್ಟರೆ, ಕಳೆದ ಒಂದು ತಿಂಗಳಿನಿಂದ ಅವರೊಂದಿಗೆ ಯಾವುದೇ ಸಂಪರ್ಕ ಅಥವಾ ಮಾತುಕತೆ ನಡೆದಿಲ್ಲ. ಆಡಿಯೋ ವೈರಲ್ ಆಗಿರುವುದು ಮತ್ತು ನಮ್ಮ ವಿರುದ್ಧ ಷಡ್ಯಂತ್ರ ನಡೆಸಿರುವವರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು. ಈ ಕುರಿತು ಕಾನೂನು ತಜ್ಞರೊಂದಿಗೆ ಚರ್ಚಿಸಿ, ಮುಂದಿನ ಕ್ರಮ ಕೈಗೊಳ್ಳುವುದಾಗಿ ಕಾಂಗ್ರೆಸ್ ಮುಖಂಡ ಸಿರಾಜ್ ಅಹಮ್ಮದ್ ತಿಳಿಸಿದರು.

ವಿಧಾನ ಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ಅಧಿಸೂಚನೆ

ಜೂನ್ 18ಕ್ಕೆ ವಿಧಾನ ಪರಿಷತ್ ಚುನಾವಣೆ

ಬೆಂಗಳೂರು: ಕರ್ನಾಟಕ ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸದಸ್ಯ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಅಧಿಸೂಚನೆ ಪ್ರಕಟಿಸಲಾಗಿದ್ದು ಜೂ.18 ರಂದು ಮತದಾನ ನಡೆಯಲಿದೆ.

ವಿಧಾನ ಪರಿಷತ್‌ನ ದ್ವೈವಾರ್ಷಿಕ ಚುನಾವಣೆಯ ಚುನಾವಣಾಧಿಕಾರಿ ಹಾಗೂ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಕ್ಷಿ ಅಧಿಸೂಚನೆ ಪ್ರಕಟಿಸಿದ್ದು, ಸೋಮವಾರ (ಜೂ.1) ರಿಂದ ಜೂನ್ 8ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ಚುನಾವಣಾ ಸ್ಪರ್ಧೆಯಲ್ಲಿ 7ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದರೆ ಜೂನ್ 18ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದ್ದು, ಅಂದು ಸಂಜೆ 5 ಗಂಟೆಯಿಂದ ಮತ ಎಣಿಕೆ ನಡೆಯಲಿದೆ.

ಬಿಜೆಪಿಯಲ್ಲಿ ಹೆಸರು ಅಂತಿಮ: ವಿಧಾನ ಪರಿಷತ್‌ಗೆ ಚುನಾವಣೆ ಹಿನ್ನೆಲೆ ಬಿಜೆಪಿಯಿಂದ ಅಭ್ಯರ್ಥಿಗಳ ಹೆಸರು ಪ್ರಕಟವಾಗಲಿದ್ದು, ಈಗಾಗಲೇ ಐದು ಹೆಸರನ್ನು ರಾಜ್ಯ ಬಿಜೆಪಿ ಕೇಂದ್ರಕ್ಕೆ ಕಳುಹಿಸಿದೆ. ರಘು ಕೌಟಿಲ್ಯ, ನಳೀನ್ ಕುಮಾರ್ ಕಟೀಲ್, ಲಿಂಗರಾಜ್ ಪಾಟೀಲ್, ಎನ್. ಮಹೇಶ್ ಹಾಗೂ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಹೆಸರು ಶಿಫಾರಸು ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಪ್ರಮುಖ ದಿನಾಂಕಗಳು: ಜೂ.9 ರಂದು ನಾಮಪತ್ರ, ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅಂದು ಸಂಜೆ ವೇಳೆಗೆ ಸಿಂಧುವಾದ ನಾಮಪತ್ರಗಳ ಪ್ರಕಟಣೆ ಹೊರಡಿಸಲಾಗುತ್ತದೆ. ಜೂನ್ 11 ರವರೆಗೆ ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗಿದ್ದು, ಚುನಾವಣಾ ಸ್ಪರ್ಧೆಯಲ್ಲಿ 7ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದರೆ ಜೂನ್ 18ರಂದು ಬೆಳಗ್ಗೆ 9ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ.

ಯಾರ್‍ಯಾರ ಅವಧಿ ಅಂತ್ಯ?

ವಿಧಾನಪರಿಷತ್ ಸದಸ್ಯರಾದ ಗೋವಿಂದರಾಜು (ಕಾಂಗ್ರೆಸ್), ನಾಸೀರ್ ಅಹಮದ್ (ಕಾಂಗ್ರೆಸ್), ಎಂಟಿಬಿ ನಾಗರಾಜ್ (ಬಿಜೆಪಿ), ಪ್ರತಾಪ್ ಸಿಂಹ ನಾಯಕ್ ಕೆ(ಬಿಜೆಪಿ)., ತಿಪ್ಪಣ್ಣಪ್ಪ (ಕಾಂಗ್ರೆಸ್), ಸುನೀಲ್ ವಲ್ಯಾಪುರೆ (ಬಿಜೆಪಿ), ಬಿ.ಕೆ.ಹರಿಪ್ರಸಾದ್ (ಕಾಂಗ್ರೆಸ್) ಜೂ.30 ರಂದು ನಿವೃತ್ತಿ ಹೊಂದಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ಮೇಲನೆ ಸದಸ್ಯ ಸ್ಥಾನಕ್ಕೆ ಚುನಾವಣಾ ಆಯೋಗವು ಪ್ರಕಟಣೆ ಹೊರಡಿಸಿದ್ದು, ಅದರಂತೆ ಚುನಾವಣೆ ಪ್ರಕ್ರಿಯೆ ನಡೆಯಲಿದೆ.

ಸುಮಲತಾ, ಡಿವಿಎಸ್ ಹೆಸರು ಮುಂಚೂಣಿಗೆ

ಬೆಂಗಳೂರು: ಮಂಡ್ಯ ಲೋಕಸಭಾ ಕ್ಷೇತ್ರ ಎನ್‌ಡಿಎಗೆ ಬಿಟ್ಟುಕೊಟ್ಟ ಸುಮಲತಾ ಅಂಬರೀಷ್ ಅವರಿಗೆ ರಾಜ್ಯಸಭೆಯ ಅವಕಾಶ ನೀಡಲು ಬಿಜೆಪಿ ಹೈಕಮಾಂಡ್ ಒಲವು ತೋರಿದೆ ಎನ್ನಲಾಗಿದೆ. ಎಚ್.ಡಿ.ದೇವೇಗೌಡರ ಸ್ಪರ್ಧೆ ಚರ್ಚೆಯ ನಡುವೆ ಸುಮಲತಾ ಅಂಬರೀಶ್ ಹೆಸರು ಮುಂಚೂಣಿಯಲ್ಲಿದೆ. ಸುಮಲತಾಗೆ ಅವಕಾಶ ನೀಡುವ ಬಗ್ಗೆ ಬಿಜೆಪಿ ಹೈಕಮಾಂಡ್ ವಿವರಣೆ ಕೇಳಿದ್ದಾರೆ ಎಂದು ತಿಳಿದು ಬಂದಿದೆ. ಇನ್ನೊಂದೆಡೆ ರಾಜ್ಯಸಭೆಗೆ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಹೆಸರನ್ನು ರಾಜ್ಯ ಬಿಜೆಪಿ ಶಿಫಾರಸು ಮಾಡಿದೆ.

'ಅಹಿಂದ' ಹೆಸರೇಳಿ ಹಿಂದುಳಿದ ವರ್ಗಗಳಿಗೆ ಸಿದ್ದರಾಮಯ್ಯ ಅನ್ಯಾಯ: ಬಿವೈವಿ

ಸಿಎಂ ಬದಲಾದರೂ ಅಭಿವೃದ್ಧಿ ಶೂನ್ಯವಾಗಲಿದೆ

ಕಲಬುರಗಿ: ರಾಜ್ಯದಲ್ಲಿ ಮುಖ್ಯಮಂತ್ರಿಗಳು ರಾಜೀನಾಮೆ ನೀಡಿ, ಹೊಸ ಮುಖ್ಯಮಂತ್ರಿ ಬಂದರೂ ಯಾವುದೇ ಬದಲಾವಣೆ ಆಗುವುದಿಲ್ಲ. ರಾಜ್ಯದಲ್ಲಿ ಅಭಿವೃದ್ಧಿ ಆಗುವುದಿಲ್ಲ. ಈಗಾಗಲೇ ಅಭಿವೃದ್ಧಿ ಶೂನ್ಯವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಜಿಲ್ಲೆಯ ಆಳಂದದ ಲಾಡ್ಲೆ ಮಶಾಕ್ ದರ್ಗಾ ಆವರಣದ ರಾಘವ ಚೈತನ್ಯ ಶಿವಲಿಂಗ ಮೂರ್ತಿ ಪೂಜೆಗೆ ಅಡ್ಡಿಪಡಿಸಿ, ಕೇಂದ್ರ ಸಚಿವರು, ಶಾಸಕರು ಹಾಗೂ ಅಂದಿನ ಜಿಲ್ಲಾಧಿಕಾರಿಗಳ ವಾಹನದ ಮೇಲೆಯೇ ಕಲ್ಲು ತೂರಾಟ ನಡೆಸಿದ್ದ ಕೋಮು ಗಲಭೆ ಆರೋಪಿಗಳ ಮೇಲಿನ ಮೊಕದ್ದಮೆಗಳನ್ನು ರಾಜ್ಯ ಕಾಂಗ್ರೆಸ್ ಸರಕಾರ ವಾಪಸ್ ಪಡೆದಿರುವುದನ್ನು ಖಂಡಿಸಿ ನಗರದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಲು ಬಂದಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಗೆ ಹಣ ವಿನಿಯೋಗ ಮಾಡಲು ಸರಕಾರ ಈಗಾಗಲೇ ಹರಸಾಹಸ ಪಡುತ್ತಿದೆ. ಒಂದು ವೇಳೆ ನಾಯಕತ್ವ ಬದಲಾವಣೆಯಾಗಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೂ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಆಗುವುದಿಲ್ಲ. ಸಿಎಂ ಕುರ್ಚಿಯಲ್ಲಿ ಕೂತರೂ ಸಿದ್ದರಾಮಯ್ಯ ಅವರ ಬೆಂಬಲಿಗರನ್ನು ನಿಭಾಯಿಸುವುದರಲ್ಲೇ ಶಿವಕುಮಾರ್ ಅವರಿಗೆ ಎರಡು ವರ್ಷ ಕಳೆದುಹೋಗುತ್ತದೆ ಎಂದರು.

ಅಹಿಂದ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳಿಗೆ ಘೋರ ಅನ್ಯಾಯ ಎಸಗಿದ್ದಾರೆ. ಸುಮಾರು 400 ಕೋಟಿ ರು. ವೆಚ್ಚದ ಕಾಂತರಾಜು ವರದಿಯನ್ನು ಹಾಳುಗೆಡವಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅವರು ಹಿಂದುಳಿದ ವರ್ಗಗಳಿಗೆ ಯಾವುದೇ ನ್ಯಾಯ ಒದಗಿಸಿಲ್ಲ. ಪ್ರಸ್ತುತ ಚರ್ಚೆಯಲ್ಲಿರುವ ಹಿಂದುಳಿದ ವರ್ಗಗಳ ಜಾತಿಸಮೀಕ್ಷೆ ವರದಿ ತೀರಾ ಅವೈಜ್ಞಾನಿಕವಾಗಿದೆ ಎಂದು ಕಿಡಿಕಾರಿದರು.

ರಾಜ್ಯ ಸರಕಾರ ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ತಂದು ಶಾಲಾ ಮಕ್ಕಳ ಎಳೆಯ ಮನಸ್ಸಿನಲ್ಲಿ ಧರ್ಮದ ಹೆಸರಿನಲ್ಲಿ ದ್ವೇಷ ಸೃಷ್ಟಿಸುವ ಹಾಗೂ ತಾರತಮ್ಯದ ವಿಷಬೀಜ ಬಿತ್ತುವ ಕೆಲಸ ಮಾಡಿದೆ. ಕಳೆದ ಮೂರು ವರ್ಷಗಳಿಂದ ರಾಜ್ಯದ ಜನತೆ ಕೇವಲ ಆಡಳಿತ ವೈಫಲ್ಯವನ್ನು ಅನುಭವಿಸುತ್ತಿದ್ದಾರೆ. ಮುಂದಿನ ದಿನಗಳ ಬಗ್ಗೆಯೂ ಜನರಿಗೆ ಯಾವುದೇ ಭರವಸೆ ಉಳಿದಿಲ್ಲ. ಕಾಂಗ್ರೆಸ್ ಸರಕಾರ ಸಂಪೂರ್ಣವಾಗಿ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಆಪಾದಿಸಿದರು.

ಕಲಬುರಗಿಯಲ್ಲಿ ಸುದ್ದಿಗಾರರ ಜತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದದರು.

> ಕಾಂಗ್ರೆಸ್‌ನ ಜನವಿರೋಧಿ ನೀತಿಗಳ ವಿರುದ್ಧ ಬಿಜೆಪಿ ಸುಮ್ಮನೆ ಕೂರುವುದಿಲ್ಲ. ರಾಜ್ಯದ ಪ್ರಮುಖ ವಿರೋಧ ಪಕ್ಷವಾಗಿ ಬಿಜೆಪಿ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿ ನಿಂತು ನಿರಂತರ ಹೋರಾಟ ಮಾಡುತ್ತದೆ. ಇದರೊಂದಿಗೆ ರಾಜ್ಯಾದ್ಯಂತ ಪಕ್ಷದ ಬಲವರ್ಧನೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
>
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸರಕಾರಿ ಶಾಲೆ ವಿದ್ಯಾರ್ಥಿಗಳು ಪ್ರತಿಭಾವಂತರು: ಡಿಕೆ

ವಿದ್ಯಾರ್ಥಿಗಳಿಗೆ ಶುಭವಾಗಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನೂತನ ಶೈಕ್ಷಣಿಕ ವರ್ಷ ಪ್ರಾರಂಭವಾಗಲಿದೆ. ನನ್ನ ಪ್ರೀತಿಯ ವಿದ್ಯಾರ್ಥಿಗಳಿಗೆ ಶುಭವಾಗಲಿ, ಯಶಸ್ಸು ಸಿಗಲೆಂದು ಹಾರೈಸುತ್ತೇನೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮಲ್ಲಿ ಓದಿರುವ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಅತ್ಯಮೂಲ್ಯ ಮಾನವ ಸಂಪನ್ಮೂಲವಾಗಿ ತಮ್ಮದೇ ಆದ ಕೊಡುಗೆ ನೀಡಿದ್ದು, ಇಡೀ ವಿಶ್ವ ಇದಕ್ಕೆ ಸಾಕ್ಷಿಯಾಗಿದೆ. ನಮ್ಮ ಜ್ಞಾನದ ಭಂಡಾರ ಇಡೀ ವಿಶ್ವವನ್ನೇ ಆಕರ್ಷಿಸುತ್ತಿದೆ. ಜಗತ್ತಿನ ಬಹುತೇಕ ವಿಶ್ವ ವಿದ್ಯಾಲಯಗಳಲ್ಲಿ ನಮ್ಮ ವಿದ್ಯಾರ್ಥಿಗಳು ಓದಿ ಅನೇಕ ಸಾಧನೆ ಮಾಡಿದ್ದಾರೆ ಎಂದರು.

ನಮ್ಮಲ್ಲಿ ಅಮೂಲ್ಯ ಮಾನವ ಸಂಪನ್ಮೂಲಗಳಿವೆ. ಹೀಗಾಗಿ ಜಗತ್ತು ಭಾರತವನ್ನು ಕರ್ನಾಟಕ ಮೂಲಕ ನೋಡುತ್ತಿದೆ. ಇದೇ ಕಾರಣಕ್ಕೆ ನಮ್ಮ ಹಿರಿಯರು, ಐಐಟಿ, ಐಐಎಂ, ರಾಷ್ಟ್ರೀಯ ಕಾನೂನು ಕಾಲೇಜು, ಇಸ್ರೋ, ಎಚ್‌ಎಎಲ್ ಸೇರಿದಂತೆ ಇತರ ಪ್ರಮುಖ ಸಂಸ್ಥೆಗಳನ್ನು ಇಲ್ಲೇ ಆರಂಭಿಸಿದ್ದಾರೆ. ಇವುಗಳನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಮಕ್ಕಳು ತಮ್ಮ ವಿದ್ಯಾಭ್ಯಾಸ ಮಾಡಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಆತ್ಮ ವಿಶ್ವಾಸ ಕಳೆದುಕೊಳ್ಳಬಾರದು: ನಾವು ಕೃತಕಬುದ್ಧಿಮತ್ತೆ ಯುಗಕ್ಕೆ ಹೋಗುತ್ತಿದ್ದು, ಇದಕ್ಕೆ ಪೂರಕವಾಗಿ ವಿದ್ಯಾಭ್ಯಾಸ ಮಾಡಬೇಕು. ಮುಂದಿನ ದಿನಗಳಲ್ಲಿ ನಮ್ಮ ಶಿಕ್ಷಣ ನೀತಿಯನ್ನು ತಿಳಿಸಲಾಗುವುದು. ಈ ವರ್ಷ ನಿಮಗೆ ಶುಭವಾಗಲಿ, ಯಶಸ್ಸು ಸಿಗಲಿ.

ಸರಕಾರಿ ಶಾಲಾ ಮಕ್ಕಳು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಸರಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರಿದ್ದಾರೆ. ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಷ್ಟೇ ಪ್ರತಿಭೆ ನಿಮ್ಮಲ್ಲೂ ಇದೆ ಎಂದು ತಿಳಿಸಿದರು.

ಐಪಿಎಲ್ ಫೈನಲ್ ಇಲ್ಲೇ ನಡೆಯಬೇಕಿತ್ತು

ಐಪಿಎಲ್ ಫೈನಲ್ ಪಂದ್ಯ ಬೆಂಗಳೂರಿನಲ್ಲಿ ನಡೆಯಬೇಕಿತ್ತು. ನಾವು ಅದಕ್ಕೆ ಅನುಮತಿ ನೀಡಿದ್ದೆವು. ಆದರೆ ಗುಜರಾತಿನವರು ತಮ್ಮ ಪ್ರಭಾವ ಬಳಸಿ ನಮ್ಮಿಂದ ಪಂದ್ಯ ಕಿತ್ತುಕೊಂಡಿದ್ದಾರೆ. ಮುಂದೆ ಮತ್ತೆ ಈ ರೀತಿ ಕಿತ್ತುಕೊಳ್ಳದಂತೆ ಅಗತ್ಯ ಸಿದ್ಧತೆ ಮಾಡುತ್ತಿದ್ದೇವೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ನಮ್ಮ ಕ್ರೀಡಾಪ್ರೇಮಿಗಳಿಗೆ ಅನ್ಯಾಯ ಆಗಿರಬಹುದು. ನಮ್ಮ ರಾಜ್ಯ ಹೆಸರಿನಲ್ಲಿ ಪ್ರತಿನಿಧಿಸುವ ತಂಡ ಉತ್ತಮವಾಗಿ ಆಡಿ ಗೆದ್ದಿದ್ದಾರೆ. ನಮ್ಮೆಲ್ಲರಿಗೂ ಹೆಮ್ಮೆ ತಂದಿದ್ದಾರೆ. ಕರ್ನಾಟಕದ ಜನರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಡಿಕೆಶಿ ತಿಳಿಸಿದರು.

ಗ್ರಾಮೀಣ ಮಹಿಳಾ ಸ್ವಾವಲಂಬನೆ, ಸಬಲೀಕರಣದ 'ಸಿರಿ' ದರ್ಶನ | ಇಡೀ ದೇಶದ ಕ್ಷೇತ್ರಕ್ಕೆ ದಿಕ್ಸೂಚಿ

ಸರಕಾರಗಳಿಗೇ ಮಾದರಿಯಾದ ಧರ್ಮಸ್ಥಳದ ವಿಕಾಸ ಪಥ

ಜಿತೇಂದ್ರ ಕುಂದೇಶ್ವರ, ಧರ್ಮಸ್ಥಳ:

ಸರಕಾರಗಳು ಕೋಟ್ಯಂತರ ರುಪಾಯಿ ಅನುದಾನ ನೀಡಿ ಜಾರಿಗೆ ತರಲು ತಡಕಾಡುವ ಹಲವು ಅಭಿವೃದ್ಧಿ ಯೋಜನೆಗಳನ್ನು, ಶ್ರೀ ಕ್ಷೇತ್ರ ಧರ್ಮಸ್ಥಳ ಅತ್ಯಂತ ವ್ಯವಸ್ಥಿತವಾಗಿ, ಪಾರದರ್ಶಕವಾಗಿ ಮತ್ತು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ದಶಕಗಳೇ ಕಳೆದಿವೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರ ದೂರದೃಷ್ಟಿಯ ಫಲವಾಗಿ ಮೂಡಿಬಂದ ಗ್ರಾಮೀಣಾಭಿವೃದ್ಧಿ ಯೋಜನೆ, ರುಡ್ಸೆಟ್ ಮತ್ತು ಸಿರಿ' ಗ್ರಾಮೋದ್ಯೋಗ ಸಂಸ್ಥೆಗಳು ಇಂದು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ದೇಶದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಿಕ್ಸೂಚಿಯಾಗಿವೆ.

ಇದೇ ಕಾರಣಕ್ಕೆ ದೇಶದ ಪ್ರಧಾನಿ ನರೇಂದ್ರ ಮೋದಿಯವರಿಂದ ಹಿಡಿದು, ಹಳ್ಳಿಯ ಸಾಮಾನ್ಯ ರೈತನವರೆಗೆ ಪ್ರತಿಯೊಬ್ಬರೂ ಧರ್ಮಸ್ಥಳದ ಈ ವಿಶ್ವರೂಪದ ಸೇವೆಯನ್ನು ಮುಕ್ತಕಂಠದಿಂದ ಕೊಂಡಾಡುತ್ತಿದ್ದಾರೆ.

ಮೇ 31 ಭಾನುವಾರ ಶ್ರೀ ಕ್ಷೇತ್ರ ಧರ್ಮಸ್ಥಳದ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ ಸಿರಿ' ಸಂಸ್ಥೆಯ ಬೆಳ್ತಂಗಡಿಯ ಸುಸಜ್ಜಿತ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್, ಉದ್ಘಾಟನಾ ಸಮಾರಂಭಕ್ಕೆ ಭಾರತದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹಾಗೂ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಆಗಮನ ಮತ್ತು ಅವರು ಆಡಿದ ಮೆಚ್ಚುಗೆಯ ಮಾತುಗಳು ಧರ್ಮಸ್ಥಳದ ಈ ಅಪ್ರತಿಮ ಸೇವೆಗೆ ಹಿಡಿದ ಮತ್ತೊಂದು ಕನ್ನಡಿಯಾಗಿದೆ.

ಆಡಳಿತ ವೈಖರಿ ಅಚ್ಚರಿ: ಯಾವುದೇ ಒಂದು ಕಲ್ಯಾಣ ರಾಜ್ಯದ ಕಲ್ಪನೆಯಲ್ಲಿ ಅನ್ನದಾನ, ವಿದ್ಯಾದಾನ, ಔಷಧದಾನ ಪ್ರಮುಖವಾದವುಗಳು. ಧರ್ಮಸ್ಥಳವು ಈ ಸಾಂಪ್ರದಾಯಿಕ ದಾನಗಳ ಜತೆಗೆ 'ಅಭಯ ದಾನ' ಮತ್ತು 'ಸ್ವಾವಲಂಬನೆ' ದಾನ ನೀಡುವ ಮೂಲಕ ಗ್ರಾಮೀಣ ಭಾಗದ ಆರ್ಥಿಕತೆ ಕ್ರಾಂತಿಗೆ ಕಾರಣವಾಗಿದೆ. ಧರ್ಮ ಮತ್ತು ಪರಂಪರೆಯ ರಕ್ಷಣೆಯೊಂದಿಗೆ ಅನ್ನದಾನ, ವಿದ್ಯಾದಾನ, ಔಷಧಿ ದಾನ, ಅಭಯ ದಾನದ ಮಾನವೀಯ ಸೇವೆಗಳನ್ನು ಮಾಡುವ ಜತೆ ಪಾರದರ್ಶಕ ಆಡಳಿತ ವೈಖರಿ ರಾಷ್ಟ್ರಕ್ಕೇ ಮಾದರಿ ಎಂದಿದ್ದಾರೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷನ್.

ಆತ್ಮ ನಿರ್ಭರಕ್ಕೆ ಬುನಾದಿ: ಪ್ರಧಾನಿ ನರೇಂದ್ರ ಮೋದಿಯವರ ಆತ್ಮ ನಿರ್ಭರ ಭಾರತ ತತ್ವದ ನೆಲೆಯಲ್ಲೇ ಶ್ರೀ ಕ್ಷೇತ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ರುಡ್‌ಸೆಟ್ ಮತ್ತು ಸಿರಿ ಗ್ರಾಮೋದ್ಯೋಗ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮೀಣ ಮಹಿಳೆಯರನ್ನು ಸಂಘಟಿಸಿ, ಅವರಿಗೆ ಕಚ್ಚಾವಸ್ತು ಪೂರೈಸಿ, ಅವರು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವ ಸಿರಿ' ಸಂಸ್ಥೆಯ ನಡೆ ಒಂದು ನಿಶ್ಯಬ್ಧ ಸಾಮಾಜಿಕ ಚಳುವಳಿ.

ಮಹಿಳೆ ಸೃಷ್ಟಿಕರ್ತೆ: ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಂಚಿಕೊಂಡ ಆಲೋಚನೆಗಳು ಇಡೀ ಕೈಗಾರಿಕಾ ವಲಯಕ್ಕೇ ಹೊಸ ಪಾಠದಂತಿವೆ. ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆ ಎಂದರೆ ಕೇವಲ ಮನೆಯ ಸದಸ್ಯೆ ಅಲ್ಲ. ಸಮಾಜವನ್ನು ಉಳಿಸುವ ಶಕ್ತಿ. ಮಾತೃಶ್ರೀ ಅಂದರೆ ತಾಯಿತನ, ತ್ಯಾಗ, ಶಕ್ತಿ ಮತ್ತು ಕರುಣೆಗೆ ಸಲ್ಲಿಸುವ ಗೌರವ.

ಇಲ್ಲಿ ದುಡಿಯುವ ಪ್ರತಿ ಮಹಿಳೆಯೂ ಕಾರ್ಮಿಕಳಲ್ಲ; ಅವಳು ಸೃಷ್ಟಿಕರ್ತೆ, ಪೋಷಕಳು ಮತ್ತು ದೇಶದ ಅಮೂಲ್ಯ ಶಕ್ತಿ ಎಂದು ಬಣ್ಣಿಸಿದ್ದಾರೆ ಡಾ.ಡಿ. ವೀರೇಂದ್ರ ಹೆಗ್ಗಡೆಯವರು.

ಆರ್ಥಿಕ ವಿಕಾಸದ ಬೆಸುಗೆ: ಗೌರವ ಉಪಸ್ಥಿತರಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರು ಹೇಳಿದಂತೆ, ಧರ್ಮಸ್ಥಳದ ಯೋಜನೆಗಳು ಜನರಲ್ಲಿ ಕೇವಲ ಆರ್ಥಿಕ ವಿಕಾಸವನ್ನು ಮಾತ್ರ ಮೂಡಿಸುತ್ತಿಲ್ಲ. ಬದಲಿಗೆ ಅವರಲ್ಲಿ ಕಳೆದುಹೋಗಿದ್ದ ಆತ್ಮವಿಶ್ವಾಸವನ್ನು ಮರುಕಳಿಸುವಂತೆ ಮಾಡುತ್ತಿವೆ. ಯುವಕ-ಯುವತಿಯರಿಗೆ ಉದ್ಯೋಗ ನೀಡಿ ಸಶಕ್ತ ಕೇಂದ್ರವಾಗಿ ಬೆಳೆದಿರುವ 'ಸಿರಿ' ಸಂಸ್ಥೆಯು ನವಭಾರತ ನಿರ್ಮಾಣದಲ್ಲಿ ಪ್ರಮುಖ ಸ್ಥಾನ ಪಡೆದಿದೆ ಎಂದು ಮುಕ್ತಕಂಠದಿಂದ ಹೊಗಳಿದ್ದಾರೆ.

ಗಣ್ಯರ ಉಪಸ್ಥಿತಿ: ಸಮಾರಂಭದ ವೇದಿಕೆಯಲ್ಲಿ ಶ್ರೀ ಕ್ಷೇತ್ರದ ಮಾತೃ ಶ್ರೀ ಡಾ. ಹೇಮಾವತಿ ವೀ. ಹೆಗ್ಗಡೆ, ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯರಾದ ಪ್ರತಾಪಸಿಂಹ ನಾಯಕ್ , ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷರಾದ ಡಿ. ಸುರೇಂದ್ರ ಕುಮಾರ , ಶ್ರೀ ಕ್ಷೇತ್ರದ ಧರ್ಮೋತ್ಥಾನ ಟ್ರಸ್ಟ್‌ನ ಟ್ರಸ್ಟಿಗಳಾದ ಡಿ. ಹರ್ಷೇಂದ್ರ ಕುಮಾರ್, ಪ್ರಮುಖರಾದ ಸುಪ್ರಿಯಾ ಹರ್ಷೇಂದ್ರ ಕುಮಾರ್, ಸಿರಿ' ಸಂಸ್ಥೆಯ ರಾಯಭಾರಿ , ಖ್ಯಾತಚಲನಚಿತ್ರ ನಟರಾದ ರಮೇಶ್ ಅರವಿಂದ್, ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಡಾ. ಸತೀಶ್ಚಂದ್ರ ಎಸ್. ಮತ್ತು ಸಿರಿ' ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್. ಜನಾರ್ದನ್ ಉಪಸ್ಥಿತರಿದ್ದರು.

ಬೆಳ್ತಂಗಡಿ ತಾಲೂಕಿನ ರೆಂಕೆದಗುತ್ತು ಎಂಬಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಧರ್ಮಸ್ಥಳ ಸಿರಿ ಸಂಸ್ಥೆಯ ಸುಸಜ್ಜಿತ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್ ಉದ್ಘಾಟನೆಗಾಗಿ ಆಗಮಿಸಿದ್ದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಸ್ಮರಣಿಕೆ ನೀಡಲಾಯಿತು. ಈ ವೇಳೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಸಿರಿ ಸಂಸ್ಥೆಯ ಸಂಸ್ಥಾಪಕಿ ಹೇಮಾವತಿ ವೀರೇಂದ್ರ ಹೆಗ್ಗಡೆ ಸೇರಿ ಹಲವರು ಉಪಸ್ಥಿತರಿದ್ದರು.

ಸಾಮರಸ್ಯದ ಬೆಸುಗೆ

ಧರ್ಮಸ್ಥಳದ ಯೋಜನೆಗಳ ಅತ್ಯಂತ ಪ್ರಸ್ತುತವಾದ ಅಂಶವೆಂದರೆ ಸಾಮಾಜಿಕ ಸಾಮರಸ್ಯ, ಜಾತಿ, ಮತ, ಧರ್ಮದ ಭೇದವಿಲ್ಲದೆ ಸರ್ವರನ್ನೂ ಸಮಾನವಾಗಿ ಕಾಣುವ ಮತ್ತು ಎಲ್ಲರಿಗೂ ಆರ್ಥಿಕ ಶಕ್ತಿ ತುಂಬುವ ಕ್ಷೇತ್ರದ ಕಾರ್ಯವೈಖರಿ ಆದರ್ಶಕರ. ಇದು ಜನರಿಗೆ ಕೇವಲ ಆರ್ಥಿಕ ವಿಕಾಸ ಮಾತ್ರ ಮೂಡಿಸುತ್ತಿಲ್ಲ, ಬದಲಿಗೆ ಕಳೆದುಹೋಗಿದ್ದ ಆತ್ಮವಿಶ್ವಾಸವನ್ನು ಮರುಕಳಿಸುವಂತೆ ಮಾಡುತ್ತಿದೆ.

ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಕೆ

ಸಾಂಪ್ರದಾಯಿಕ ಉಡುಪಿನಲ್ಲಿ ದೇವಾಲಯಕ್ಕೆ ಆಗಮಿಸಿದ ಉಪರಾಷ್ಟ್ರಪತಿಗಳು ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಬಳಿಕ ಅವರು ಅನ್ನಪೂರ್ಣ ಛತ್ರಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಡಾ. ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಕೆಲಕಾಲ ಮಾತುಕತೆ ನಡೆಸಿದರು.

ಮುಂದಿನ ಪೀಳಿಗೆಯ ಮಹಿಳೆಯರಿಗೆ ದಾರಿದೀಪ

ಬೆಳ್ತಂಗಡಿಯಲ್ಲಿ ತಲೆಎತ್ತಿರುವ ಸುಸಜ್ಜಿತ 'ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್' ಮುಂದಿನ ಪೀಳಿಗೆಯ ಗ್ರಾಮೀಣ ಮಹಿಳೆಯರ ಬದುಕಿಗೆ ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ. ಸರಕಾರಗಳು ಉದ್ಯೋಗ ಸೃಷ್ಟಿ ಮತ್ತು ಗ್ರಾಮೀಣಾಭಿವೃದ್ಧಿಯ ಮಾದರಿಗಳನ್ನು ಹುಡುಕುತ್ತಿರುವಾಗ, ಧರ್ಮಸ್ಥಳವು ಈಗಾಗಲೇ ಆ ಮಾದರಿಯನ್ನು ಯಶಸ್ವಿಯಾಗಿ ನಡೆಸಿ ತೋರಿಸಿ, ರಾಷ್ಟ್ರಕ್ಕೆ ಆದರ್ಶವಾಗಿದೆ.

ಸಂಪಾದಕೀಯ

ಆರ್‌ಸಿಬಿ ಅರ್ಹ ವಿಜಯ

ಇಂಡಿಯನ್ ಪ್ರೀಮಿಯರ್ ಲೀಗ್– 2026ರ ಫೈನಲ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಸೋಲಿಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಕಪ್ ಗೆದ್ದಿದೆ. ಸತತ ಎರಡನೇ ಬಾರಿಗೆ ಐಪಿಎಲ್ ಚಾಂಪಿಯನ್ ಆಗುವ ಮೂಲಕ ಅಭಿಮಾನಿಗಳ ನಿರೀಕ್ಷೆಯನ್ನು ಈಡೇರಿಸಿದೆ. ಕಳೆದ ಬಾರಿಯೂ ಆರ್‌ಸಿಬಿ ಕಪ್ ಗೆದ್ದಿತ್ತು. ಅದು 17 ವರ್ಷಗಳ ಸತತ ಪ್ರಯತ್ನ, ಸೋಲುಗಳ ಬಳಿಕ ಗೆದ್ದ ಕಪ್ ಆಗಿತ್ತು. ಆದರೆ ಆ ಗೆಲುವಿನ ಸಂಭ್ರಮವನ್ನು ಚಿನ್ನಸ್ವಾಮಿ ಸ್ಟೇಡಿಯಂನ ಕಾಲ್ತುಳಿತ ದುರಂತ ಮಸುಕಾಗಿಸಿತ್ತು. ಈ ಬಾರಿ ಸಂಭ್ರಮವನ್ನಷ್ಟೇ ನಮ್ಮದಾಗಿಸಿಕೊಳ್ಳಲು ಸಾಧ್ಯವಾಗಿದೆ. ಆರ್‌ಸಿಬಿ ತಂಡವನ್ನು ಕನ್ನಡ ನಾಡಿನ ಐಪಿಎಲ್ ಕ್ರಿಕೆಟ್ ರಸಿಕರು 'ತಮ್ಮದು' ಎಂದು ಶುರುವಾತಿನಿಂದಲೂ ಎದೆಗಪ್ಪಿಕೊಂಡಿದ್ದಾರೆ. ಆಗ ಅದರ ಮಾಲಿಕರೂ ಕನ್ನಡಿಗರಾಗಿದ್ದರು, ತಂಡದಲ್ಲೂ ಕನ್ನಡಿಗರು ಇದ್ದರು. ಇಂದು ಅದರ ಮಾಲಿಕರು ಕನ್ನಡಿಗರಲ್ಲ, ತಂಡದಲ್ಲಿಯೂ ಒಬ್ಬ ಮಾತ್ರ ಕನ್ನಡಿಗ ಇರುವುದು. ಆದರೆ ಇದ್ಯಾವುದೂ ಕ್ರಿಕೆಟ್ ಪ್ರಿಯರಿಗೆ ಸಂಭ್ರಮಿಸಲು ಅಡೆತಡೆಯಲ್ಲ. ತಂಡದೊಂದಿಗೆ ಅಂಟಿಕೊಂಡಿರುವ 'ಬೆಂಗಳೂರು' ನಮ್ಮದಾಗಿರುವ ತನಕ ನಿರೀಕ್ಷೆ, ಸಂಭ್ರಮ ಇರುತ್ತದೆ. ಹಾಗೇ ಉತ್ತಮ ಆಟವನ್ನು ಕ್ರಿಕೆಟ್ ಪ್ರಿಯರು ಆನಂದಿಸಿದ್ದಾರೆ. ಆರ್‌ಸಿಬಿ ದಿಟ್ಟ ಹೋರಾಟದ ಮೂಲಕ ಈ ಐಪಿಎಲ್ ಸೀಸನ್‌ನಲ್ಲಿ ಮುನ್ನಡೆ ಕಾಪಾಡಿಕೊಂಡು ಬಂದಿದ್ದು, ಅರ್ಹವಾಗಿಯೇ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ತಂಡದಲ್ಲಿ ಎಲ್ಲರೂ ಸ್ಟಾರ್ ಆಟಗಾರರಂತೆ ಆಡಿದ್ದಾರೆ. ಅನುಭವಿ ವಿರಾಟ್ ಕೊಹ್ಲಿ ಮಾರ್ಗದರ್ಶನ ನೀಡಿದ್ದಲ್ಲದೆ ಫೈನಲ್ ಪಂದ್ಯದಲ್ಲಿ ಸ್ಫೋಟಕ 75 ರನ್ ಬಾರಿಸಿ ತಂಡಕ್ಕೆ ಆಸರೆಯಾದರು. ರಜತ್ ಪಾಟೀದಾರ್ ತಂಡಕ್ಕೆ ಒಳ್ಳೆಯ ನಾಯಕತ್ವ ನೀಡಿ ಮುನ್ನಡೆಸಿದ್ದಾರೆ. ದೇವದತ್ ಪಡಿಕ್ಕಲ್, ಸುಯಶ್ ಶರ್ಮಾ, ವೆಂಕಟೇಶ್ ಅಯ್ಯರ್ ಮೊದಲಾದ ಅತ್ಯುತ್ತಮ ದಾಂಡಿಗರ ಸಾಲನ್ನೇ ಹೊಂದಿರುವ ಆರ್‌ಸಿಬಿ ಆಕ್ರಮಣಕಾರಿ ಆಟವನ್ನೇ ನೆಚ್ಚಿಕೊಂಡಿದ್ದು, ಪವರ್ ಪ್ಲೇನಲ್ಲಿ ಗರಿಷ್ಠ ರನ್‌ಗಳನ್ನು ದಾಖಲಿಸಿ ಎದುರಾಳಿ ತಂಡದ ಮೇಲೆ ಒತ್ತಡ ಸೃಷ್ಟಿಸಿದೆ. ಜೊತೆಗೆ ಅತ್ಯುತ್ತಮ ಬೌಲರ್‌ಗಳ ಪಡೆಯನ್ನೂ ಹೊಂದಿದೆ. ಇದರ ಜೊತೆಗೆ ನಮ್ಮ ಮಹಿಳಾ ಐಪಿಎಲ್ ತಂಡವನ್ನೂ ನೆನೆಯಬೇಕು. ಈ ವರ್ಷ ಆರ್‌ಸಿಬಿ ಮಹಿಳಾ ತಂಡವೂ ಟ್ರೋಫಿ ಗೆದ್ದು ಖುಷಿ ಇಮ್ಮಡಿಸಿದೆ. ಟ್ರೋಫಿಗಳ ಜಯದ ಹಿಂದೆ ಕೋಚ್‌ಗಳ ಪರಿಶ್ರಮವೂ ಇದೆ. ಇದಲ್ಲದೆ ರಾಜಸ್ಥಾನ್ ರಾಯಲ್ಸ್‌ನ ವೈಭವ್ ಸೂರ್ಯವಂಶಿಯ 'ವೈಭವ' ಪ್ರದರ್ಶನದೊಂದಿಗೆ ಇಡೀ ಐಪಿಎಲ್ ಸೀಸನ್ ಕ್ರೀಡಾಪ್ರೇಮಿಗಳ ಮನರಂಜಿಸಿದೆ.

ಸೊಂಪಾದಕೀಯ

ವ್ಯಾಪಾರಕ್ಕೇ ಕಾಂಡೋಮ್

ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಚೀನಾ. ಆದರೆ ಅಲ್ಲೀಗ ಯಾರೂ ಮಕ್ಕಳನ್ನು ಮಾಡಿಕೊಳ್ಳುತ್ತಿಲ್ಲ. ಹೀಗಾದರೆ ಮುಂದಿನ ತಲೆಮಾರೇ ಇರೊಲ್ಲ. ಇದರಿಂದ ಗಾಬರಿ ಬಿದ್ದ ಚೀನಾ ಸರಕಾರ ಪೆಂಗು ಪೆಂಗು ಕ್ರಮಗಳನ್ನೆಲ್ಲ ಕೈಗೊಳ್ಳುತ್ತಿದೆ. 'ಮಕ್ಕಳನ್ನು ಹೆರಿ' ಎಂದು ಇನ್ಸೆಂಟಿವ್ ನೀಡಿ ಪ್ರೋತ್ಸಾಹಿಸೋದು ಬೇರೆ. ಆದರೆ ಮಕ್ಕಳನ್ನು ಸಾಕುವ ವೆಚ್ಚದಿಂದ ಕಂಗಾಲಾಗಿರುವ ದಂಪತಿಗಳು, ಕಾಂಡೋಮ್ ಬಳಸುತ್ತಿದ್ದಾರೆ. ಅಕಸ್ಮಾತ್ ಗರ್ಭ ನಿಂತರೂ ಅಬಾರ್ಷನ್ ಮಾಡಿಕೊಳ್ತಿದ್ದಾರೆ. ಈಗ ಇದನ್ನೂ ತಡೆಯೋಕೆ ಚೀನಾ ಸರಕಾರ ಕಠಿಣ ಪ್ಲಾನ್ ಮಾಡಿದೆ. ಅದೇನು ಅಂದರೆ ಅಬಾರ್ಷನ್ ಕ್ಲಿಷ್ಟ ಮಾಡುವುದು, ಗರ್ಭನಿರೋಧಕ ಉತ್ಪನ್ನಗಳ ಮೇಲೆ ಕಠಿಣ ನಿರ್ಬಂಧ, ಕಾಂಡೋಮ್‌ಗಳ ಮೇಲೆ ನೀಡಲಾಗುತ್ತಿದ್ದ ರಿಯಾಯಿತಿ ಹಿಂಪಡೆತ, ಜೊತೆಗೆ ಇವುಗಳ ಮೇಲೆ ಶೇ. 13ರಷ್ಟು ವ್ಯಾಟ್ ಹೇರಿಕೆ. ಇದರಿಂದ ಬೆಲೆ ಹೆಚ್ಚಾಗಿ ಕಾಂಡೋಮ್ ಮಾರಾಟ ಕುಸಿದಿದೆ. ಜೊತೆಗೆ ಕಾಂಡೋಮ್‌ಗಳ ಆನ್‌ಲೈನ್ ಜಾಹೀರಾತುಗಳ ಮೇಲೆ ಸರಕಾರದ ಕಠಿಣ ನಿಷೇಧ. ಇದರಿಂದೆಲ್ಲ ಅಲ್ಲಿ ಹೆಚ್ಚಾಗಿ ಮಾರಾಟ ಆಗುತ್ತಿದ್ದ ವಿಶ್ವದ ನಂ.1 ಕಾಂಡೋಮ್ ಬ್ರ್ಯಾಂಡ್ 'ಡ್ಯುರೆಕ್ಸ್'ಗೆ ಸಿಕ್ಕಾಪಟ್ಟೆ ಲಾಸ್ ಆಗಿದೆಯಂತೆ. ಅಂದರೆ ಮುನ್ನುಗ್ಗುತ್ತಿದ್ದ ಕಾಂಡೋಮ್ ವ್ಯಾಪಾರಕ್ಕೇ ಚೀನಾ ಕಾಂಡೋಮ್ ಹಾಕಿದಂತಾಗಿದೆ. ಚೀನಾದ ಯುವ ದಂಪತಿಗಳ ಗತಿ ದೇವರಿಗೇ ಪ್ರೀತಿ. ಇನ್ನು ಮುಂದೆ ಅಲ್ಲಿ ಸರಕಾರದ ಅಧಿಕಾರಿಗಳೇ ಬಂದು 'ನೀವು ಮದುವೆಯಾಗಿ ಒಂದು ವರ್ಷವಾಯಿತು. ಯಾಕಿನ್ನೂ ಮಗು ಮಾಡಿಲ್ಲ?' ಎಂದು ಗದರಿಸಿ ಇಬ್ಬರನ್ನೂ ಜೈಲಿಗೆ ತಳ್ಳುವ ಸಾಧ್ಯತೆ ಇದೆ. ಅದ್ಸರಿ, ಜೈಲಿನಲ್ಲಿ ಬೇರೆ ಕೋಣೆಗಳಲ್ಲಿ ಅವರನ್ನು ಇಟ್ಟರೆ ಮಗು ಆಗುವುದಾದರೂ ಹೇಗೆ?

ಸಂಪಾದಕರ ಸದ್ಯಶೋಧನೆ

ದೌರ್ಬಲ್ಯವನ್ನೇ ಶಕ್ತಿಯಾಗಿಸಿಕೊಳ್ಳುವುದು

ಇತ್ತೀಚೆಗೆ ನಾನು ಜಾನ್ ಕಿಮ್ ಬರೆದ I Used to Be a Miserable F*ck ಎಂಬ ಕೃತಿಯನ್ನು ಓದಿದೆ. ಇದು ಸಾಂಪ್ರದಾಯಿಕ ಸ್ವಯಂ–ಸಹಾಯ ಪುಸ್ತಕಗಳಿಗಿಂತ ಭಿನ್ನವಾದುದು. ಇದು ಬದುಕಿನ ಕಟು ಸತ್ಯಗಳನ್ನು ನೇರವಾಗಿ, ಸ್ವಲ್ಪ ಒರಟಾಗಿ ಮತ್ತು ಅಷ್ಟೇ ಪ್ರಾಮಾಣಿಕವಾಗಿ ತೆರೆದಿಡುವ ಕೃತಿ. ಕಿಮ್ ಹೇಳುವ ಮುಖ್ಯ ಸಂಗತಿಯೆಂದರೆ, ನಮ್ಮ ಜೀವನದ ದುಃಖಕ್ಕೆ ಬೇರೆಯವರನ್ನು ದೂಷಿಸುವುದನ್ನು ನಿಲ್ಲಿಸುವುದು. ನೀವು 'ಮಿಸರಬಲ್' ಆಗಿರಲು ಕಾರಣ ನಿಮ್ಮ ಬಾಸ್, ನಿಮ್ಮ ಮಾಜಿ ಸಂಗಾತಿ ಅಥವಾ ನಿಮ್ಮ ಹಣೆಬರಹವಲ್ಲ. ಬದಲಿಗೆ ನೀವು ಅದನ್ನು ನಿಭಾಯಿಸುತ್ತಿರುವ ರೀತಿ. ನಿಮ್ಮ ಸಂತೋಷದ ಜವಾಬ್ದಾರಿ ಕೇವಲ ನಿಮ್ಮದು ಎಂಬ ಕಟು ಸತ್ಯವನ್ನು ಕಿಮ್ ಪ್ರತಿಪಾದಿಸುತ್ತಾನೆ. ಬಹಳಷ್ಟು ಜನರು ಜೀವನದ ಅರ್ಥವೇನು ಎಂದು ಹುಡುಕುತ್ತಾ ಕಾಲ ಕಳೆಯುತ್ತಾರೆ. ಆದರೆ ಕಿಮ್ ಪ್ರಕಾರ, ಜೀವನಕ್ಕೆ ಯಾವುದೇ ಮೊದಲೇ ನಿರ್ಧರಿಸಿದ ಅರ್ಥವಿರುವುದಿಲ್ಲ. ನಾವು ಪ್ರತಿದಿನ ಮಾಡುವ ಕೆಲಸಗಳಲ್ಲಿ, ಸಂಬಂಧಗಳಲ್ಲಿ ಮತ್ತು ಅನುಭವಗಳಲ್ಲಿ ನಾವೇ ಅರ್ಥವನ್ನು ತುಂಬಬೇಕು. 'Meaning is not found; it is built' ಎನ್ನುವುದು ಈ ಪುಸ್ತಕದ ಸೂಕ್ಷ್ಮ ಒಳನೋಟ. ನಾವು ಮರೆಯಲು ಬಯಸುವ ಅಥವಾ ಬೇರೆಯವರನ್ನು ಮೆಚ್ಚಿಸಲು ಪ್ರಯತ್ನಿಸುವಾಗ ನಮ್ಮತನವನ್ನು ಕಳೆದುಕೊಳ್ಳುತ್ತೇವೆ. ಕಿಮ್ ಹೇಳುವಂತೆ, ನೀವು ಯಾರೆಂದು ಜಗತ್ತಿಗೆ ತೋರಿಸಲು ಭಯಪಡಬೇಡಿ. ನಿಮ್ಮ ಅಸಲಿ ವ್ಯಕ್ತಿತ್ವವನ್ನು (Authenticity) ಒಪ್ಪಿಕೊಂಡಾಗ ಮಾತ್ರ ನೀವು ನೆಮ್ಮದಿಯಿಂದ ಇರಲು ಸಾಧ್ಯ. ಸಂಬಂಧಗಳಲ್ಲಿ ನಾಟಕವಾಡುವುದಕ್ಕಿಂತ, ಸತ್ಯವಾಗಿರುವುದು ಹೆಚ್ಚು ಆರಾಮದಾಯಕ. 'ಪುರುಷತ್ವ' ಎಂದರೆ ಕೇವಲ ಸ್ನಾಯುಬಲ ಅಥವಾ ಕಠಿಣವಾಗಿರುವುದಲ್ಲ. ಭಾವನೆಗಳನ್ನು ವ್ಯಕ್ತಪಡಿಸುವುದು, ತಪ್ಪುಗಳನ್ನು ಒಪ್ಪಿಕೊಳ್ಳುವುದು ಮತ್ತು ಸಹಾನುಭೂತಿ ತೋರುವುದು ನಿಜವಾದ ಪುರುಷತ್ವದ ಲಕ್ಷಣ ಎಂದು ಕಿಮ್ ವಿವರಿಸುತ್ತಾನೆ. ಒಂದೇ ದಿನದಲ್ಲಿ ಜೀವನ ಬದಲಾಗುವುದಿಲ್ಲ. ಬದಲಿಗೆ ಪ್ರತಿದಿನದ ಸಣ್ಣ ಅಭ್ಯಾಸಗಳು– ಉದಾಹರಣೆಗೆ ಬೆಳಗ್ಗೆ ಎದ್ದ ಕೂಡಲೇ ಹಾಸಿಗೆ ಸರಿಪಡಿಸುವುದು ಅಥವಾ ಸ್ವಲ್ಪ ಸಮಯ ನಡೆಯುವುದು– ನಿಮ್ಮ ಮಿದುಳನ್ನು ಸಕಾರಾತ್ಮಕವಾಗಿ ರೂಪಿಸುತ್ತವೆ. ಶಿಸ್ತು ಎನ್ನುವುದು ನಿಮ್ಮನ್ನು ಬಂಧಿಸುವ ಸಂಕೋಲೆಯಲ್ಲ, ಬದಲಿಗೆ ಅದು ನಿಮಗೆ ಸ್ವಾತಂತ್ರ್ಯವನ್ನು ನೀಡುವ ಮಾರ್ಗ. 'ಸಂತೋಷ ಎನ್ನುವುದು ಒಂದು ಗುರಿಯಲ್ಲ, ಅದು ನಾವು ಬದುಕುವ ದಾರಿ' ಎಂದು ಕಿಮ್ ಹೇಳುತ್ತಾನೆ. ಈ ಪುಸ್ತಕವು ಮುಖ್ಯವಾಗಿ 'ನಾನು ಹೀಗೆಯೇ ಇರುವುದು' ಎಂಬ ಹಠವನ್ನು ಬಿಟ್ಟು, 'ನಾನು ಇನ್ನೂ ಉತ್ತಮವಾಗಬಲ್ಲೆ' ಎಂಬ ಆಶಾವಾದವನ್ನು ಮೂಡಿಸುತ್ತದೆ. ನೀವು ನಿಮ್ಮ ಜೀವನದ ನಾಯಕನಾಗಿ ಬದಲಾಗಲು ಬೇಕಾದ 'ರಫ್ ಅಂಡ್ ಟಫ್' ಪ್ರೋತ್ಸಾಹ ಈ ಕೃತಿಯಲ್ಲಿದೆ. ಕಿಮ್ ಸ್ವತಃ ಒಬ್ಬ 'ಆಂಗ್ರಿ ಥೆರಪಿಸ್ಟ್' ಆಗಿ ಗುರುತಿಸಿಕೊಂಡವ. ಅವನ ಪ್ರಕಾರ, ಕೋಪವು ಹೆಚ್ಚಾಗಿ ನಮ್ಮೊಳಗಿನ ಭಯ ಅಥವಾ ದುಃಖವನ್ನು ಮುಚ್ಚಿಡಲು ನಾವು ಧರಿಸುವ ಮುಖವಾಡ. ನಾವು ಯಾವಾಗ ಕೋಪಗೊಳ್ಳುತ್ತೇವೆಯೋ, ಆಗ ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕು. 'ನಾನು ಯಾವುದಕ್ಕೆ ಹೆದರುತ್ತಿದ್ದೇನೆ?' ಅಥವಾ 'ನನಗೆ ಎಲ್ಲಿ ನೋವಾಗಿದೆ?' ಈ ಆತ್ಮಾವಲೋಕನವು ನಮ್ಮನ್ನು ನಕಾರಾತ್ಮಕತೆಯಿಂದ ಹೊರತರುತ್ತದೆ. ನಾವು ನಮ್ಮ ಬಗ್ಗೆಯೇ ಒಂದು ಕಥೆಯನ್ನು ಕಟ್ಟಿಕೊಂಡಿರುತ್ತೇವೆ. 'ನಾನು ಯಾವಾಗಲೂ ವಿಫಲವಾಗುತ್ತೇನೆ' ಅಥವಾ 'ನನಗೆ ಅದೃಷ್ಟವಿಲ್ಲ' ಎಂಬ ಕಥೆಗಳು ನಮ್ಮನ್ನು ಕಟ್ಟಿಹಾಕುತ್ತವೆ. ಕಿಮ್ ಹೇಳುವಂತೆ, ಈ ಹಳೆಯ ಸ್ಕ್ರಿಪ್ಟ್ ಅನ್ನು ಹರಿದು ಹಾಕಿ ಹೊಸದನ್ನು ಬರೆಯುವ ಶಕ್ತಿ ನಮಗಿದೆ. ನಿಮ್ಮ ಭೂತಕಾಲವು ನಿಮ್ಮ ಭವಿಷ್ಯವನ್ನು ನಿರ್ಧರಿಸಬಾರದು. ನಾವು ಹೆಚ್ಚಾಗಿ ಕಳೆದ ಹೋದ ದಿನಗಳ ಬಗ್ಗೆ ಮರುಗುತ್ತಾ ಅಥವಾ ಬರಲಿರುವ ದಿನಗಳ ಬಗ್ಗೆ ಆತಂಕಪಡುತ್ತಾ ಬದುಕುತ್ತೇವೆ. ಈ ಪುಸ್ತಕವು 'ಈ ಕ್ಷಣ'ದಲ್ಲಿ ಬದುಕುವುದರ ಮಹತ್ವವನ್ನು ಒತ್ತಿ ಹೇಳುತ್ತದೆ. ನೀವು ಕಾಫಿ ಕುಡಿಯುತ್ತಿರಲಿ ಅಥವಾ ಗೆಳೆಯರೊಂದಿಗೆ ಮಾತನಾಡುತ್ತಿರಲಿ, ಆ ಕ್ಷಣದಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವುದು ನಿಮ್ಮ ಮಿದುಳಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ನಾವು ಕೇವಲ ನಮ್ಮ ಬಗ್ಗೆಯೇ ಯೋಚಿಸುತ್ತಿದ್ದರೆ ದುಃಖ ಹೆಚ್ಚಾಗುತ್ತದೆ. ಬೇರೆಯವರಿಗೆ ಸಹಾಯ ಮಾಡುವುದು ಅಥವಾ ಸಮಾಜದೊಂದಿಗೆ ಅರ್ಥಪೂರ್ಣವಾಗಿ ಬೆರೆಯುವುದು ನಮಗೆ ಒಂದು ದೊಡ್ಡ ಉದ್ದೇಶವನ್ನು ನೀಡುತ್ತದೆ. 'ನನಗೇನು ಸಿಗುತ್ತದೆ?' ಎಂಬ ಯೋಚನೆಗಿಂತ 'ನಾನು ಏನು ನೀಡಬಲ್ಲೆ?' ಎಂಬ ಬದಲಾವಣೆ ನಿಮ್ಮ ವ್ಯಕ್ತಿತ್ವವನ್ನು ಶ್ರೀಮಂತಗೊಳಿಸುತ್ತದೆ. ವೈಫಲ್ಯ ಎನ್ನುವುದು ಅಂತ್ಯವಲ್ಲ, ಅದು ಒಂದು ಮಾಹಿತಿ. ನೀವು ಯಾವುದೋ ಕೆಲಸದಲ್ಲಿ ಸೋತರೆ, ಅದರರ್ಥ ನೀವು ಆ ಕೆಲಸಕ್ಕೆ ಲಾಯಕ್ಕಲ್ಲ ಎಂದಲ್ಲ. ಬದಲಿಗೆ ಆ ದಾರಿ ನಿಮಗೆ ಸರಿ ಹೊಂದುತ್ತಿಲ್ಲ ಎಂದರ್ಥ.

ಹೋರಾಟದ ಹಾದಿಯಲ್ಲೇ ಬಂದ ಡಿಕೆ ಮುಂದಿದೆ ಸವಾಲು

2023ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರೊಂದಿಗೆ ಜೋಡೆತ್ತಾಗಿ ಚುನಾವಣೆಗೆ ಶ್ರಮಿಸಿದ್ದ ಡಿ.ಕೆ. ಶಿವಕುಮಾರ್ ಅವರಿಗೆ ಮುಂದಿನ ವಿಧಾನಸಭಾ ಚುನಾವಣೆಗೆ ಸಿದ್ದರಾಮಯ್ಯ ಅವರು 'ಹೆಗಲು' ಕೊಡಬಹುದು. ಆದರೆ, ಹಿಂದಿನ ಚುನಾವಣೆಷ್ಟು ಭಾರವನ್ನು ಅವರೂ ಹೊರುವ ಸಾಧ್ಯತೆ ತೀರಾ ಕಡಿಮೆಯಿದೆ. ಇದರೊಂದಿಗೆ ಪಕ್ಷದಲ್ಲಿ ಮುಂದಿನ ದಿನದಲ್ಲಿ ಏಳಬಹುದಾದ ಆಂತರಿಕ ಕಲಹಗಳಿಗೆ ಆಸ್ಪದ ನೀಡದೇ, ಕಲಹ ಬಂದರೂ ಅದನ್ನು ನಿಭಾಯಿಸುವ ಬಹುದೊಡ್ಡ ಸವಾಲು ಮುಂದಿದೆ.

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

'ಒದ್ದು ಅಧಿಕಾರ ಕಿತ್ತುಕೊಳ್ಳಬೇಕು!' ಬೆಳಗಾವಿಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಅಂದಿನ ಉಪ ಮುಖ್ಯಮಂತ್ರಿ, ಇಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದ ಹೇಳಿಕೆ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಸಂತಾಪ ಸೂಚಿಸುವ ಸಮಯದಲ್ಲಿ ಆ ಮಾತನ್ನು ಹೇಳಿದ್ದರೂ, ಕರ್ನಾಟಕದಲ್ಲಿ ಕಳೆದ ಆರು ತಿಂಗಳುಗಳಿಂದ ನಡೆಯುತ್ತಿದ್ದ ನಾಯಕತ್ವ ಬದಲಾವಣೆ ವಿಷಯ ಮುನ್ನಲೆಗೆ ಬಂದಾಗಲೆಲ್ಲ ಈ ಹೇಳಿಕೆಗೆ ಹತ್ತು ಹಲವು ರೀತಿಯ ವ್ಯಾಖ್ಯಾನಗಳು ಕೇಳಿಬರುತ್ತಿತ್ತು.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡುವರೆ ವರ್ಷ ತುಂಬಿದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್‌ನಲ್ಲಿ ಶುರುವಾದ ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟ ಪುನಾರಚನೆಯ ಹತ್ತು ಹಲವು ಥಿಯರಿಗಳಿಗೆ ಹೈಕಮಾಂಡ್ ಕಳೆದ ವಾರ ಕೊನೆಗೂ ಇತಿಶ್ರೀ ಹಾಡಿದೆ. ನಿರೀಕ್ಷೆಯಂತೆ ಡಿ.ಕೆ. ಶಿವಕುಮಾರ್ ಅವರ ಪಟ್ಟಾಭಿಷೇಕವೂ ನಡೆದಿದೆ. ಬುಧವಾರ ಅಧಿಕೃತವಾಗಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣವಚನವನ್ನೂ ಸ್ವೀಕರಿಸಲಿದ್ದಾರೆ. ಎಲ್ಲವೂ ಇಷ್ಟು ಸಲೀಸಾಗಿ ನಡೆಯುತ್ತದೆ ಎಂದು ಡಿ.ಕೆ. ಶಿವಕುಮಾರ್ ಹೋಗಲು ಪಕ್ಷದ ಹೈಕಮಾಂಡ್ ಸಹ ನಿರೀಕ್ಷೆ ಮಾಡಿರಲಿಲ್ಲ ಎನ್ನುವುದು ಬೇರೆ ಮಾತು.

ಕಾಲೇಜು ದಿನಗಳಿಂದಲೂ ಹೋರಾಟದ ಹಾದಿಯಲ್ಲಿಯೇ ಸಾಗಿ ಬಂದಿರುವ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಹುದ್ದೆಯನ್ನೂ ಹೋರಾಟ ಮಾಡಿಯೇ ಪಡೆದಿರುವುದು ಗೊತ್ತಿಲ್ಲದ ವಿಷಯವೇನಲ್ಲ, ಅದರಲ್ಲಿಯೂ ಅಹಿಂದ ನಾಯಕನಾಗಿ, ರಾಜ್ಯದ ಪ್ರತಿಕ್ಷೇತ್ರದಲ್ಲಿಯೂ ಕನಿಷ್ಠ ಐದತ್ತು ಸಾವಿರ ಮತಗಳನ್ನು ಆಚೀಚೆ ಮಾಡುವ ಸಾಮರ್ಥ್ಯವಿರುವ, ರಾಹುಲ್ ಗಾಂಧಿಯ ಕಣ್ಣಲ್ಲಿ ಬೆಸ್ಟ್ ಎನಿಸಿಕೊಂಡಿದ್ದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ, ಮುಖ್ಯಮಂತ್ರಿ ಸ್ಥಾನಕ್ಕೆ ಏರುವುದು ಸುಲಭದ್ದಾಗಿರಲಿಲ್ಲ. ಸಿದ್ದರಾಮಯ್ಯ ಅವರು ಕಳೆದ ಆರು ತಿಂಗಳಿನಿಂದಲೂ 'ಹೈಕಮಾಂಡ್ ಹೇಳಿದರೆ ಅಧಿಕಾರ ತ್ಯಾಗಕ್ಕೆ ಸಿದ್ಧ ಎನ್ನುವ ಮಾತನ್ನು ಹೇಳಿಕೊಂಡೇ ಬಂದಿದ್ದರಾದರೂ, ಅವರಿಗೆ ರಾಜೀನಾಮೆ ನೀಡಿ ಎಂದು ಹೇಳುವವರು ಯಾರು ಎನ್ನುವ ಪ್ರಶ್ನೆಗೆ ಹೈಕಮಾಂಡ್ ಬಳಿ ಉತ್ತರವಿರಲಿಲ್ಲ. ಹಾಗೆಂದ ಮಾತ್ರಕ್ಕೆ ಸಿದ್ದರಾಮಯ್ಯ ಅವರನ್ನೆ ಎರಡು ವರ್ಷ ಮುಂದುವರೆಸಲು ಸಾಧ್ಯವೇ ಎನ್ನುವ ಪ್ರಶ್ನೆಗೂ ಹೈಕಮಾಂಡ್ ಬಳಿ ಉತ್ತರವಿರಲಿಲ್ಲ. ಈ ಇಕ್ಕಟ್ಟಿನ ಪರಿಸ್ಥಿತಿಯ ನಡುವೆಯೂ ಡಿ.ಕೆ. ಶಿವಕುಮಾರ್ ತಮ್ಮ ಪ್ರಯತ್ನವನ್ನು ಮುಂದುವರಿಸಿಯೇ ಇದ್ದರೂ. 'ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗಲ್ಲ' ಎನ್ನುವ ಅಚಲ ವಿಶ್ವಾಸದಲ್ಲಿಯೇ ಇದ್ದ ಡಿ.ಕೆ. ಶಿವಕುಮಾರ್ ತಾವು ನಂಬುವ ದೇವರ ಬಳಿ ಮಾತ್ರವಲ್ಲದೇ 'ಎಐಸಿಸಿ ಕಚೇರಿ ಎಂಬ ದೇವರ' ಮುಂದೆಯೂ ತಮ್ಮ ಪ್ರಾರ್ಥನೆಯನ್ನು ನಿರಂತರವಾಗಿ ಸಲ್ಲಿಸುತ್ತಲೇ ಬಂದರು.

ಈ ಎಲ್ಲದರ ಫಲವಾಗಿ ಡಿ.ಕೆ. ಶಿವಕುಮಾರ್ ಕರ್ನಾಟಕದ 21ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ವೇದಿಕೆ ಸಿದ್ಧವಾಗಿದೆ. ರಾಜಕೀಯ ವಿಶ್ಲೇಷಕರು ಎಣಿಸಿದಂತೆ, ಕಾಂಗ್ರೆಸ್ ಹೈಕಮಾಂಡ್ ಆತಂಕಪಟ್ಟಂತೆ ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದೇ ಸಿದ್ದರಾಮಯ್ಯ ಅವರು 'ಗೌರವಯುತ'ವಾಗಿಯೇ ತಮ್ಮ ಸ್ಥಾನದಿಂದ ಕೆಳಗೆ ಇಳಿದಿದ್ದಾರೆ. ರಾಜೀನಾಮೆ ಬಳಿಕವೂ, ಸಹಿ ಸಂಗ್ರಹ, ಪ್ರತಿಭಟನೆ, ಪತ್ರ ಚಳವಳಿಗೆ ಅವಕಾಶ ನೀಡದೇ ಎಲ್ಲವನ್ನೂ ಸುಸೂತ್ರವಾಗಿ ನಿಭಾಯಿಸಿದ್ದಾರೆ. ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಡಿ.ಕೆ. ಶಿವಕುಮಾರ್ ಹೆಸರನ್ನು ತಾವೇ ಪ್ರಸ್ತಾಪಿಸುವ ಮೂಲಕ, ಯಾವುದೇ ರೀತಿಯ ವಿರೋಧಕ್ಕೆ ಅವಕಾಶ ನೀಡದೇ, ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಸದ್ಯಕ್ಕಂತೂ ಸುಸೂತ್ರವಾಗಿ ಮುಗಿಸಿಕೊಟ್ಟಿದ್ದಾರೆ.

ಮುಖ್ಯಮಂತ್ರಿ ಹಸ್ತಾಂತರ ವಿಷಯದಲ್ಲಿ ಎಲ್ಲವೂ ಸುಸೂತ್ರವಾಗಿ ಮುಗಿದಿರುವುದು ಡಿ.ಕೆ. ಶಿವಕುಮಾರ್ ಅವರಿಗೆ ಒಂದು ಹಂತಕ್ಕೆ ಸಮಾಧಾನ ತಂದಿದೆ. ಈ ಹಿಂದೆ ಸಂಘಟನೆಯೇ ನೆಲಕಚ್ಚಿದ ಸಮಯದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಹುದ್ದೆಯನ್ನು ಪಡೆದು ಮೇಡಂ ಸೋನಿಯಾ ಗಾಂಧಿ ಅವರಿಗೆ ಕೊಟ್ಟಿದ್ದ 'ಭರವಸೆ'ಯಂತೆ 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ, ಸೊರಗಿದ್ದ ಸಂಘಟನೆಗೆ ಜೀವ ತುಂಬಿದ, ದೇಶಾದ್ಯಂತ ನಡೆದ ಭಾರತ್ ಜೋಡೋ ಯಾತ್ರೆ ಕರ್ನಾಟಕ, ತೆಲಂಗಾಣದಲ್ಲಿ ಯಶಸ್ವಿಯಾಗುವಂತೆ ನೋಡಿಕೊಂಡ, ಮೇಕೆದಾಟು ಪಾದಯಾತ್ರೆ ಮೂಲಕ ಹಳೇ ಮೈಸೂರು ಭಾಗದಲ್ಲಿ ಪಕ್ಷವನ್ನು ಸಂಘಟಿಸುವ ಮೂಲಕ ಎದುರಾದ ಸವಾಲುಗಳನ್ನು ಎಲ್ಲ ಯಶಸ್ವಿಯಾಗಿದ್ದಾರೆ. ಜತೆ ಇದೀಗ ಮುಖ್ಯಮಂತ್ರಿಯಾಗಬೇಕೆಂಬ ಕನಸನ್ನು ನನಸು ಮಾಡಿಕೊಂಡಿದ್ದಾರೆ.

ಮೊದಲ ಹಂತದ ಸವಾಲನ್ನು ಗೆದ್ದಿರುವ ಡಿ.ಕೆ. ಶಿವಕುಮಾರ್ ಅವರಿಗೆ ಇದೀಗ ಎರಡನೇ ಹಂತದ ಸವಾಲು ಸಜ್ಜಾಗಿದೆ. ಆರಂಭಿಕ ದಿನದಲ್ಲಿ ಯಾರೇ ಮುಖ್ಯಮಂತ್ರಿಯಾದರೂ ಎದುರಾಗುವ ಸಚಿವ ಸಂಪುಟ ರಚನೆ, ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿಯ ಗೊಂದಲ, ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಬೇಡಿಕೆ, ಸಚಿವ ಸ್ಥಾನ ಭರ್ತಿಯಾಗದ ಬಳಿಕ ಖಾತೆಗಳ ಹಂಚಿಕೆ ಸೇರಿದಂತೆ ಹತ್ತು ಹಲವು ಸವಾಲುಗಳು ಡಿ.ಕೆ. ಶಿವಕುಮಾರ್ ಅವರಿಗೂ ಎದುರಾಗುವುದು ನಿಶ್ಚಿತ. ಮೇಲ್ನೋಟಕ್ಕೆ ಈ ಎಲ್ಲವೂ, ಸವಾಲುಗಳೆನಿಸಿದರೂ ರಾಜಕೀಯದ ಒಂದು ಭಾಗ. ಆದರೆ, ಇದನ್ನು ಮೀರಿದ ಸವಾಲು ಅಧಿಕಾರ ಸ್ವೀಕರಿಸಿದ ಕೆಲ ತಿಂಗಳಲ್ಲಿ ಎದುರಾಗಬಹುದು. ಈ ಸವಾಲುಗಳ ಬಗ್ಗೆ ಸ್ವತಃ ಡಿಕೆಶಿಗೂ ಅರಿವಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನೂರು ದಿನ ಕಳೆಯುವುದರೊಂದಿಗೆ ಡಿ.ಕೆ. ಶಿವಕುಮಾರ್ ಅವರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಗಳು ಎದುರಾಗುತ್ತದೆ. ಡಿ.ಕೆ. ಶಿವಕುಮಾರ್ ಅವರೇ ಕೆಪಿಸಿಸಿ ಅಧ್ಯಕ್ಷರಾಗಿ, ಉಪಮುಖ್ಯಮಂತ್ರಿಯಾಗಿ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿದ್ದರಿಂದ ಸಿಎಂ ಸ್ಥಾನಕ್ಕೆ ಹೋದರೂ ಈ ಚುನಾವಣೆಯ ಸೋಲು–ಗೆಲುವಿನ ಫಲ ಡಿಕೆಶಿ ಅವರಿಗೆ ಸಿಗಲಿದೆ. ಪಂಚ ನಗರಪಾಲಿಕೆಯೊಂದಿಗೆ ಜಿಬಿಎ ಚುನಾವಣೆಗೆ ಹೋದರೆ ಕಾಂಗ್ರೆಸ್‌ಗೆ ಗೆಲುವುದು ಸುಲಭಕ್ಕೆ ದಕ್ಕುವುದಿಲ್ಲ ಎನ್ನುವ ಮಾತನ್ನು ಸ್ವತಃ ಬೆಂಗಳೂರಿನ ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ. ಈ ಆತಂಕದಿಂದಲೇ ಒಂದಿಲ್ಲೊಂದು ಕಾರಣ ನೀಡಿ ಜಿಬಿಎ ಚುನಾವಣೆಯನ್ನು ವರ್ಷಗಳಿಂದ ಮುಂದೂಡಿಕೊಂಡು ಬರಲಾಗಿದೆ. ಆದರೀಗ ಆಗಸ್ಟ್ ಅಂತ್ಯದೊಳಗೆ ಚುನಾವಣೆ ಪ್ರಕ್ರಿಯೆ ಮುಗಿಸಲೇಬೇಕು ಎನ್ನುವ ಸ್ಪಷ್ಟ ಆದೇಶವನ್ನು ಸುಪ್ರೀಂ ಕೋರ್ಟ್ ನೀಡಿರುವುದರಿಂದ ಚುನಾವಣೆ ಅನಿವಾರ್ಯವಾಗಿದೆ. ಈಗಲೂ ಮತ್ತೊಂದು ಕಾರಣ ನೀಡಿ ಮುಂದೂಡುವ ಉತ್ಸಾಹದಲ್ಲಿ ಕಾಂಗ್ರೆಸ್ ಇದ್ದರೂ ಸುಪ್ರೀಂ ಕೋರ್ಟ್ ಒಪ್ಪುವ ಸಾಧ್ಯತೆ ಕಡಿಮೆ ಇರುವುದರಿಂದ ಚುನಾವಣೆಗೆ ಸಜ್ಜಾಗುತ್ತಿದ್ದಾರೆ.

ಗುಪ್ತಚರ ಇಲಾಖೆಯ ಮಾಹಿತಿಯ ಪ್ರಕಾರವೂ, ಸದ್ಯ ಜಿಬಿಎ ಚುನಾವಣೆ ನಡೆದರೂ ಕಾಂಗ್ರೆಸ್‌ಗೆ ಹಿನ್ನಡೆಯಾಗುವ ಸಾಧ್ಯತೆಯಿದೆ. ಐದು ಪಾಲಿಕೆಗಳಲ್ಲಿ ಕನಿಷ್ಠ ಮೂರರಲ್ಲಿ ಬಿಜೆಪಿ ಮೇಲುಗೈ ಸಾಧಿಸಲಿದೆ ಎನ್ನುವ ಮಾತಿದೆ. ಅಧಿಕಾರಕ್ಕೆ ಬಂದು ನೂರು ದಿನ ತುಂಬುವುದರೊಳಗೆ ಚುನಾವಣೆಗೆ ಹೋದರೆ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಹಾಗೆಂದು, ಈ ಚುನಾವಣೆಯಲ್ಲಿ ಹಿನ್ನಡೆಯಾದರೆ ಅಧಿಕಾರ ತೆಗೆದುಕೊಂಡ ಮೊದಲ ಚುನಾವಣೆಯಲ್ಲಿಯೇ ಹಿನ್ನಡೆ ಎನ್ನುವ ಕಪ್ಪುಚುಕ್ಕಿ ಅಂಟಿಸುವುದಕ್ಕೆ ನೂರಾರು ಮಂದಿ ಕಾಂಗ್ರೆಸಿಗರೇ ಕಾಯುತ್ತಿದ್ದಾರೆ. ಇನ್ನು ಜಿಬಿಎ ಚುನಾವಣೆ ಒಂದೆಡೆಯಾದರೆ ಇದಾದ ಬಳಿಕ ಎದುರಾಗುವ ಜಿಲ್ಲಾ, ಗ್ರಾಮ, ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ ಚುನಾವಣೆಗಳು ಎದುರಾಗಲಿವೆ. ಈ ಚುನಾವಣೆಗಳು ತಳಮಟ್ಟದಲ್ಲಿ ಮತದಾರರ ಅಭಿಪ್ರಾಯಗಳೇನಿವೆ ಎನ್ನುವುದನ್ನು ಎತ್ತಿ ಹಿಡಿಯುತ್ತವೆ. ಗ್ಯಾರಂಟಿ ಯೋಜನೆಗಳ ಕಾರಣಕ್ಕೆ ಮೂಲಸೌಕರ್ಯ, ಇತರೆ ಅಭಿವೃದ್ಧಿ ಯೋಜನೆಗಳಿಗೆ ನಿರೀಕ್ಷೆ ಮಾಡಿದಷ್ಟು ಅನುದಾನ ಸಿಗದೇ ಇರುವುದರಿಂದ ಸಹಜವಾಗಿಯೇ ಗ್ರಾಮೀಣ ಭಾಗದಲ್ಲಿ 'ಆಡಳಿತ ವಿರೋಧಿ ಅಲೆಯಿದೆ'. ದಾವಣಗೆರೆ, ಬಾಗಲಕೋಟೆ ಉಪಚುನಾವಣೆಯ ಗೆಲುವನ್ನು ಕಾಂಗ್ರೆಸಿಗರು ಜನಾಭಿಪ್ರಾಯ ಪಕ್ಷದ ಪರವಾಗಿದೆ ಎಂದು ಹೇಳುತ್ತಿದ್ದರೂ, ಉಪಚುನಾವಣೆಗಳಿಗೂ ಇತರೆ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೂ ಅಜಗಜಾಂತರವಿದೆ ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಈ ಸವಾಲುಗಳನ್ನು ಡಿಕೆ ಯಾವ ರೀತಿ ನಿಭಾಯಿಸಲಿದ್ದಾರೆ ಎನ್ನುವ ಕುತೂಹಲ ರಾಜಕೀಯ ವಲಯದಲ್ಲಿದೆ.

ಇನ್ನು ಕರ್ನಾಟಕದಲ್ಲಿ ಯಾವುದೇ ಮಾಸ್ ಲೀಡರ್ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ಬರುವ ಅಧಿಕಾರಕ್ಕೆ ಬರುವ ನಾಯಕನಿಗೆ ಸಹಜವಾದ ಸವಾಲು ನೋಡಿದ್ದೇವೆ. ಈ ಹಿಂದೆ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್ ಅವರಿಂದ ಮುಖ್ಯಮಂತ್ರಿ ಸ್ಥಾನ ತೆರವಾದ ಬಳಿಕ ನಡೆದಿರುವ ಗೊಂದಲ, ಗೋಜಲುಗಳು, ಪಕ್ಷದ ಶುರುವಾಗುವ ಆಂತರಿಕ ಕಿತ್ತಾಟಗಳಿಗೆ ಕರ್ನಾಟಕ ಸಾಕ್ಷಿಯಾಗಿದೆ. ಕಳೆದ ಸರಕಾರವನ್ನೇ ಗಮನಿಸಿದಾಗ, ಯಡಿಯೂರಪ್ಪ ಅವರು ರಾಜೀನಾಮೆ ನೀಡಿ ಬಸವರಾಜ ಬೊಮ್ಮಾಯಿ ಅವರಿಗೆ ಪಟ್ಟಕಟ್ಟಿದಾಗ ಬೊಮ್ಮಾಯಿ ಅವರು ಎದುರಿಸಿದ 'ಮಾಸ್ ನಾಯಕತ್ವ'ದ ಸಮಸ್ಯೆ ಈಗ ಡಿ.ಕೆ. ಶಿವಕುಮಾರ್ ಅವರಿಗೂ ಎದುರಾಗಬಹುದೇ ಎನ್ನುವ ಪ್ರಶ್ನೆಯಿದೆ. ಹಾಗೇ ನೋಡಿದರೆ, ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಡಿ.ಕೆ. ಶಿವಕುಮಾರ್ ತಮ್ಮ ಬಾಹುಳ್ಯವನ್ನು ರಾಜ್ಯಾದ್ಯಂತ ವಿಸ್ತರಿಸಿಕೊಂಡಿದ್ದರೂ, 'ಮತಗಳಾಗಿ' ಎಷ್ಟು ಪರಿವರ್ತನೆಯಾಗಿದೆ ಎನ್ನುವುದು ಈಗಲೂ ಪ್ರಶ್ನಾತೀತ. ಏಕೆಂದರೆ, ರಾಜ್ಯದಲ್ಲಿ ಮಾಸ್ ನಾಯಕರಾಗಿ ಗುರುತಿಸಿಕೊಂಡಿರುವ ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ ಅವರ ಬಳಿಕ ಮುಂದಿನ ನಾಯಕತ್ವ ಹೇಗೆ ಎನ್ನುವ ಪ್ರಶ್ನೆ ಈಗಲೂ ಅನೇಕರಲ್ಲಿದೆ. ಡಿ.ಕೆ. ಶಿವಕುಮಾರ್ ಅದ್ಭುತ ಸಂಘಟಕ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ, ಮಾಸ್ ಲೀಡರ್ ಆಗಿಯೂ ಮುಂದಿನ ಎರಡು ವರ್ಷದಲ್ಲಿ 'ಹೊರಹೊಮ್ಮುವರೇ' ಎನ್ನುವುದಕ್ಕೆ ಅವರೇ ಉತ್ತರಿಸಬೇಕಿದೆ.

ಇದರೊಂದಿಗೆ ಡಿ.ಕೆ. ಶಿವಕುಮಾರ್ ಅವರಿಗೆ ಎದುರಾಗಬಹುದಾದ ಮತ್ತೊಂದು ಸವಾಲು ಎಂದರೆ ಅಹಿಂದ ಮತಗಳನ್ನು ಪಕ್ಷದಿಂದ ಹೋಗದಂತೆ ನೋಡಿಕೊಳ್ಳುವುದಾಗಿದೆ. ಸಿದ್ದರಾಮಯ್ಯ ಅವರ ಕಾರಣಕ್ಕೆ ಕಾಂಗ್ರೆಸ್‌ನೊಂದಿಗೆ ಅಹಿಂದ ಮತಗಳು ಗಟ್ಟಿಯಾಗಿ ನಿಂತಿದ್ದವು. ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಸಕ್ರಿಯ ಪ್ರಚಾರದಲ್ಲಿ ಭಾಗವಹಿಸುವುದಾಗಿ ಹೇಳಿದ್ದರೂ, ಅವರು ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲ ಎಂದಾಗ ಅಷ್ಟೇ ಗಟ್ಟಿ ಈ ಮತಗಳು ಉಳಿಯಲಿದೆಯೇ ಎನ್ನುವ ಅನುಮಾನವಿದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಪರ್ಯಾಯ ಪಕ್ಷವಿಲ್ಲದೇ ಇರುವುದರಿಂದ ಅನಿವಾರ್ಯವಾಗಿ ಕಾಂಗ್ರೆಸ್‌ನೊಂದಿಗೇ ಹೋಗಬಹುದು. ಆದರೆ, ದಲಿತ ಹಾಗೂ ಒಬಿಸಿ ಮತದಾರರಿಗೆ ಪರ್ಯಾಯವಾಗಿ ಬಿಜೆಪಿ, ಜೆಡಿಎಸ್ ಕಾಣಿಸಿಕೊಳ್ಳುತ್ತಿದೆ. ಆ ಕಡೆ ಜಂಪ್ ಆದರೆ ಬಹುದೊಡ್ಡ ಮತಬ್ಯಾಂಕ್‌ಗೆ ಹೊಡೆತ ಬೀಳುವ ಸಾಧ್ಯತೆಯಿದೆ. ಇದನ್ನು ನಿಭಾಯಿಸುವುದು ಹೇಗೆ ಎನ್ನುವುದಕ್ಕೆ ಅಂದಿನ ಪರಿಸ್ಥಿತಿಯೇ ಉತ್ತರಿಸಬೇಕಿದೆ.

ಈ ಎಲ್ಲ ರಾಜಕೀಯ ಸವಾಲುಗಳನ್ನು ಮೀರಿ ಡಿ.ಕೆ. ಶಿವಕುಮಾರ್ ಅವರಿಗೆ ಎದುರಾಗುಬಹುದಾದ ಬಹುದೊಡ್ಡ ಸವಾಲು ಎಂದರೆ ಆಡಳಿತಾತ್ಮಕ ವಿಷಯ. ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವ ಒಂದು ದಿನದ ಮೊದಲು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಜಾತಿಗಣತಿ ವರದಿಯನ್ನು ಸ್ವೀಕರಿಸಿದ್ದಾರೆ. ಈ ವರದಿಯನ್ನು ಈ ಹಿಂದೆ ಡಿ.ಕೆ. ಶಿವಕುಮಾರ್ ಸೇರಿದಂತೆ ಮೇಲ್ವರ್ಗದ ಬಹುತೇಕ ಸಚಿವರು ವಿರೋಧಿಸಿದ್ದರು. ಆದರೆ, ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರಿಗೆ ಈ ವರದಿಯನ್ನು ಜಾರಿಗೊಳಿಸುವಲ್ಲಿ ವಿಶೇಷ ಆಸಕ್ತಿಯಿದೆ. ಸಿದ್ದರಾಮಯ್ಯ ಅವರು ವರದಿಯನ್ನು ಸ್ವೀಕರಿಸಿರುವುದರಿಂದ ಮುಂದಿನ ಸರಕಾರದ ಮುಂದೆ ಸಹಜವಾಗಿಯೇ ಈ ವರದಿ ಬರಲಿದೆ. ಕಾಂತರಾಜು ವರದಿಗೂ, ಜಯಪ್ರಕಾಶ್ ಹೆಗ್ಡೆ ಸಲ್ಲಿಸಿದ್ದ ಪರಿಷ್ಕೃತ ವರದಿ ಹಾಗೂ ಹೊಸದಾಗಿ ಮಾಡಿರುವ ಮಧುಸೂದನ್ ನಾಯಕ್ ಅವರ ವರದಿ ಬಹುದೊಡ್ಡ ವ್ಯತ್ಯಾಸವೇನಿಲ್ಲ. ಈ ವರದಿಯಲ್ಲಿ ಮುಸ್ಲಿಂ, ದಲಿತ ಸಮುದಾಯಗಳೇ ನಿರ್ಣಾಯಕವಾಗಲಿದೆ. ಆದ್ದರಿಂದ ಈ ವರದಿಯನ್ನು ಡಿ.ಕೆ. ಶಿವಕುಮಾರ್ ಒಪ್ಪಿಕೊಂಡರೆ ಒಕ್ಕಲಿಗರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಒಂದು ವೇಳೆ ವರದಿಯನ್ನು ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಮುಂದಿನ ಸರಕಾರ ಸಾಗಿಸಲು ಪ್ರಯತ್ನಿಸಿದರೆ ಪಕ್ಷದ ಹೈಕಮಾಂಡ್ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಎರಡು ಅಲಗೆಯ ಕತ್ತಿಯಾಗಿರುವ ಈ ವರದಿಯ ತೀರ್ಮಾನವನ್ನು ಯಾವ ರೀತಿ ಕೈಗೊಳ್ಳುತ್ತಾರೆ ಎನ್ನುವುದು ಹಲವರ ಕುತೂಹಲ.

ಈ ಸವಾಲುಗಳೊಂದಿಗೆ ಎರಡು ವರ್ಷದಲ್ಲಿ ಚುನಾವಣೆ ಎದುರಾಗಲಿರುವುದರಿಂದ 2027ರ ಬಜೆಟ್‌ನಲ್ಲಿಯೇ ಸಾಧ್ಯವಾದಷ್ಟು ಅಭಿವೃದ್ಧಿ ಪರ ಘೋಷಣೆಗಳನ್ನು ಮಾಡಬೇಕಿದೆ. 2028ರ ಬಜೆಟ್ ಚುನಾವಣೆಗೂ ಮುನ್ನಾ ನಡೆಯುವ 'ಫ್ಯಾನ್ಸಿ ಬಜೆಟ್' ಆಗಿರಲಿದೆ. ಅಂದರೆ ಡಿ.ಕೆ. ಶಿವಕುಮಾರ್ ಅವರಿಗೆ ತಮ್ಮ ಅಭಿವೃದ್ಧಿ ಪರ ಚಿಂತನೆಗಳನ್ನು ತಿಳಿಸಲು ಸಿಗುವುದು ಮುಂದಿನ ವರ್ಷದ ಬಜೆಟ್ ಮಾತ್ರ. ಗ್ಯಾರಂಟಿ ಯೋಜನೆ, ಬದ್ಧತಾ ವೆಚ್ಚಕ್ಕಾಗಿಯೇ ಶೇ.65ಕ್ಕಿಂತ ಹೆಚ್ಚು ಅನುದಾನ ಹೋಗುತ್ತಿದೆ. ಮುಂದಿನ ದಿನದಲ್ಲಿ ಸರಕಾರಿ ನೌಕರರ ವೇತನ ಹೆಚ್ಚಳ, ಒಪಿಎಸ್ ಜಾರಿ ಸೇರಿದಂತೆ ಹಲವು ಹೆಚ್ಚುವರಿ ಹೊರೆಗಳು ಸೇರ್ಪಡೆಯಾಗುವ ಸಾಧ್ಯತೆಯಿದೆ. ಈ ಎಲ್ಲ ಸವಾಲುಗಳನ್ನು ಮೀರಿ ಉತ್ತಮ ಬಜೆಟ್ ನೀಡಿ 2028ಕ್ಕೆ ಕಾಂಗ್ರೆಸ್ ಅನ್ನು ಪುನಃ ಅಧಿಕಾರಕ್ಕೆ ತರುವ ಹೊಣೆಯಿದೆ.

2023ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರೊಂದಿಗೆ ಜೋಡೆತ್ತಾಗಿ ಚುನಾವಣೆಗೆ ಶ್ರಮಿಸಿದ್ದ ಡಿ.ಕೆ. ಶಿವಕುಮಾರ್ ಅವರಿಗೆ ಮುಂದಿನ ವಿಧಾನಸಭಾ ಚುನಾವಣೆಗೆ ಸಿದ್ದರಾಮಯ್ಯ ಅವರು 'ಹೆಗಲು' ಕೊಡಬಹುದು. ಆದರೆ, ಹಿಂದಿನ ಚುನಾವಣೆಷ್ಟು ಭಾರವನ್ನು ಅವರೂ ಹೊರುವ ಸಾಧ್ಯತೆ ತೀರಾ ಕಡಿಮೆಯಿದೆ. ಇದರೊಂದಿಗೆ ಪಕ್ಷದಲ್ಲಿ ಮುಂದಿನ ದಿನದಲ್ಲಿ ಏಳಬಹುದಾದ ಆಂತರಿಕ ಕಲಹಗಳಿಗೆ ಆಸ್ಪದ ನೀಡದೇ, ಕಲಹ ಬಂದರೂ ಅದನ್ನು ನಿಭಾಯಿಸುವ ಬಹುದೊಡ್ಡ ಸವಾಲು ಡಿ.ಕೆ. ಶಿವಕುಮಾರ್ ಅವರ ಮುಂದಿದೆ. ಈ ಎಲ್ಲ ಸವಾಲುಗಳಿಗೆ 'ಬಂಡೆ'ಯಾಗಿ ನಿಂತು ರಾಜ್ಯಭಾರ ಹೇಗೆ ನಡೆಸಲಿದ್ದಾರೆ ಎನ್ನುವುದೇ ಈಗಿರುವ ಕುತೂಹಲ.

ಒಮಾನ್ ಜತೆ ಹೊಸ ಒಪ್ಪಂದ: ಕೊಲ್ಲಿಯ ಮಹಾದ್ವಾರ

ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವ ಮೋದಿ ಸರಕಾರದ ಉಪಕ್ರಮಗಳು ಪ್ರತಿಯೊಬ್ಬ ಭಾರತೀಯನ ಜೀವನವನ್ನು ಸುಧಾರಿಸುವ ಪ್ರಧಾನಿಯವರ ಘನ ಉದ್ದೇಶದ ಭಾಗವಾಗಿದೆ. 7 ಲಕ್ಷ ಭಾರತೀಯರಿಗೆ ನೆಲೆಯಾಗಿರುವ ಒಮಾನ್ ಜೊತೆಗೆ ಭಾರತವು ಆಳವಾದ ಆರ್ಥಿಕ ಹಾಗೂ ಜನತಾ ಸಂಪರ್ಕವನ್ನು ಹೊಂದಿದೆ.

ವಿಶ್ವವ್ಯಾಪಾರ
ಪಿಯೂಷ್ ಗೋಯಲ್
vveditoped@gmail.com

ಜೂನ್ 1ರಿಂದ ಜಾರಿಗೆ ಬರುವ ಭಾರತ–ಒಮಾನ್ ಮುಕ್ತ ವ್ಯಾಪಾರ ಒಪ್ಪಂದವು ಭಾರತದ ವಿದ್ಯಾರ್ಥಿಗಳು, ಕುಶಲಕರ್ಮಿಗಳು, ಮಹಿಳೆಯರು, ರೈತರು, ಮೀನುಗಾರರು ಮತ್ತು ಎಂಎಸ್‌ಎಂಇಗಳಿಗೆ (ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು) ಜಾಗತಿಕ ಸಮೃದ್ಧಿಯ ಹಾದಿಗಳನ್ನು ಸೃಷ್ಟಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಇದು ಹೊಸ ಮಾರುಕಟ್ಟೆಗಳನ್ನು ತೆರೆಯುವ ಮೂಲಕ ಮತ್ತು ಉದ್ಯೋಗ ಸೃಷ್ಟಿಯನ್ನು ವೇಗಗೊಳಿಸುವ ಮೂಲಕ ನೆರವಾಗಲಿದೆ.

200–300 ವರ್ಷಗಳಷ್ಟು ಹಳೆಯದಾದ ವ್ಯಾಪಾರಿ ಕುಟುಂಬಗಳು ಸೇರಿದಂತೆ ಸುಮಾರು 7 ಲಕ್ಷ ಭಾರತೀಯರಿಗೆ ನೆಲೆಯಾಗಿರುವ ಒಮಾನ್ ಜೊತೆಗೆ ಭಾರತವು ಆಳವಾದ ಆರ್ಥಿಕ ಹಾಗೂ ಜನತಾ ಸಂಪರ್ಕವನ್ನು ಹೊಂದಿದೆ. ಒಮಾನ್‌ನಿಂದ ಭಾರತೀಯರು ವಾರ್ಷಿಕವಾಗಿ ಸುಮಾರು 2 ಶತಕೋಟಿ ಡಾಲರ್ ಹಣವನ್ನು ಭಾರತಕ್ಕೆ ರವಾನಿಸುತ್ತಾರೆ. ಇದೇ ವೇಳೆ, 6,000ಕ್ಕೂ ಹೆಚ್ಚು ಭಾರತೀಯ ಉದ್ಯಮಗಳು ಅಲ್ಲಿ ಕಾರ್ಯನಿರ್ವಹಿಸುತ್ತಿವೆ.

ಉಭಯ ದೇಶಗಳ ನಡುವಿನ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವು (ಸಿಇಪಿಎ) ಆರ್ಥಿಕ ಮತ್ತು ಕಾರ್ಯತಂತ್ರದ ಬಾಂಧವ್ಯವನ್ನು ಗಣನೀಯವಾಗಿ ಬಲಪಡಿಸುತ್ತದೆ. ಇದು ಒಮಾನ್‌ನಲ್ಲಿ ಶೇಕಡಾ 98ರಷ್ಟು ಆಮದು ಸುಂಕದ ವರ್ಗಗಳಿಗೆ (ಟ್ಯಾರಿಫ್ ಲೈನ್) ತಕ್ಷಣದಿಂದಲೇ 100 ಪ್ರತಿಶತ ಸುಂಕ ರಹಿತ ಮಾರುಕಟ್ಟೆ ಪ್ರವೇಶವನ್ನು ನೀಡುತ್ತದೆ, ಇದು ಒಮಾನ್‌ಗೆ ಭಾರತದ ಒಟ್ಟು ರಫ್ತಿನಲ್ಲಿ ಶೇಕಡಾ 99.38ರಷ್ಟನ್ನು ಒಳಗೊಂಡಿದೆ.

'ಸಿಇಪಿಎ' ಪೂರ್ವ ವ್ಯವಸ್ಥೆಯಲ್ಲಿ ಭಾರತದ ರಫ್ತಿನ ಕೇವಲ ಶೇ. 15.3ರಷ್ಟನ್ನು ಮಾತ್ರ ಶೂನ್ಯ ಸುಂಕದಲ್ಲಿ ಮಾರುಕಟ್ಟೆ ಪ್ರವೇಶಿಸಲು ಒಮಾನ್ ಅನುಮತಿಸುತ್ತಿತ್ತು. ಅದಕ್ಕೆ ಹೋಲಿಸಿದರೆ 'ಸಿಇಪಿಎ' ಗಮನಾರ್ಹ ಸುಧಾರಣೆಯನ್ನು ಸೂಚಿಸುತ್ತದೆ. ಪ್ರಸ್ತುತ ಒಮಾನ್‌ನಲ್ಲಿ ಶೇಕಡಾ 5ರಷ್ಟು ಆಮದು ಸುಂಕವನ್ನು ಎದುರಿಸುತ್ತಿರುವ ಭಾರತದ ಸರಕುಗಳು, ಸುಮಾರು 3.64 ಶತಕೋಟಿ ಡಾಲರ್ ಮೌಲ್ಯದ ರಫ್ತುಗಳು ಹೆಚ್ಚು ಸ್ಪರ್ಧಾತ್ಮಕವಾಗಲಿವೆ.

ಭಾರತದ ಎಂಎಸ್‌ಎಂಇಗೆ ಈ ಒಪ್ಪಂದವು ಪರಿವರ್ತನಾತ್ಮಕವಾಗಬಹುದು. ಏಕೆಂದರೆ ಸಿಇಪಿಎಯಿಂದ ಲಾಭ ಪಡೆಯುವ ಅನೇಕ ವಲಯಗಳಲ್ಲಿ ಸಣ್ಣ ಉದ್ಯಮಗಳ ಪ್ರಾಬಲ್ಯ ಹೆಚ್ಚಾಗಿದೆ. ಎಂಎಸ್‌ಎಂಇಗಳು ದೊಡ್ಡ ಅಂತರರಾಷ್ಟ್ರೀಯ ಕಾರ್ಯಾದೇಶಗಳನ್ನು ಪಡೆಯುವ ನಿರೀಕ್ಷೆಯಿರುವ ಕೆಲವು ಪ್ರಮುಖ ವಲಯಗಳಲ್ಲಿ ಕಬ್ಬಿಣ ಮತ್ತು ಉಕ್ಕು, ಜವಳಿ, ಚರ್ಮ, ವಾಹನ ಬಿಡಿಭಾಗಗಳು ಮತ್ತು ಕೈಗಾರಿಕಾ ಉಪಕರಣಗಳ ವಲಯಗಳು ಸೇರಿವೆ. ಇದು ಉತ್ಪಾದನೆ, ಹೂಡಿಕೆ ಮತ್ತು ಉದ್ಯೋಗ ನೇಮಕಾತಿಯನ್ನು ಉತ್ತೇಜಿಸುತ್ತದೆ.

ಬೆಳೆಯುತ್ತಿರುವ ಜಾಗತಿಕ ಅಸ್ಥಿರತೆಯ ಯುಗದಲ್ಲಿ, ಸಿಇಪಿಎ ಭಾರತೀಯ ರಫ್ತುದಾರರಿಗೆ ಮಾರುಕಟ್ಟೆಗಳನ್ನು ವೈವಿಧ್ಯಗೊಳಿಸಲು ಮತ್ತು ಆರ್ಥಿಕ ಮಂದಗತಿ ಹಾಗೂ ಹೆಚ್ಚುತ್ತಿರುವ ವ್ಯಾಪಾರ ಅಡೆತಡೆಗಳನ್ನು ಎದುರಿಸುತ್ತಿರುವ ಸಾಂಪ್ರದಾಯಿಕ ದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಒಂದು ಮಹತ್ತರ ಅವಕಾಶವನ್ನು ನೀಡುತ್ತದೆ.

ಉದ್ಯೋಗ ಸೃಷ್ಟಿ – ವ್ಯಾಪಾರ ಒಪ್ಪಂದವು ಜವಳಿ ಮತ್ತು ಉಡುಪುಗಳು, ಚರ್ಮ ಮತ್ತು ಪಾದರಕ್ಷೆಗಳು, ಆಹಾರ ಸಂಸ್ಕರಣೆ, ಸಾಗರ ಉತ್ಪನ್ನಗಳು, ರತ್ನ ಮತ್ತು ಆಭರಣಗಳು ಹಾಗೂ ಆಯ್ದ ಎಂಜಿನಿಯರಿಂಗ್ ವಿಭಾಗಗಳಂತಹ ಅಧಿಕ ಕಾರ್ಮಿಕಶಕ್ತಿ ಬಳಕೆಯ ವಲಯಗಳಿಗೆ ಪ್ರಯೋಜನವನ್ನು ನೀಡುತ್ತದೆ.

ಒಮಾನ್‌ಗೆ ಜವಳಿ ರಫ್ತು ಹೆಚ್ಚಳವು, ಉತ್ಪಾದನೆಯನ್ನು ಹೆಚ್ಚಿಸುತ್ತದೆ ಮತ್ತು ತಿರುಪುರ, ಸೂರತ್, ಲೂಧಿಯಾನ, ಪಾಣಿಪತ್, ಕೊಯಮತ್ತೂರು, ಕರೂರ್, ಭದೋಹಿ, ಮೊರಾದಾಬಾದ್, ಜೈಪುರ ಮತ್ತು ಅಹಮದಾಬಾದ್‌ನಂತಹ ಪ್ರಮುಖ ಜವಳಿ ಕ್ಲಸ್ಟರ್‌ಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಭಾರತದಾದ್ಯಂತದ ಕುಶಲಕರ್ಮಿಗಳು ಮತ್ತು ನೇಕಾರರು ತಮ್ಮ ಉತ್ಪನ್ನಗಳಿಗೆ ಹೆಚ್ಚಿದ ಅಂತರರಾಷ್ಟ್ರೀಯ ಬೇಡಿಕೆಯಿಂದ ಲಾಭ ಪಡೆಯುತ್ತಾರೆ.

ಭಾರತದಾದ್ಯಂತದ ಪ್ರಮುಖ ಚರ್ಮ ಮತ್ತು ಪಾದರಕ್ಷೆಗಳ ಕೇಂದ್ರಗಳಲ್ಲಿ, ವಿಶೇಷವಾಗಿ ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರ, ಪಂಜಾಬ್, ಕರ್ನಾಟಕ ಮತ್ತು ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ ಹಲವಾರು ಉದ್ಯೋಗಗಳು ಸೃಷ್ಟಿಯಾಗಲಿವೆ.

ಉದ್ಯೋಗ ಬೆಳವಣಿಗೆಯನ್ನು ಸಿಇಪಿಎ ಹೇಗೆ ವೇಗಗೊಳಿಸುತ್ತದೆ ಎಂಬುದಕ್ಕೆ ರತ್ನ ಮತ್ತು ಆಭರಣ ವಲಯವು ಮತ್ತೊಂದು ಉದಾಹರಣೆಯಾಗಿದೆ. ಕತ್ತರಿಸಿದ ಮತ್ತು ಹೊಳಪು ನೀಡಿದ ವಜ್ರಗಳು, ಚಿನ್ನ ಮತ್ತು ಬೆಳ್ಳಿ ಆಭರಣಗಳು ಮತ್ತು ಕೈಯಿಂದ ತಯಾರಿಸಿದ ಆಭರಣಗಳ ಉತ್ಪಾದನೆಯಲ್ಲಿ ಭಾರತವು ಈಗಾಗಲೇ ಬಲವಾದ ಸಾಮರ್ಥ್ಯವನ್ನು ಹೊಂದಿದೆ. ಸುಂಕದ ಅಡೆತಡೆಗಳನ್ನು ತೆಗೆದುಹಾಕುವುದರೊಂದಿಗೆ, ಭಾರತೀಯ ರಫ್ತುದಾರರು ಯುರೋಪಿಯನ್ ಮತ್ತು ಏಷ್ಯಾದ ಪ್ರತಿಸ್ಪರ್ಧಿಗಳ ಮೇಲೆ ನಿರ್ಣಾಯಕ ಸ್ಪರ್ಧಾತ್ಮಕ ಲಾಭವನ್ನು ಪಡೆಯುತ್ತಾರೆ. ಮುಂದಿನ ಮೂರು ವರ್ಷಗಳಲ್ಲಿ ಒಮಾನ್‌ಗೆ 150 ದಶಲಕ್ಷ ಡಾಲರ್‌ನಷ್ಟು ರಫ್ತು ಬೆಳೆಯಬಹುದು ಎಂದು ಉದ್ಯಮವು ಅಂದಾಜಿಸಿದೆ. ಇದು ಪಶ್ಚಿಮ ಬಂಗಾಳ, ತಮಿಳುನಾಡು, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಗುಜರಾತ್‌ನಾದ್ಯಂತ ಆಭರಣ ತಯಾರಿಕೆ ಕ್ಲಸ್ಟರ್‌ಗಳಲ್ಲಿ ಗಣನೀಯ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.

ರೈತರು ಮತ್ತು ಮೀನುಗಾರರು – ದೇಶೀಯ ರೈತರು ಮತ್ತು ಸೂಕ್ಷ್ಮ ಕೃಷಿ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಭಾರತವು ಗೋಧಿ, ಅಕ್ಕಿ, ಮೆಕ್ಕೆಜೋಳ, ಸಿರಿಧಾನ್ಯಗಳು, ಹೈನು ಉತ್ಪನ್ನ, ಹಣ್ಣುಗಳು, ತರಕಾರಿಗಳು, ಖಾದ್ಯ ತೈಲಗಳು, ಎಣ್ಣೆಕಾಳುಗಳು, ಚಹಾ, ಕಾಫಿ ಮತ್ತು ಜೇನುತುಪ್ಪದಂತಹ ಪ್ರಮುಖ ಉತ್ಪನ್ನಗಳಿಗೆ ಯಾವುದೇ ಸುಂಕ ರಿಯಾಯಿತಿ ನೀಡಿಲ್ಲ.

ಭಾರತವು ಬೆಣ್ಣೆ, ಜೇನುತುಪ್ಪ, ಸಿಹಿ ಬಿಸ್ಕತ್ತುಗಳು, ಮೊಟ್ಟೆಗಳು ಮತ್ತು ಕೆಲವು ಮಿಠಾಯಿ ಉತ್ಪನ್ನಗಳಲ್ಲಿ ಪ್ರತಿಸ್ಪರ್ಧಿಗಳ ವಿರುದ್ಧ ಸ್ಪರ್ಧಾತ್ಮಕ ಪ್ರಯೋಜನವನ್ನು ಪಡೆಯುತ್ತದೆ. ಇದು ದೇಶದ ಕೃಷಿ ಉತ್ಪನ್ನಗಳಿಗೆ ಬೇಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಗ್ರಾಮೀಣ ಆದಾಯವನ್ನು ಹೆಚ್ಚಿಸುತ್ತದೆ.

ಈ ಒಪ್ಪಂದವು ಭಾರತದ 'ರಾಷ್ಟ್ರೀಯ ಸಾವಯವ ಉತ್ಪಾದನೆ ಕಾರ್ಯಕ್ರಮ'(ಎನ್‌ಪಿಒಪಿ) ಪ್ರಮಾಣೀಕರಣವನ್ನು ಅಂಗೀಕರಿಸಲು ಅವಕಾಶ ನೀಡುತ್ತದೆ, ಇದು ಪ್ರಮುಖ ಆಹಾರ ಆಮದುದಾರ ಒಮಾನ್‌ಗೆ ಸಾವಯವ ಉತ್ಪಾದನೆಯನ್ನು ಮಾರಾಟ ಮಾಡಲು ಭಾರತೀಯ ರೈತರಿಗೆ ಅಗಾಧ ಅವಕಾಶಗಳನ್ನು ತೆರೆಯುತ್ತದೆ.

ಸಮುದ್ರ ಉತ್ಪನ್ನಗಳ ವಿಚಾರದಲ್ಲೂ ಭಾರತದ ಅಗಾಧವಾದ ಸಾಮರ್ಥ್ಯವು ಬಳಕೆಯಾಗದೆ ಉಳಿದಿದೆ. 2022 ಮತ್ತು 2024ರ ನಡುವೆ ಒಮಾನ್‌ನ ಸಮುದ್ರ ಉತ್ಪನ್ನಗಳ ಆಮದು ಸುಮಾರು 119 ದಶಲಕ್ಷ ಡಾಲರ್ ಆಗಿತ್ತು. ಭಾರತದಿಂದ ಆಮದು ಕೇವಲ 7.75 ದಶಲಕ್ಷ ಡಾಲರ್‌ನಷ್ಟಿತ್ತು. ಇದು ಸೀಗಡಿ ಮತ್ತು ಘನೀಕರಿಸಿದ ಕಟಲ್ ಫಿಶ್‌ನಂತಹ ಭಾರತೀಯ ಸಮುದ್ರಾಹಾರ ರಫ್ತಿಗೆ ಅಗಾಧ ಅವಕಾಶಗಳನ್ನು ನೀಡುತ್ತದೆ. ಅಧಿಕ ಕಾರ್ಮಿಕರ ಶಕ್ತಿ ಬಳಕೆಯ ಸಮುದ್ರ ಉತ್ಪನ್ನಗಳ ಉದ್ಯಮವು ಮೀನುಗಾರಿಕೆ, ಸಂಸ್ಕರಣೆ, ಪ್ಯಾಕೇಜಿಂಗ್, ಕೋಲ್ಡ್–ಚೈನ್ ಸರಕುಸಾಗಣೆ ಮತ್ತು ರಫ್ತು ಕಾರ್ಯಾಚರಣೆಗಳಲ್ಲಿ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ.

ಔಷಧ ಮತ್ತು ಸಾಂಪ್ರದಾಯಿಕ ಔಷಧ – ಯುಎಸ್‌ಎಫ್‌ಡಿಎ, ಇಎಂಎ, ಯುಕೆ ಎಂಎಚ್‌ಆರ್‌ಎ ಮತ್ತು ಟಿಜಿಎದಂತಹ ನಿಯಂತ್ರಕ ಪ್ರಾಧಿಕಾರಗಳು ಅನುಮೋದಿಸಿರುವ ಭಾರತೀಯ ಔಷಧಗಳು 90 ದಿನಗಳಲ್ಲಿ ಒಮಾನ್‌ನಲ್ಲಿ ಸ್ವಯಂಚಾಲಿತ ಮಾರ್ಕೆಟಿಂಗ್ ಅಧಿಕಾರವನ್ನು ಪಡೆಯುತ್ತವೆ – ಇದು ಭಾರತೀಯ ಔಷಧ ರಫ್ತುದಾರರಿಗೆ ದೊಡ್ಡ ಗೆಲುವು. ಗಮನಾರ್ಹ ವಿಷಯವೆಂದರೆ, ಸಿಇಪಿಎ ಭಾರತದ ಸಾಂಪ್ರದಾಯಿಕ ವೈದ್ಯಕೀಯ ಸೇವೆಗಳಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಇದು ಸಾಂಪ್ರದಾಯಿಕ ಔಷಧದಲ್ಲಿ ಜಂಟಿ ಸಂಶೋಧನೆಗೆ ಅನುವು ಮಾಡಿದೆ.

ಸೇವೆಗಳು ಮತ್ತು ಪ್ರಯಾಣ

ಒಪ್ಪಂದದ ಮತ್ತೊಂದು ಪ್ರಮುಖ ಆಯಾಮವೆಂದರೆ ಸೇವೆಗಳು ಮತ್ತು ಸಾರಿಗೆ. ವೃತ್ತಿಪರ ಸೇವೆಗಳು, ಕಂಪ್ಯೂಟರ್ ಮತ್ತು ಐಟಿ ಸೇವೆಗಳು, ಶಿಕ್ಷಣ, ಆರೋಗ್ಯ ರಕ್ಷಣೆ, ಪ್ರವಾಸೋದ್ಯಮ, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಪರಿಸರ ಸೇವೆಗಳು ಸೇರಿದಂತೆ ಭಾರತಕ್ಕೆ ಪ್ರಮುಖ ರಫ್ತು ಆಸಕ್ತಿಯ ಕ್ಷೇತ್ರಗಳಲ್ಲಿ ಒಮಾನ್ ವಾಣಿಜ್ಯಕವಾಗಿ ಅರ್ಥಪೂರ್ಣ ಬದ್ಧತೆಗಳನ್ನು ಕೈಗೊಂಡಿದೆ. ಅಕೌಂಟಿಂಗ್, ಎಂಜಿನಿಯರಿಂಗ್, ವೈದ್ಯಕೀಯ, ನಿರ್ಮಾಣ, ಶಿಕ್ಷಣ ಮತ್ತು ಸಲಹಾ ಕ್ಷೇತ್ರಗಳಲ್ಲಿನ ಭಾರತೀಯ ವೃತ್ತಿಪರರು ಸುಧಾರಿತ ಮಾರುಕಟ್ಟೆ ಪ್ರವೇಶದಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.

ನಿರ್ಣಾಯಕವಾಗಿ, ಭಾರತೀಯ ವೃತ್ತಿಪರರು ಮತ್ತು ಕಾರ್ಮಿಕರಿಗೆ ಹೆಚ್ಚಿನ ಪ್ರಯಾಣ ಷರತ್ತುಗಳಿಗೆ ಒಮಾನ್ ಸಮ್ಮತಿಸಿದೆ. ಅಂತರ–ಕಾರ್ಪೊರೇಟ್ ವರ್ಗಾವಣೆಗೆ ಒಳಗಾದ ನೌಕರರು ಮತ್ತು ಗುತ್ತಿಗೆ ಸೇವಾ ಪೂರೈಕೆದಾರರಿಗೆ ನಾಲ್ಕು ವರ್ಷಗಳವರೆಗೆ ವಾಸ್ತವ್ಯವನ್ನು ಅನುಮತಿಸಲಾಗುವುದು. ಇದೇ ವೇಳೆ, ವ್ಯಾಪಾರ ಸಂದರ್ಶಕರು ಮತ್ತು ಸ್ವತಂತ್ರ ವೃತ್ತಿಪರರು ಸುಲಭವಾದ ತಾತ್ಕಾಲಿಕ ಪ್ರವೇಶ ಅನುಮತಿಗಳನ್ನು ಪಡೆಯಲಿದ್ದಾರೆ. ಇದು ಅಂತರ–ಕಾರ್ಪೊರೇಟ್ ವರ್ಗಾವಣೆದಾರರ ಮಿತಿಯನ್ನು ಶೇಕಡಾ 20ರಿಂದ 50ಕ್ಕೆ ಹೆಚ್ಚಿಸಿದೆ.

ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವ ಮೋದಿ ಸರಕಾರದ ಉಪಕ್ರಮಗಳು ಪ್ರತಿಯೊಬ್ಬ ಭಾರತೀಯನ ಜೀವನವನ್ನು ಸುಧಾರಿಸುವ ಪ್ರಧಾನಿಯವರ ಘನ ಉದ್ದೇಶದ ಭಾಗವಾಗಿದೆ.

ವ್ಯಾಪಾರವು ಬೆಳವಣಿಗೆ, ಉದ್ಯೋಗ ಸೃಷ್ಟಿ ಮತ್ತು ಹಂಚಿಕೆಯ ಸಮೃದ್ಧಿಯ ಪ್ರಬಲ ಸಾಧನವಾಗಿದೆ ಎಂಬುದನ್ನು ಒಮಾನ್ ಜೊತೆಗಿನ ಒಪ್ಪಂದವು ನೆನಪಿಸುತ್ತದೆ. ಛಿದ್ರಗೊಂಡ ಮತ್ತು ರಕ್ಷಣಾತ್ಮಕ ಜಗತ್ತಿನಲ್ಲಿ ಹೊಸ, ಆತ್ಮವಿಶ್ವಾಸದ ಭಾರತವು ಗೋಡೆಗಳ ಹಿಂದೆ ಅಡಗಿಕೊಳ್ಳುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಪ್ರಧಾನಿ ಮೋದಿ ರವಾನಿಸುತ್ತಿದ್ದಾರೆ. ಇದು ಪಾಲುದಾರಿಕೆ, ಸ್ಪರ್ಧಾತ್ಮಕತೆ ಮತ್ತು ಜಾಗತಿಕ ತೊಡಗಿಸಿಕೊಳ್ಳುವಿಕೆಯ ಮೂಲಕ ಭಾರತ ಮತ್ತಷ್ಟು ಮೇಲೇರುತ್ತಿದೆ.

(ಲೇಖಕರು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು)

ಭಟ್ಟರ್ ಸ್ಕ್ಯಾಚ್

- ಅಮಾಸೆ ಸುಬ್ಬು, ಮೈಸೂರು
ಭಟ್ರೇ, ಪ್ರೇಮದ ಘಂಟೆ ಯಾವಾಗ ಹೊಡೆದುಕೊಳ್ಳುತ್ತೆ?
- ಕದ್ದು ಮುಚ್ಚಿದ ಪ್ರಣಯ ಹೆತ್ತವರ ಕಿವಿಗೆ ಬಿದ್ದಾಗ!

- ಘಂಟೆ ವರದಾಚಾರ್, ಮೈಸೂರು
ಭಟ್ರೇ, ಹಗೆಗೂ ಹೊಗೆಗೂ ಏನು ಸಂಬಂಧ?
- ಭೀಮಾ ತೀರದ ಮಂದಿ ಹಗೆಯಿಂದಾಗಿ ಹೊಗೆಹಾಕಿಸಿಕೊಂಡ ಸುದ್ದಿ ಓದಿಯೂ ಈ ಪ್ರಶ್ನೆನಾ ಆಚಾರ್ರೆ?

- ಗರುಡ ಐಯ್ಯಂಗಾರ್, ಮೇಲುಕೋಟೆ
ಭಟ್ರೇ, ನೀಟ್ ಪರೀಕ್ಷೆಯನ್ನು ನೀಟಾಗಿ ಮಾಡದ ಕೇಂದ್ರ ಸರಕಾರದ ಬಗ್ಗೆ ಜನ ಏನು ಮಾತಾಡಿಕೊಳ್ಳುತ್ತಿದ್ದಾರೆ?
- ಪ್ರಧಾನವಾಗಿ ಸಂಬಂಧಪಟ್ಟ ಮಂತ್ರಿಯನ್ನು ಕೈಬಿಡದೆ ಇನ್ನೂ ಇಟ್ಟುಕೊಂಡಿರುವುದು ಯಾವ ಧರ್ಮ?

- ರುಕ್ಕು, ಚಾಮರಾಜಪೇಟೆ
ಭಟ್ರೇ, ಡಿಕೆಶಿಗೆ ನೀವು ಯಾವ ಕಿವಿಮಾತು ಹೇಳ್ತೀರಾ?
- ನಾನು ಪತ್ರಿಕೆಯಲ್ಲಿ ಕಿವಿಮಾತು ಹೇಳಿದರೆ ಅದು ಎಲ್ಲರಿಗೂ ಕೇಳುತ್ತದಲ್ಲ?!

- ರಾಘಣ್ಣಚಾರು, ಮೈಸೂರು
ಭಟ್ರೇ, ಕಲ್ಲು ಅನ್ನೋ ದೇವರಿಗೆ ರಾಜ್ಯವೆಲ್ಲ ಸುತ್ತಿ, ಹರಕೆ ಹೊತ್ತು ಬಂದ ಡಿಕೆಶಿ ಫಲ ಶ್ರುತಿ ಒಂದೇ ಮಾತಲ್ಲಿ ಹೇಳುವಿರಾ?
- 'ಫಲಿಸಿತು ಒಲವಿನ ಪೂಜಾಫಲ, ಎನಗಿಂದು ಕೂಡಿಬಂತು ಮುಖ್ಯಮಂತ್ರಿ ಬಲ!'

- ನಾರಾಯಣ ರಾವ್, ಹುಬ್ಬಳ್ಳಿ
ಭಟ್ರೇ, ನಿಮ್ಮ ಬಗ್ಗೆ ನನಗೆ ಬಹಳ ಅಭಿಮಾನ ಏಕಿರಬಹುದು?
- ಇದು ಪ್ರಶ್ನೆಯಲ್ಲ, ಉತ್ತರ!

- ಕೆ.ಜಿ.ಭಟ್, ಕುಮಟಾ
ಭಟ್ರೇ, ನೀವು ರಾಜಕೀಯಕ್ಕೆ ಏಕೆ ಬರಬಾರದು?
- ಆಗ ಭಟ್ಟರ ಸ್ಕಾಚ್‌ನ್ನು ನನ್ನ ಪಿಎ ಬರೆಯಬೇಕಾಗುತ್ತದೆ!

- ವೆಂಕಟಗಿರಿ, (ಇಮೇಲ್ ಮೂಲಕ)
ಭಟ್ರೇ, ಪತ್ರಿಕೆ ತೆರೆದರೆ ಸಾಕು, ಬರೀ ರಾಜಕೀಯ, ಕ್ಯೈಂ?
- ನಿನ್ನಂಥವರಿಗಾಗಿಯೇ 'ಪ್ರವಾಸಿ ಪ್ರಪಂಚ' ಮಾಡಿರೋದು!

- ಶಶಿಕಲಾ ಪಂಡಿತ, ಬೆಂಗಳೂರು
ಭಟ್ರೇ, ಈಗಿನ ಕಾಲದ ಹುಡುಗರು ಬಹಳ ಸ್ಲೋ, ಏನಂತೀರಾ?
- ನೀವು ನನ್ನನ್ನು ಭೇಟಿ ಮಾಡಿದ್ದರೆ, ಈ ಮಾತನ್ನು ಹೇಳುತ್ತಿರಲಿಲ್ಲ!

- ವರದೇಶ ಪಿ., ಬೆಳಗಾವಿ
ಭಟ್ರೇ, ಡಿಕೆಶಿ ಸಿಎಂ ಆದ್ರೆ ಸರಕಾರದ ಲೋಪಗಳನ್ನು ಮುಚ್ಚಬಹುದಾ?
- ಸದ್ಯ ರಸ್ತೆ ಗುಂಡಿಗಳನ್ನು ಮುಚ್ಚಿದರೆ ಸಾಕು!

ಕೇಳಿದ್ದೆಲ್ಲಾ ಭಗವಂತ ನೀಡುತ್ತಾನೆ ಎಂದೇನಿಲ್ಲ !

ನಮ್ಮದು ಸಾವಿರ ಸಮಸ್ಯೆಗಳ ಸಮಾಜ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಜೀವನ ಚಿತ್ರಣವೇ ಬದಲಾಗುತ್ತಿದೆ. ಪ್ರಶ್ನೆ ಬದಲಾದ ಮೇಲೆ ಉತ್ತರವೂ ಬದಲಾಗಬೇಕಲ್ಲವೇ? ಹೀಗಾಗಿ ಇವತ್ತಿನ ಮಕ್ಕಳ ಆದ್ಯತೆ, ಯೋಚನೆ, ಬದುಕುವ ರೀತಿ ಎಲ್ಲವೂ ಬದಲಾಗಿದೆ. ಇನ್ಸ್ಟಂಟ್ ಯುಗದಲ್ಲಿ ಸಮಸ್ಯೆಗಳು ಮಾತ್ರ ಜಟಿಲವಾಗುತ್ತಿವೆ. ಸಮಸ್ಯೆಗೆ ಸಿಗುತ್ತಿದ್ದ ಸಮಾಧಾನ ಹಿಂದಿಗಿಂತ ಮಾತ್ರ ಇನ್ನಷ್ಟು ತಡವಾಗುತ್ತಿದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಜಪಾನಿನ ಒಂದು ಗಾದೆಮಾತು into the house where joy lives, happiness will gladly come ಎನ್ನುತ್ತದೆ. ಜಾಯ್ ಮತ್ತು ಹ್ಯಾಪಿನೆಸ್ ಎರಡಕ್ಕೂ ಸಂತೋಷ ಎನ್ನುವ ಅರ್ಥವನ್ನು ಕನ್ನಡದಲ್ಲಿ ಯಥಾವತ್ತಾಗಿ ಹೇಳಬಹುದು. ಜಾಯ್ ಎನ್ನುವುದನ್ನು ನಾವು ಖುಷಿಯಾಗಿರುವ ಮನಸ್ಥಿತಿ ಎಂದುಕೊಳ್ಳೋಣ. ಆಗ ಸಂತೋಷ ಸದಾ ಜತೆಯಾಗುತ್ತದೆ. ಆದರೆ, ಇವತ್ತಿನ ದಿನದಲ್ಲಿ ಈ ಸಂತೋಷ ಮಾಯವಾಗುತ್ತಿದೆ. ಪ್ರತಿಯೊಬ್ಬರೂ ಒಂದಲ್ಲ ಒಂದು ಚಿಂತೆಗಳಲ್ಲಿ ಬಂಧಿಗಳಾಗಿದ್ದಾರೆ. ಇರುವುದರಲ್ಲಿ ತೃಪ್ತಿಯಿಲ್ಲ. ಇರುವುದಕ್ಕೆ ಬೆಲೆಯಿಲ್ಲ. ಸದಾ ಇಲ್ಲದುದರ ಬಗ್ಗೆ ಧ್ಯಾನ. ಹತ್ತಿದ್ದವರಿಗೆ ಅದನ್ನು ನೂರು ಮಾಡುವ , ನೂರಿದ್ದವರಿಗೆ ಸಾವಿರ ಮಾಡುವ ಚಟ. ಸಾವಿರವಿದ್ದವರು ಲಕ್ಷ, ಕೋಟಿಗಳ ಬಗ್ಗೆ ಚಿಂತೆಯಲ್ಲಿ ಮಗ್ನ. ದುಡ್ಡಿನ ಬಗ್ಗೆ ಉದಾಸೀನ ಮಾಡುವವರ ಸಂಖ್ಯೆಯೂ ದೊಡ್ಡದಿದೆ.

ಆದರೆ, ಕಳೆದ ನಿನ್ನೆಯಲ್ಲಿ, ಕಾಣದ ನಾಳೆ ಯಲ್ಲಿ ದಿನ ಕಳೆಯುವವರ ಸಂಖ್ಯೆ ಮಾತ್ರ ಇಲ್ಲವೆನ್ನುವಷ್ಟು ದೊಡ್ಡದಿದೆ. ಇವತ್ತಿನ ದಿನದಲ್ಲಿ ಈ ಗಳಿಗೆ ಯಲ್ಲಿ ಕಳೆದಾಗ ಮಾತ್ರ ಜಾಯ್, ಹ್ಯಾಪಿನೆಸ್ ನಮ್ಮದಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮನ್ನು ನಾವು ಪರಾಮರ್ಶಿಸಿ ಕೊಂಡು ನೋಡಬೇಕು. ವಿಪರ್ಯಾಸ ಎಂದರೆ ಜಗತ್ತಿನೊಡನೆ ಸಂವಹನ ಮಾಡುವ ನಮಗೆ ನಮ್ಮೊಂದಿಗೆ ಸಂವಹನ ಮಾಡುವ ವೇಳೆ ಇಲ್ಲವಾಗಿದೆ.

ಹೆತ್ತವರಿಗೆ ತಾವು ಮಾಡದ್ದನ್ನು ನಮ್ಮ ಮಕ್ಕಳು ಮಾಡಲಿ, ನಮ್ಮಾಸೆ ಪೂರೈಸಲಿ ಎನ್ನುವ ಆಶಯ. ಮಕ್ಕಳಿಗೆ ಹೆತ್ತವರು ಆಸ್ತಿ ಮಾಡಿಟ್ಟದ್ದರೆ, ಈ ಜಗತ್ತಿನ ಗೌಜುಗಳು ನಮಗೆ ತಟ್ಟುತ್ತಿರಲಿಲ್ಲ ಎನ್ನುವ ಭಾವನೆ. ಮಗ ಅಥವಾ ಮಗಳು ಡಾಕ್ಟರ್ ಆಗಲಿ ಎನ್ನುವುದು ಹೆತ್ತವರ ಆಸೆಯಾದರೆ, ಹೆತ್ತವರು ಪ್ರಶ್ನೆ ಕೇಳದೆ ಬಂಡವಾಳ ಕೊಟ್ಟರೆ ಬಿಸಿನೆಸ್ ಮಾಡಬಹುದು ಎನ್ನುವುದು ಮಕ್ಕಳ ಕನಸು. ಕುಳಿತು ಮಾತಾಡುವುದು, ಒಬ್ಬರ ಮನದ ಭಾವನೆ ಒಬ್ಬರು ಅರಿಯುವುದು ಮಾತ್ರ ಆಗುವುದೇ ಇಲ್ಲ. ಒಂದು ಸೂರಿನಡಿ ವಿರೋಧಾಭಾಸ ಮನೆ ಮಾಡಿರುತ್ತದೆ. ಮನೆಯಲ್ಲಿ ಮಾತ್ರ ಜೀವವಿರುವ, ಭಾವವಿಲ್ಲದ ಮನಸ್ಸುಗಳ ದೇಹಗಳು ಜೀವಿಸುತ್ತಿರುತ್ತವೆ.

ನನ್ನ ಪ್ರಕಾರ ಮಕ್ಕಳಿಗಾಗಿ ಆಸ್ತಿ, ಹಣ ಸಂಗ್ರಹಿಸಿಡಬಾರದು. ಈ ರೀತಿ ಮಕ್ಕಳಿಗೆ ಅಂತ ಹಣ ಸಂಗ್ರಹಿಸಿಡಬಾರದು ಎನ್ನುವುದಕ್ಕೆ ಮುಖ್ಯವಾಗಿ ಎರಡು ಕಾರಣವಿದೆ. ಒಂದು ನಿಮ್ಮ ಮಕ್ಕಳು ನಿಮ್ಮಷ್ಟೇ ಅಥವಾ ನಿಮಗಿಂತ ಬುದ್ಧಿವಂತರಾಗಿದ್ದರೆ ನಿಮ್ಮ ಹಣ ಅವರಿಗೆ ಬೇಕಿಲ್ಲ. ಎರಡು ನಿಮ್ಮ ಮಕ್ಕಳು ನಿಮ್ಮಷ್ಟು ಯೋಗ್ಯತೆ ಇಲ್ಲದವರು ಎಂದರೆ ನೀವೆಷ್ಟೇ ಹಣ ಇಟ್ಟಿದ್ದರೂ ಅದನ್ನ ಉಳಿಸಿಕೊಳ್ಳುವ ತಾಕತ್ತು ಅವರಿಗಿರುವುದಿಲ್ಲ. ಕಾರಣ ಯಾವುದೇ ಇರಲಿ ಮಕ್ಕಳಿಗೆ ಅಂತ ಆಸ್ತಿ ಮತ್ತು ಹಣ ಮಾಡುವುದು ತಪ್ಪು. ಅವಕ್ಕೆ ಬೇಕಾದ ವಿದ್ಯಾಭ್ಯಾಸ, ಸಂಸ್ಕಾರ ಮತ್ತು ಜೀವನದ ಬಂಡಿ ಎಳೆಯಲು ಬೇಕಾಗುವ ಸಾಮಾನ್ಯಜ್ಞಾನ ಕೊಟ್ಟರೆ ಸಾಕು. ಬದುಕಿನಲ್ಲಿ ಕಷ್ಟ ಎದುರಾದಾಗ ಅದಕ್ಕೆ ಸೆಡ್ಡು ಹೊಡೆದು ನಿಲ್ಲುವುದನ್ನು ಕಲಿಸಿದರೆ ಸಾಕು ಮಿಕ್ಕದೆಲ್ಲಾ ಗೌಣ.

ಯಾರ ಸಹಾಯವೂ ಇಲ್ಲದೆ ಕೇವಲ ತನ್ನ ಬುದ್ಧಿಬಲದಿಂದ ಮೇಲೆ ಬಂದ Lawrence Joseph Ellison ಇದಕ್ಕೊಂದು ಉತ್ತಮ ಉದಾಹರಣೆ. ಲಾರಿಯ ಅಮ್ಮನಿಗೆ ಅವನನ್ನ ಸಾಕುವ ತಾಕತ್ತು ಕೂಡ ಇರಲಿಲ್ಲ. ಹೀಗಾಗಿ ಶಿಕಾಗೊದಲ್ಲಿದ್ದ ಅವನ ಚಿಕ್ಕಮ್ಮ ಮತ್ತು ಚಿಕ್ಕಪ್ಪನಿಗೆ ದತ್ತು ಕೊಟ್ಟು ಬಿಡುತ್ತಾಳೆ. ಚಿಕ್ಕಮ್ಮ ಒಳ್ಳೆಯ ಹೆಂಗಸು ಲಾರಿಯನ್ನು ಪ್ರೀತಿಯಿಂದ ಕಾಣುತ್ತಾಳೆ. ಚಿಕ್ಕಪ್ಪ ಸ್ವಲ್ಪ ಒರಟು.ಬಾಲಕ ಲಾರಿಯ ಕಂಡರೆ ಅಷ್ಟಕಷ್ಟೇ. ಚಿಕ್ಕಮ್ಮ ಇರುವವರೆಗೆ ಜೀವನ ಸುಗಮವಾಗಿತ್ತು. ಚಿಕ್ಕಮ್ಮ ಸತ್ತ ನಂತರ ಮನೆಯಲ್ಲಿ ಇನ್ನೇನು ಉಳಿದಿಲ್ಲ ಅನ್ನಿಸಿ ಶಿಕಾಗೊ ಇಂದ ಕ್ಯಾಲಿಫೋರ್ನಿಯಾಗೆ ಹೋಗುತ್ತಾನೆ. ಮುಂದಿನ ಎಂಟು ವರ್ಷ ಹೊಟ್ಟೆಪಾಡಿಗೆ, ಜೀವನದ ಬಂಡಿ ನಿಲ್ಲದೆ ಸಾಗಿಸಲು ಎದುರಾಗುವ ಚಿಕ್ಕಪುಟ್ಟ ಕೆಲಸಗಳನ್ನ ಮಾಡುತ್ತಾನೆ. 1977ರಲ್ಲಿ ಇಬ್ಬರು ಸ್ನೇಹಿತರ ಸೇರಿಸಿಕೊಂಡು ಕಟ್ಟಿದ ಕಂಪನಿಯ ಹೆಸರು 'ಸಾಫ್ಟ್‌ವೇರ್ ಡೆವಲಪ್ಮೆಂಟ್ ಲ್ಯಾಬೊರೇಟರೀಸ್.' 1979ರಲ್ಲಿ ಅದೇ ಕಂಪನಿಯ ಹೆಸರು 'ರಿಲೇಶನಲ್ ಸಾಫ್ಟ್‌ವೇರ್ ಐಎನ್‌ಸಿ' ಎಂದು ಮರುನಾಮಕರಣ ಹೊಂದುತ್ತದೆ. 1982ರಲ್ಲಿ ಇದು 'ಒರಾಕಲ್ ಸಿಸ್ಟಮ್ಸ್ ಕಾರ್ಪೋರೇಶನ್' ಎನ್ನುವ ಹೆಸರು ಪಡೆಯುತ್ತದೆ. ಇಂದು ಒರಾಕಲ್ ಹೆಸರು ಕೇಳದವರು ಯಾರು? ನೆನಪಿರಲಿ ವೈ? ಎಂದರೆ ಅಲ್ಲಿಗೆ ಮುಗಿಯಿತು!! ಅದೇ ವೈ ನಾಟ್? ಎಂದರೆ ಅಲ್ಲಿ ಸಾವಿರಾರು ಅವಕಾಶಗಳು ತೆರೆದುಕೊಳ್ಳುತ್ತವೆ. ಯಾವ ಗಾಡ್ ಫಾದರ್ ಇಲ್ಲದೆ ಜೀವನದಲ್ಲಿ ಉನ್ನತಿಯ ಕಡೆಗೆ ಸಾಗಿದ ಇಂತಹ ನೂರಾರು ಜನರನ್ನು ನಾವು ಉದಾಹರಣೆ ಕೊಡಬಹುದು.

ಅದೇ ಸಮಯದಲ್ಲಿ ಎಲ್ಲವೂ ಇದ್ದವರ ಮನೆಯಲ್ಲಿ ಜನಿಸಿದ, ಬದುಕಿನಲ್ಲಿ ಯಾವ ಗುರುತನ್ನು ಉಳಿಸಲಾಗದ ಕೋಟ್ಯಂತರ ಜನರನ್ನು ಕೂಡ ಉದಾಹರಿಸಬಹುದು. ಅರ್ಥವಿಷ್ಟೆ ಮಕ್ಕಳನ್ನು ಹೆತ್ತ ಮಾತ್ರಕ್ಕೆ ಅವರ ಹಣೆಬರಹ ಬರೆಯಲಾಗುವುದಿಲ್ಲ. ಮಕ್ಕಳೂ ಅಷ್ಟೇ ಸ್ವ ಪ್ರಯತ್ನವಿಲ್ಲದಿದ್ದರೆ ಅದೆಷ್ಟೇ ದೊಡ್ಡ ಮನೆತನದಲ್ಲಿ ಹುಟ್ಟಿದರೂ ಅದರಿಂದ ಪ್ರಯೋಜನವಂತೂ ಇಲ್ಲ.

ಪ್ರತಿ ಭಾನುವಾರ ಬಂದರೆ ಸಾಕು ವಿಶ್ವವಾಣಿಯ ಅಂಕಣ ಬರಹಕ್ಕೆ ಏನು ಬರೆಯುವುದು? ಎನ್ನುವ ಚಿಂತನೆಯೊಂದಿಗೆ ಬೆಳಗಿನ ನಡಿಗೆ ಸಾಗುತ್ತದೆ. ಹೆಚ್ಚುತ್ತಿರುವ ಜನರೇಷನ್ ಗ್ಯಾಪ್ ಬಗ್ಗೆ, ಆಸಕ್ತಿ ಬದಲಾಗುತ್ತಿರುವುದರ ಬಗ್ಗೆ, ಬದಲಾಗುತ್ತಿರುವ ಆದ್ಯತೆಗಳ ಬಗ್ಗೆ ಬರೆಯುವುದು ಎಂದುಕೊಂಡು ಮೇಲಿನ ಸಾಲುಗಳನ್ನು ಮನಸ್ಸಿನಲ್ಲಿ ಜೋಡಿಸಿಕೊಳ್ಳುತ್ತಿದೆ. ಇವತ್ತು ನಮ್ಮ ಮುಂದೆ ಗಂಡ ಹೆಂಡತಿ ಜತೆಗೊಬ್ಬ 8/10 ವರ್ಷದ ಹುಡುಗ (ಅವರ ಮಗ ಎನ್ನುವುದು ಆಮೇಲೆ ಗೊತ್ತಾಯ್ತು) ಸಾಗುತ್ತಿದ್ದರು.

ಆ ಹುಡುಗ ಮುಂದಕ್ಕೆ ಹೆಜ್ಜೆ ಹಾಕುವ ಬದಲು ಹಿಂದಕ್ಕೆ ದೇಹವನ್ನ ವಾಲಿಸುತ್ತಿದ್ದ. ಲೆಥರ್ಜಿ ಎಂದರೇನು ಎನ್ನುವುದನ್ನ ಆ ಹುಡುಗನ ಹಾವಭಾವ ನೋಡಿದರೆ ಸಾಕು ಬೇರೆ ಹೇಳುವ ಅವಶ್ಯಕತೆಯಿಲ್ಲ ಎನ್ನುವ ಮಟ್ಟದ ಸೋಂಬೇರಿತನ! ಎದುರಿನಿಂದ ಬಂದ ಅಜ್ಜಿಯೊಂದು 'ಪಾಪ ಮಗುವನ್ನ ಮಲಗಲು ಬಿಡದೆ ಎಬ್ಬಿಸಿಕೊಂಡು ಬಂದಿದ್ದೀರ, ಅದಕ್ಕೆ ಅವನಿಗೆ ನಡೆಯಲು ಆಗುತ್ತಿಲ್ಲ' ಎನ್ನುವ ಅಣಿಮುತ್ತು ಉದುರಿಸಿ ಹೋಯ್ತು! ಪಕ್ಕದಲ್ಲೇ ಹೆಜ್ಜೆ ಹಾಕುತ್ತಿದ್ದ ಮಹಿಳೆಯೊಬ್ಬರು 'ಬೇಸಿಗೆ ರಜಾ ಪೂರ್ತಿ ಕೈಗೆ ಮೊಬೈಲ್ ಕೊಟ್ಟು ಕೂರಿಸಿದ್ರಿ ಅನ್ನಿಸುತ್ತೆ, ನಾಳೆ ಶಾಲೆ ಶುರು ಅದಕ್ಕೆ ಕರೆದುಕೊಂಡು ಬಂದಿದ್ದೀರ ಅನ್ನಿಸುತ್ತೆ. ಅವನಿಗೆ ನೀವು ಹೊರಗಡೆ ಆಟ ಆಡಲು ಬಿಡಬೇಕಿತ್ತು. ನೀವೇ ನೋಡಿ ಅವನಿಗೆ ಆಗಲೇ ಹೊಟ್ಟೆ ಬಂದಿದೆ.' ಎನ್ನುವ ಚುಚ್ಚುವ ಮಾತನ್ನಾಡಿದರು.

ಆ ಹುಡುಗನ ಅಪ್ಪ ಈ ಎಲ್ಲ ಮಾತುಗಳಿಂದ ಸ್ವಲ್ಪ ವಿಚಲಿತರಾದರು 'ನೋಡು ಎಲ್ಲರೂ ನಿನ್ನ ಬಗ್ಗೆ ಹೇಗೆ ಮಾತನಾಡುತ್ತಾರೆ, ಬೇಗ ಬೇಗ ನಡಿಯುವುದು ಕಲಿ. ವಾಕಿಂಗ್ ಆರೋಗ್ಯಕ್ಕೆ ಬಹಳ ಒಳ್ಳೆಯದು. ನಡೀಬೇಕು. ನೋಡು.. ಇಲ್ಲದಿದ್ದರೆ ಅಂಕಲ್(ನನ್ನ ಕಡೆ ಕೈ ತೋರಿಸುತ್ತ) ಕೂಡ ನಿನ್ನ ಬಯ್ಯುತ್ತಾರೆ ಎಂದರು.

ಅಯ್ಯೋ ದೇವರೇ, ಇದೊಳ್ಳೆ ಪಜೀತಿ ಆಯ್ತಲ್ಲ ಎಂದು ಕೊಂಡೆ. ನಾನು ಮತ್ತು ರಮ್ಯ ನಮ್ಮ ವೇಗ ತಗ್ಗಿಸದೆ ನಮ್ಮ ಪಾಡಿಗೆ ನಾವು ಎಲ್ಲ ಮಾತುಗಳನ್ನ ಕೇಳಿಸಿಕೊಂಡು ಹೋಗುತ್ತಿದ್ದೆವು ಅಷ್ಟೇ, ಈಗ

ಬೇಡವೆಂದರೂ ಕಾಮೆಂಟ್ ಮಾಡಬೇಕಾದ ಸನ್ನಿವೇಶ ಸೃಷ್ಟಿಯಾಯ್ತು.' ಪುಟ್ಟಾ ಮೊದಲ ದಿನಗಳಲ್ಲಿ ಎಲ್ಲರಿಗೂ ಹೀಗೆ ಆಗುತ್ತೆ, ಹತ್ತು ದಿನ ಬಿಡದೆ ವಾಕ್ ಮಾಡು ಆಮೇಲೆ ನಿನಗೆ ಇಷ್ಟ ಆಗುತ್ತೆ' ಎನ್ನುವ ಮಾತು ಹೇಳಿ ಮುಂದಕ್ಕೆ ಹೊರಟೆವು. ಆ ಹುಡುಗ ಮುಂದಕ್ಕೆ ಹೆಜ್ಜೆ ಇಡುವ ಬದಲು ದೇಹವನ್ನ ಹಿಂದಕ್ಕೆ ಜಗ್ಗುವುದು ಮಾತ್ರ ನಿಲ್ಲಿಸಲಿಲ್ಲ. ಹತ್ತು ದಿನ ಮಾಡುವುದು ದೂರದ ಮಾತು. ಇವತ್ತಿನ ತಲೆಮಾರಿನ ಮಕ್ಕಳಿಗೆ ಹತ್ತು ನಿಮಿಷ ಕೂಡ ಒಂದು ವಿಷಯವನ್ನು ಗಮನವಿಟ್ಟು ನೋಡುವುದಕ್ಕೆ, ಮನಸ್ಸನ್ನು ಕೇಂದ್ರೀಕರಿಸುವುದಕ್ಕೆ ಆಗುವುದಿಲ್ಲ. ಹೇಳಿಕೇಳಿ ಇದು ರೀಲ್ಸ್ ಯುಗ. ಪ್ರತಿ ಮೂವತ್ತು ಅಥವಾ ಅರವತ್ತು ಸೆಕೆಂಡುಗಳಿಗೆ ಟಾಪಿಕ್ ಚೇಂಜ್! ಏಕಾಗ್ರತೆ ಎಲ್ಲಿಂದ ಬಂದೀತು?

ರಜಾ ಬಂದರೆ ಸಾಕು ಮೂರುಹೊತ್ತು ರಸ್ತೆಯಲ್ಲಿ, ಗಲ್ಲಿಯಲ್ಲಿ, ಎಲ್ಲಿ ಜಾಗ ಸಿಕ್ಕರಲ್ಲಿ ಆಟ ಆಡುತ್ತಾ ಸಮಯ ಕಳೆಯುತ್ತಿದ್ದ ನನ್ನ ಬಾಲ್ಯ ಬೇಡವೆಂದರೂ ನೆನಪಿಗೆ ಬಂದಿತು. ಏನಾಗಿದೆ ಇವತ್ತಿನ ಮಕ್ಕಳಿಗೆ? ಎಲ್ಲದರಲ್ಲೂ ನಿರಾಸಕ್ತಿ. ಮೊಬೈಲ್ ಮತ್ತು ಅದರಲ್ಲಿರುವ ಗೇಮ್ಸ್ ಮಕ್ಕಳ ಅತಿ ದೊಡ್ಡ ಶತ್ರು. ಡಯಾಬಿಟಿಸ್ ಎನ್ನುವುದು ಹೇಗೆ ಬಡವ, ಶ್ರೀಮಂತ ಎನ್ನದೆ ಎಲ್ಲರನ್ನೂ ಆವರಿಸಿದೆ ಮತ್ತು ಅದಕ್ಕೆ ವಯಸ್ಸಿನ ಹಂಗು ಕೂಡ ಇಲ್ಲ. ಥೇಟ್ ಹಾಗೆ ಮೊಬೈಲ್ ಮತ್ತು ಗೇಮಿಂಗ್ ವ್ಯಸನ ಎಲ್ಲ ಮಕ್ಕಳನ್ನೂ ಆವರಿಸಿದೆಕೊಂಡಿದೆ. ಅದು ಅಡಿಕ್ಷನ್ ಆಗುವ ಮುಂಚೆ ಪೋಷಕರು ಎಚ್ಚರಗೊಳ್ಳಬೇಕು. ಬಡವರ ಅಥವಾ ಕೊರತೆ ಇರುವವರ ಮನೆಯ ಮಕ್ಕಳಲ್ಲಿ ಹಸಿವು ಹೆಚ್ಚಾಗಿರುತ್ತದೆ, ಏನಾದರೂ ಸಾಧಿಸುತ್ತಾರೆ ಎನ್ನುವ ಮಾತನ್ನ ರಮ್ಯಳ ಬಳಿ ಹೇಳುತ್ತಿದ್ದೆ. ಮನುಷ್ಯನ ಬದುಕಿಗೆ ಒಂದಷ್ಟು ಕೊರತೆ ಅಗತ್ಯ. ಆ ಕೊರತೆಯನ್ನು ನೀಗಿಸಿಕೊಳ್ಳುವ ಉಮೇದಿನಿಂದ ಕೆಲಸವನ್ನು ಮಾಡುತ್ತಾರೆ ಎನ್ನುವುದನ್ನು ನಾನು ಬಲವಾಗಿ ನಂಬಿದ್ದವನು. ಆದರೆ, ಇದೀಗ ಅದೂ ಕೂಡ ಪೂರ್ಣ ಸತ್ಯವಲ್ಲ ಎನ್ನುವ ಅನುಭವವಾಗುತ್ತಿದೆ.

ಜಗತ್ತು ವೇಗವಾಗಿ ಬದಲಾಗುತ್ತಿದೆ. ಮುಂದಿನ ಹತ್ತಿಪ್ಪತ್ತು ವರ್ಷದಲ್ಲಿ ಜಗತ್ತು ನಾವು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದ ಮಟ್ಟಿಗೆ ಬದಲಾಗುತ್ತದೆ. ಆದರೆ, ನಮ್ಮ ಯುವ ಜನತೆ ಮಾತ್ರ ಸೋಶಿಯಲ್ ಮೀಡಿಯಾ ಮೂಲಕ ಸಮಾಜವನ್ನು ಬದಲಾಯಿಸುತ್ತೇವೆ ಎನ್ನುವ ಭ್ರಮೆಯಲ್ಲಿದ್ದಾರೆ. ಅಥವಾ ಅವರನ್ನು ಬಳಸಿಕೊಂಡು ಬದಲಾಯಿಸುವ ಭ್ರಮೆಯಲ್ಲಿ ಹಲವು ನಾಯಕರಿದ್ದಾರೆ. ಇವತ್ತಿನ ಸಮಾಜದಲ್ಲಿನ ಜ್ವಲಂತ ಸಮಸ್ಯೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅರೆಕ್ಷಣ ಭವಿಷ್ಯವನ್ನು ನೆನೆದು ಭಯ ಉಂಟಾಗುತ್ತದೆ. ಯಾವುದೇ ಸೋಶಿಯಲ್ ಮೀಡಿಯಾ ಹಾವಳಿಗೆ, ಮೊಬೈಲ್ ಗೀಳಿಗೆ ಬೀಳದೆ ಎಂಜಿನಿಯರಿಂಗ್ ಅದರಲ್ಲೂ ಕಂಪ್ಯೂಟರ್ ಸೈನ್ಸ್ ಮಾಡಿದ ಮಕ್ಕಳಿಗೆ ಕೆಲಸವೇ ಸಿಗುತ್ತಿಲ್ಲ.

ಈ ವಿಚಾರ ಎತ್ತಿದ ತಕ್ಷಣ ಈ ಮಕ್ಕಳಲ್ಲಿ ಕೆಲಸಕ್ಕೆ ಬೇಕಾದ ಸ್ಕಿಲ್ ಇಲ್ಲ. ಅವರು ಕಷ್ಟಪಟ್ಟು ದುಡಿಯಲು ಮನಸ್ಸಿಲ್ಲ. ಅವರಿಗೆ ಹೆಚ್ಚಿನ ಹಣದ ಆಸೆ ಇತ್ಯಾದಿ ಹೇಳಲು ಶುರು ಮಾಡುತ್ತಾರೆ. ಇವೆಲ್ಲವೂ ಪೂರ್ಣ ಸುಳ್ಳಲ್ಲ. ಪೂರ್ಣ ಸತ್ಯವೂ ಅಲ್ಲ. ಒಬ್ಬ ಎಂಜಿನಿಯರಿಂಗ್ ವಿದ್ಯಾರ್ಥಿ ತನ್ನ ಓದು ಮುಗಿಸಲು ತಿಂಗಳಿಗೆ 25 ಸಾವಿರ ರುಪಾಯಿ ಖರ್ಚು ಮಾಡುವುದು ಅತಿ ಸಾಮಾನ್ಯವಾಗಿದೆ. ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಂತೂ ಆಗುವುದಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಓದು ಮುಗಿಸಿದ ಮೇಲೆ ತಿಂಗಳಿಗೆ ಹತ್ತು ಸಾವಿರ ವೇತನ ಎಂದರೆ? ಅಥವಾ ತಿಂಗಳಿಗೆ ಇಪ್ಪತ್ತೈದು ಸಾವಿರ ವೇತನ ಎಂದರೆ? ಟೈಮ್ ವ್ಯಾಲ್ಯೂ ಆಫ್ ಮನಿ ಲೆಕ್ಕಾಚಾರದಲ್ಲಿ ಅವರು ಖರ್ಚು ಮಾಡಿದ್ದಕ್ಕಿಂತ ಗಳಿಸುತ್ತಿರುವ ಹಣ ಬಹಳ ಕಡಿಮೆಯಾಯ್ತು. ಇಂತಹ ಉದಾಹರಣೆಗಳು ಬಂದಾಗ ಕಷ್ಟ ಪಟ್ಟು ಓದುವುದಾದರೂ ಏಕೆ? ಎನ್ನುವ ಪ್ರಶ್ನೆ ಹುಟ್ಟುವುದು ಸಹಜ. ಆಗೆಲ್ಲಾ ಬದುಕಿನಲ್ಲಿ ಆದ್ಯತೆ ಬದಲಾಗುವುದು ಸಹಜ.

ನಮ್ಮದು ಸಾವಿರ ಸಮಸ್ಯೆಗಳ ಸಮಾಜ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಜೀವನ ಚಿತ್ರಣವೇ ಬದಲಾಗುತ್ತಿದೆ. ಪ್ರಶ್ನೆ ಬದಲಾದ ಮೇಲೆ ಉತ್ತರವೂ ಬದಲಾಗಬೇಕಲ್ಲವೇ? ಹೀಗಾಗಿ ಇವತ್ತಿನ ಮಕ್ಕಳ ಆದ್ಯತೆ, ಯೋಚನೆ, ಬದುಕುವ ರೀತಿ ಎಲ್ಲವೂ ಬದಲಾಗಿದೆ. ಇನ್ಸ್ಟಂಟ್ ಯುಗದಲ್ಲಿ ಸಮಸ್ಯೆಗಳು ಮಾತ್ರ ಜಟಿಲವಾಗುತ್ತಿವೆ. ಸಮಸ್ಯೆಗೆ ಸಿಗುತ್ತಿದ್ದ ಸಮಾಧಾನ ಹಿಂದಿಗಿಂತ ಮಾತ್ರ ಇನ್ನಷ್ಟು ತಡವಾಗುತ್ತಿದೆ.

ಭಾರತೀಯ ಸಮಾಜ ಸಂಕ್ರಮಣ ಸ್ಥಿತಿಯಲ್ಲಿದೆ. ಇಲ್ಲಿ ಪೋಷಕರು ಮತ್ತು ಮಕ್ಕಳು ಇಬ್ಬರೂ ನಡೆಯುವ ಹಾದಿಯಲ್ಲಿ ಸಾಗುತ್ತಿರುವ ಗಮ್ಯ ಮರೆತಿದ್ದಾರೆ ಎನ್ನುವುದು ಮಾತ್ರ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಡಿವಿಜಿಯವರು ಕಗ್ಗದಲ್ಲಿ ಹೇಳಿರುವ 'ನಾವು ಕೇಳಿದ್ದೆಲ್ಲಾ ಭಗವಂತ ಕೊಡುತ್ತಾನೆ ಎನ್ನುವ ಗ್ಯಾರಂಟಿ ಇಲ್ಲ. ಆದರೆ, ನಮಗೆ ಏನು ಕೇಳಬೇಕು ಎನ್ನುವ ನಿಖರತೆಯಿಲ್ಲ' ಎನ್ನುವ ಮಾತು ನಿತ್ಯ ಸತ್ಯ ಎನ್ನಿಸುತ್ತಿದೆ. ಇದರೊಂದಿಗೆ ನನ್ನ ಹಲವು ನಂಬಿಕೆಗಳು ಕೂಡ ಅಲ್ಲಾಡುತ್ತಿವೆ.

ರಾಜತಾಂತ್ರಿಕತೆ ಬದಲಾಯಿಸಿದ ಮೋದಿ-ಟ್ರಂಪ್

ರಾಜತಂತ್ರ
ಅಜಿತ್ ಶೆಟ್ಟಿ ಹೆರಂಜೆ
vveditoped@gmail.com

ಅಂತಾರಾಷ್ಟ್ರೀಯ ರಾಜತಾಂತ್ರಿಕತೆ ಎಂದರೆ ಒಂದು ನೀರಸ ಕಲೆ ಎಂಬ ಭಾವನೆ ಜಗತ್ತಿನಾದ್ಯಂತ ಮನೆ ಮಾಡಿತ್ತು. ಅದು ಬೈನರಿ ಆಟ – ಅಂದರೆ ಹೌದು ಅಥವಾ ಇಲ್ಲ, ಒಂದಷ್ಟು ಸಂದರ್ಭದಲ್ಲಿ ಜಾಣ ಮೌನ. ನಾಯಕರ ಪ್ರತಿಯೊಂದು ಸಾರ್ವಜನಿಕ ನೋಟವೂ ಅಳೆದು ತೂಗಿದ್ದಾಗಿರುತ್ತಿತ್ತು. ಎಷ್ಟು ಬಾರಿ ನಕ್ಕರು, ಕೈ ಕುಲುಕಿದ ರೀತಿ ಎಂಥದ್ದು, ಯಾವ ಬೆರಳು ಮೇಲೆ ತೋರಿಸಿದರು, ಯಾವ ಕಾಲು ಮುಂದಿಟ್ಟರು, ದೇಹಭಂಗಿ ಎಷ್ಟು ತೆರೆದಿತ್ತು, ಧ್ವನಿಯ ಏರಿಳಿತ ಹೇಗಿತ್ತು – ಇವೆಲ್ಲವನ್ನೂ ಅಳೆಯಲು ದೇಹಭಾಷೆ ತಜ್ಞರು ತಯಾರಾಗಿ ಕುಳಿತಿರುತ್ತಿದ್ದರು. ರಾಜತಾಂತ್ರಿಕತೆ ಎಂಬುದು ಮೇಲ್ನೋಟಕ್ಕೆ ಅತ್ಯಂತ ಗಂಭೀರ, ಅತ್ಯಂತ ಸಂಕೀರ್ಣ, ಅತ್ಯಂತ ಗಹನವಾದ ಆಂಗ್ಲ ಭಾಷೆಯ ಕಲೆ ಎಂದೇ ಬಿಂಬಿಸಲಾಗುತ್ತಿತ್ತು. ಅದರಲ್ಲಿ ಸಾಮಾನ್ಯ ಜನರಿಗೆ ಪ್ರವೇಶವೇ ಇಲ್ಲ ಎಂಬ ವಾತಾವರಣ ಇತ್ತು. ಡಿಪ್ಲೊಮಸಿ ಎಂದರೆ ಗಣ್ಯರ ಗೋಷ್ಠಿ – ಜನಸಾಮಾನ್ಯರಿಗೆ ಅರ್ಥವಾಗುವ ಸರಕಲ್ಲ ಎಂಬ ಭಾವನೆ ಬಲವಾಗಿ ಬೇರೂರಿತ್ತು.

ಮೋದಿಗೊಡ್ಡಿದ ಸವಾಲು

2014ರಲ್ಲಿ ನರೇಂದ್ರ ಮೋದಿ ಭಾರತದ ಪ್ರಧಾನಿಯಾದಾಗ ವಿರೋಧ ಪಕ್ಷಗಳು ಮತ್ತು ಟೀಕಾಕಾರರು ಎಸೆದ ಅತ್ಯಂತ ದೊಡ್ಡ ಸವಾಲೆಂದರೆ ಗುಜರಾತ್ ಮುಖ್ಯಮಂತ್ರಿಯಾಗಿದ್ದ ವ್ಯಕ್ತಿ ಅಂತರರಾಷ್ಟ್ರೀಯ ರಾಜತಾಂತ್ರಿಕತೆಯನ್ನು ಹೇಗೆ ನಿಭಾಯಿಸುತ್ತಾರೆ? ಆರ್ಥಿಕತೆ, ಭದ್ರತೆ, ಕೋಮು ರಾಜಕಾರಣ– ಇವೆಲ್ಲ ಸಮಸ್ಯೆಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಎದುರಿಸಬಹುದು. ಆದರೆ ಜಾಗತಿಕ ವೇದಿಕೆ? ಅಲ್ಲಿ ಮೋದಿ ಉಳಿಯಲಾರರು ಎಂದು ಅಂದಿನ ಕಾಂಗ್ರೆಸ್ ಪಕ್ಷದ ದಿಗ್ಗಜ ನಾಯಕರು ಭವಿಷ್ಯ ನುಡಿದಿದ್ದರು. ಮೋದಿ ಈ ಪ್ರಶ್ನೆಗಳಿಗೆ ಮಾತಿನಲ್ಲಿ ಯಾವತ್ತೂ ಉತ್ತರಿಸಲಿಲ್ಲ. ಅವರು ಜಗತ್ತಿಗೇ ಒಂದು ಹೊಸ ಪಾಠ ಕಲಿಸಿದರು– ರಾಜತಾಂತ್ರಿಕತೆ ಎಂದರೆ ಕೇವಲ ಗಂಭೀರ ಮಾತಲ್ಲ, ಅದು ಹೃದಯದ ಭಾಷೆ ಕೂಡ. ರಾಜತಾಂತ್ರಿಕತೆ ಎಂದರೆ ಕೇವಲ ಒಪ್ಪಂದಗಳ ರಾಶಿಯಲ್ಲ, ಅದು ವೈಯಕ್ತಿಕ ಸಂಬಂಧಗಳನ್ನು ಅತ್ಯಂತ ಸಹಜವಾಗಿ ಗೌರವದಿಂದ ನೋಡುವ ಅತ್ಯಂತ ಭಾವನಾತ್ಮಕ, ಆದರೂ ಅಷ್ಟೇ ಕುಶಲ–ಪ್ರಾಯೋಗಿಕ ಕೆಲಸ ಎಂದು ಜಗತ್ತಿಗೆ ತೋರಿಸಿದರು.

ಮೋದಿ ಅವರ ರಾಜತಾಂತ್ರಿಕ ಶೈಲಿಯಲ್ಲಿ ಮೂರು ಅಂಶಗಳು ಒಟ್ಟಿಗೆ ಕೆಲಸ ಮಾಡುತ್ತವೆ– ಮೊದಲನೆಯದು ಭಾವನಾತ್ಮಕ ಸಂಪರ್ಕ, ಎರಡನೆಯದು ನಿಖರ ಪ್ರಾಯೋಗಿಕತೆ, ಮೂರನೆಯದು ಸರ್ಪ್ರೈಸ್. ಇದು ಒಂದು ವಿರೋಧಾಭಾಸ ಎಂದು ಕಾಣಬಹುದು– ಆದರೆ ಮೋದಿ ಅವರ ಶಕ್ತಿ ಇರುವುದೇ ಇಲ್ಲಿ. ಅವರು ಒಬ್ಬ ನಾಯಕನನ್ನು ಭೇಟಿ ಮಾಡಿದಾಗ, ಅದು ಕೇವಲ ಅಜೆಂಡಾ ಚರ್ಚೆ ಮಾತ್ರ ಆಗಿರುವುದಿಲ್ಲ – ಅಲ್ಲಿ ಒಂದು ವೈಯಕ್ತಿಕ ಬಾಂಧವ್ಯ ಸ್ಥಾಪನೆಯಾಗುತ್ತದೆ. ಜಪಾನಿನ ಶಿಂಜೋ ಅಬೆ ಅವರೊಂದಿಗೆ ಗುಜರಾತಿನ ಅಹಮದಾಬಾದಿನ ಬೀದಿಯಲ್ಲಿ ರೋಡ್ ಶೋ ಮಾಡಿದ ಮೋದಿ, ಇಸ್ರೇಲ್ ಭೇಟಿಯ ಸಂದರ್ಭದಲ್ಲಿ ಮರಳಿನ ಬೀಚ್‌ನಲ್ಲಿ ನೇತಾನ್ಯಾಹು ಅವರೊಂದಿಗೆ ನಡೆದ ಮೋದಿ, ಅಮೆರಿಕಾದ ಹ್ಯೂಸ್ಟನ್‌ನಲ್ಲಿ ಲಕ್ಷಾಂತರ ಜನರ ಮುಂದೆ ಟ್ರಂಪ್ ಅವರೊಂದಿಗೆ 'ಹೌಡಿ ಮೋದಿ' ನಡೆಸಿದ ರೀತಿ– ಇವು ಕೇವಲ ಚಿತ್ರಗಳಲ್ಲ. ಇವು ಒಂದು ಹೊಸ ರಾಜತಾಂತ್ರಿಕ ಭಾಷೆ.

ಮೋದಿ ಅವರ ರಾಜತಾಂತ್ರಿಕ ಶೈಲಿ ಜನಸಾಮಾನ್ಯರನ್ನು ತಲುಪುತ್ತದೆ. ಒಬಾಮಾ ಅವರೊಂದಿಗೆ ಸಾರ್ವಜನಿಕ ಚೌಕದಲ್ಲಿ ನಡೆದಾಡುವ, ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರೋನ್ ಅವರೊಂದಿಗೆ ಭೀಮ್ ಆ್ಯಪ್ ಪ್ರದರ್ಶಿಸುವ, ಫಿಜಿಯ ನಾಯಕ ಮೋದಿಯವರ ಕಾಲಿಗೆ ಬೀಳುವುದು– ಈ ಪ್ರತಿಯೊಂದು ಕ್ಷಣವೂ ಜಾಗತಿಕ ಮಾಧ್ಯಮದಲ್ಲಿ ಸ್ಥಾನ ಪಡೆಯುತ್ತದೆ. ಅದು ಮಾಡಿದ ಕೆಲಸ ಯಾವ ಔಪಚಾರಿಕ ಒಪ್ಪಂದಕ್ಕಿಂತಲೂ ಮಿಗಿಲಾದದ್ದು – ಅದು ಭಾರತದ ಬಗ್ಗೆ ಜಗತ್ತಿನ ಭಾವನೆಯನ್ನು ಬದಲಿಸಿದೆ. ಇದೇ ರೀತಿ ಅಂದು ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಅವರ ಜನ್ಮದಿನ ಹಾಗೂ ಅವರ ಮೊಮ್ಮಗಳ ವಿವಾಹದ ಸಂಭ್ರಮವಿದ್ದ ಹಿನ್ನೆಲೆಯಲ್ಲಿ ಮೋದಿ ಅವರು ನೇರವಾಗಿ ಅವರ ಪಾಕಿಸ್ತಾನಕ್ಕೆ ತೆರಳಿ ಶುಭ ಹಾರೈಸಿದರು. ಯಾವುದೇ ಪೂರ್ವಸಿದ್ಧತೆ ಇಲ್ಲದೆ ಉಭಯ ದೇಶಗಳ ನಾಯಕರು ಪ್ರೋಟೋಕಾಲ್ ಬದಿಗಿಟ್ಟು ಭೇಟಿಯಾದ ಈ 80 ನಿಮಿಷಗಳ ಘಟನೆ ಜಾಗತಿಕ ರಾಜತಾಂತ್ರಿಕ ಇತಿಹಾಸದಲ್ಲಿ ಒಂದು ಅಪರೂಪದ ಮೈಲಿಗಲ್ಲಾಗಿ ದಾಖಲಾಯಿತು.

ನಿಯಮ ಮುರಿಯುವ ಚಾಣಾಕ್ಷ

ಇನ್ನೊಂದು ಕಡೆ ಡೊನಾಲ್ಡ್ ಟ್ರಂಪ್. ಅವರು ಕೂಡ ಸಾಂಪ್ರದಾಯಿಕ ರಾಜತಾಂತ್ರಿಕ ನಿಯಮಗಳನ್ನು ಮುರಿದರು – ಆದರೆ ಸಂಪೂರ್ಣ ಭಿನ್ನ ರೀತಿಯಲ್ಲಿ. ಟ್ರಂಪ್ ಅವರ ಶೈಲಿ ಎಂದರೆ – ಯಾರಿಗೂ ಹೆದರದ ನೇರ ಮಾತು, ಮಿತ್ರ ರಾಷ್ಟ್ರಗಳನ್ನು ಸಾರ್ವಜನಿಕವಾಗಿ ತರಾಟೆಗೆ ತೆಗೆದುಕೊಳ್ಳುವುದು, ವ್ಯವಹಾರ ದೃಷ್ಟಿಕೋನದಿಂದ ಎಲ್ಲವನ್ನೂ ಅಳೆಯುವ ಮನಃಸ್ಥಿತಿ. ಉಕ್ರೇನ್‌ನ ಅಧ್ಯಕ್ಷ ಜೆಲೆನ್ಸ್ಕಿ ಅವರನ್ನು ವೈಟ್‌ಹೌಸ್‌ನಲ್ಲೇ ಸಾರ್ವಜನಿಕವಾಗಿ ಟೀಕಿಸಿದ್ದು, ನ್ಯಾಟೋ ಒಕ್ಕೂಟಕ್ಕೆ 'ನೀವು ಹಣ ನೀಡದಿದ್ದರೆ ನಾವಿಲ್ಲ' ಎಂದು ಸಾರ್ವಜನಿಕ ಹೇಳಿಕೆ, ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರೋನ್ ಅವರ ನೀತಿಯನ್ನು ಟ್ವಿಟರ್‌ನಲ್ಲೇ ಟೀಕಿಸಿದ್ದು, ಜಪಾನಿನ ಪ್ರಧಾನಿಯ ಮೇಲೆ ವ್ಯಾಪಾರ ಒತ್ತಡ, ಇಂಗ್ಲೆಂಡ್ ಪ್ರಧಾನಿಯನ್ನು ನೇರವಾಗಿ ಕುಹಕ ಮಾಡಿದ ಟ್ರಂಪ್ ಅವರ ಶೈಲಿ ಅನೇಕರಿಗೆ ಆಘಾತ ನೀಡಿತು. ಮಿತ್ರ ರಾಷ್ಟ್ರಗಳ ನಾಯಕರು ಟ್ರಂಪ್ ಅವರ ಜೊತೆ ಮಾತನಾಡಲು ಹಿಂಜರಿಯಲಾರಂಭಿಸಿದರು. ಟ್ರಂಪ್ ಜೊತೆ ಅಂತಾರಾಷ್ಟ್ರೀಯ ವೇದಿಕೆ ಹಂಚಿಕೊಳ್ಳುವ ಮುನ್ನ ನಾಯಕರು ತಮ್ಮ ತಂಡಕ್ಕೆ ಹೇಳುತ್ತಿದ್ದ ಮಾತೆಂದರೆ– 'ಟ್ರಂಪ್ ಏನು ಬೇಕಾದರೂ ಹೇಳಬಹುದು, ಎಚ್ಚರ' ಎಂದು. ಇದು ರಾಜತಾಂತ್ರಿಕ ಜಗತ್ತು ಹಿಂದೆಂದೂ ಕಾಣದ ವಾತಾವರಣ.

ಎರಡು ತುದಿಗಳ ನಡುವೆ

ಮೋದಿ ಮತ್ತು ಟ್ರಂಪ್– ಇಬ್ಬರೂ ಸಾಂಪ್ರದಾಯಿಕ ರಾಜತಾಂತ್ರಿಕ ನಿಯಮಗಳನ್ನು ಮೀರಿದವರು. ಆದರೆ ಅವರ ದಿಕ್ಕು ಸಂಪೂರ್ಣ ವಿರುದ್ಧ. ಟ್ರಂಪ್ ಅವರದ್ದು ಒರಟುತನದ, ಒತ್ತಡದ, ಲೆಕ್ಕಾಚಾರದ ರಾಜತಾಂತ್ರಿಕತೆಯಾದರೆ ಮೋದಿ ಪ್ರೀತಿ, ಭಾವನಾತ್ಮಕ ಸಂಬಂಧದಿಂದ ಮತ್ತು ಜಗತ್ತಿಗೆ ಸರ್ಪ್ರೈಸ್ ಕೊಡುವ ಮೂಲಕ ಭಿನ್ನವಾದರು. ಆದರೆ ಅತ್ಯಂತ ಸ್ವಾರಸ್ಯಕರ ಸಂಗತಿ ಏನೆಂದರೆ

ವರ್ತಮಾನದ ಭೂರಾಜಕೀಯ ಬೆಳವಣಿಗೆಯಲ್ಲಿ ತಮ್ಮ ನಡುವಿನ ಸಂಬಂಧಗಳು ಕೊಂಚ ಹಳಸಿದಾಗಲೂ ಟ್ರಂಪ್ ಎಂದೂ ಉಳಿದ ನಾಯಕರ ಜೊತೆಗೆ ನಡೆದುಕೊಂಡಂತೆ ಮೋದಿಯವರ ಜೊತೆ ನಡೆದುಕೊಳ್ಳಲಿಲ್ಲ. ಮೋದಿ ಅವರಿಗೆ ಗೊತ್ತು– ಯಾವಾಗ ಎಷ್ಟು ಹೇಳಬೇಕು, ಯಾವಾಗ ಮೌನ ಅಗತ್ಯ. ಟ್ರಂಪ್ ವಿಚಾರದಲ್ಲಿ ಅವರು ತೋರಿದ ಜಾಣ ಮೌನ ಹಾಗು ಸಂಯಮ ಸಂಬಂಧ ಹಳಸದಂತೆ ಉಳಿಯಲು ಪ್ರಮುಖ ಕಾರಣ. ಮೋದಿಯವರಿಗೆ ಪ್ರತಿ ನಾಯಕನ ವ್ಯಕ್ತಿತ್ವವನ್ನು ಓದುವ ಸಾಮರ್ಥ್ಯ ಇದೆ. ರಾಜತಾಂತ್ರಿಕತೆಯಲ್ಲಿ ಇದನ್ನು ಸಿದ್ಧಿಸಿಕೊಂಡವರು ಪ್ರಭಾವಶಾಲಿಗಳಾಗುತ್ತಾರೆ. ಟ್ರಂಪ್ ವಿಚಾರದಲ್ಲಿ ಮೋದಿಯವರ ರಾಜತಾಂತ್ರಿಕತೆ ಗೆಲ್ಲಲು ಇದು ಮುಖ್ಯ ಕಾರಣ.

ಜಗತ್ತು ಯಾವ ಮಾದರಿ ಆಯ್ಕೆ ಮಾಡಿದೆ?

ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಇದೇ ಮೇ ತಿಂಗಳಿನಲ್ಲಿ ಜಗತ್ತಿನ ಮೂರು ದಿಗ್ಗಜ ನಾಯಕರು ಕೈಗೊಂಡ ವಿದೇಶ ಪ್ರವಾಸವನ್ನು ವಿಶ್ಲೇಷಣೆ ಮಾಡಿದರೆ ಉತ್ತರ ಸಿಗುತ್ತದೆ. ಟ್ರಂಪ್– ಕ್ಸಿ ಭೇಟಿ ಮತ್ತು ಪುತಿನ್– ಕ್ಸಿ ಭೇಟಿ ಎರಡೂ ಹೆಚ್ಚಾಗಿ ಹೇಳಿಕೆಗಳಿಗೆ ಸೀಮಿತವಾದವು. ಟ್ರಂಪ್– ಕ್ಸಿ ಶೃಂಗಸಭೆಯಲ್ಲಿ ಉಭಯ ನಾಯಕರು ಸಂಬಂಧ ಸುಧಾರಿಸಿದೆ ಎಂದು ಹೊಗಳಿಕೊಂಡರಾದರೂ ನಿರ್ದಿಷ್ಟ ಸಾರ್ವಜನಿಕ ಒಪ್ಪಂದಗಳು ಅತ್ಯಲ್ಪ – ಅಮೆರಿಕದ ರಾಜತಾಂತ್ರಿಕ ತಂಡ ಬೀಜಿಂಗಿಗೆ ಹೋದಾಗ ಕೊಟ್ಟ ಉಡುಗೊರೆಗಳನ್ನು ಚೀನಾದಲ್ಲೇ ಬಿಟ್ಟು ಬಂದರೆಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಪುತಿನ್– ಕ್ಸಿ ಭೇಟಿಯಲ್ಲಿ 40ಕ್ಕೂ ಹೆಚ್ಚು ಸಹಕಾರ ಒಪ್ಪಂದಗಳಿಗೆ ಸಹಿ ಹಾಕಿದರೂ, ರಷ್ಯಾಕ್ಕೆ ತೈಲ ಕೊಳವೆ ನಿರ್ಮಾಣ ಒಪ್ಪಂದದ ನಿರೀಕ್ಷೆಯಲ್ಲಿ ಹೋಗಿದ್ದ ಕ್ಸಿ ಅವರ ಪ್ರವಾಸ ಆ ನಿರ್ದಿಷ್ಟ ಗುರಿ ಮುಟ್ಟಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ ನಿಲ್ಲುತ್ತದೆ ಮೋದಿ ಅವರ ಐದು ರಾಷ್ಟ್ರ ಪ್ರವಾಸ. ಯುಎಇ, ನೆದರ್ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿಯಲ್ಲಿ ಇಂಧನಗಳ ಪೂರೈಕೆ, ರಕ್ಷಣೆ ಮತ್ತು ನಿರ್ಣಾಯಕ ಖನಿಜಗಳ ವಿಚಾರದಲ್ಲಿ ಒಪ್ಪಂದಗಳಾದವು. ನೆದರ್ಲ್ಯಾಂಡ್ಸ್‌ನಲ್ಲಿ ಅನಿವಾಸಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿ, ವಿದೇಶದಲ್ಲಿರುವ ಭಾರತೀಯರ ಸಾಂಸ್ಕೃತಿಕ ಗುರುತಿನ ಮಹತ್ವ ಮತ್ತು ಕೌಟುಂಬಿಕ ಮೌಲ್ಯಗಳ ಬಗ್ಗೆ ಮಾತನಾಡಿದರು. 2014ರಲ್ಲಿ ಪ್ರಧಾನಿ ಆದ ತಕ್ಷಣ ನ್ಯೂಯಾರ್ಕ್‌ನ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ಭಾರತೀಯ ಡಯಾಸ್ಪೊರಾ ಸಮುದಾಯ ಕಾರ್ಯಕ್ರಮ ಆರಂಭಿಸಿದ ಮೋದಿ, ಕಳೆದ ಹನ್ನೆರಡು ವರ್ಷಗಳಲ್ಲಿ ಯಾವ ದೇಶಕ್ಕೆ ಹೋದರೂ ಈ ಪರಂಪರೆಯನ್ನು ತಪ್ಪದೆ ಪಾಲಿಸಿಕೊಂಡು ಬಂದಿದ್ದಾರೆ. ಜೊತೆಗೆ, ಈ ಐದು ರಾಷ್ಟ್ರ ಪ್ರವಾಸದಲ್ಲಿ ಅಸ್ಸಾಂನ ಮುಗಾ ರೇಷ್ಮೆ, ಜೈಪುರದ ಬ್ಲೂ ಪಾಟರಿ, ರೋಗನ್ ಕಲೆ, ಪಿಚ್ವಾಯಿ ಚಿತ್ರಕಲೆ ಸೇರಿದಂತೆ ದೇಶದ ವಿವಿಧ ಪ್ರದೇಶಗಳ ಕರಕುಶಲ ಕಲಾಕೃತಿಗಳನ್ನು ವಿದೇಶಿ ನಾಯಕರಿಗೆ ಉಡುಗೊರೆಯಾಗಿ ನೀಡಿದರು. ಭಾರತದ ಬುಡಕಟ್ಟು ಮತ್ತು ಪ್ರಾದೇಶಿಕ ಪರಂಪರೆಯನ್ನು ರಾಜತಾಂತ್ರಿಕ ಸಾಫ್ಟ್ ಪವರ್ ಆಗಿ ಬಳಸಿ ಸ್ಥಳೀಯ ಕುಶಲಕರ್ಮಿಗಳಿಗೆ ಜಾಗತಿಕ ವೇದಿಕೆ ಕಲ್ಪಿಸಿದರು. ಈ ಮೂರು ನಾಯಕರ ಪ್ರವಾಸವನ್ನು ತುಲನೆ ಮಾಡಿದಾಗ ವಿಶ್ವದ ಬಹುತೇಕ ಭೂ ರಾಜಕೀಯ ತಜ್ಞರು ಒಂದೇ ತೀರ್ಮಾನಕ್ಕೆ ಬರುತ್ತಾರೆ – ಟ್ರಂಪ್ ಒಪ್ಪಂದವಿಲ್ಲದೆ ಭೇಟಿ ಮಾಡಿ ಬಂದರು, ಕ್ಸಿ ಸಂದೇಶ ರವಾನಿಸಿ ಬಂದರು, ಆದರೆ ಮೋದಿ ಒಪ್ಪಂದ, ಸಂಬಂಧ, ಸಂಸ್ಕೃತಿ ಮತ್ತು ಸಮುದಾಯ – ನಾಲ್ಕನ್ನೂ ಒಟ್ಟಿಗೆ ತಂದರು. ಇದು ಆಧುನಿಕ ರಾಜತಾಂತ್ರಿಕ ಜಗತ್ತಿನಲ್ಲಿ ಭಾರತ ನಿರ್ಮಿಸಿಕೊಳ್ಳುತ್ತಿರುವ ವಿಶಿಷ್ಟ ಸ್ಥಾನದ ಪ್ರತೀಕ.

ಬದಲಾದ ರಾಜತಾಂತ್ರಿಕತೆ

2014ರ ಮೊದಲು ರಾಜತಾಂತ್ರಿಕತೆ ಎಂದರೆ ಗಂಭೀರ ಮುಖದ, ನೀರಸ ಮಾತಿನ, ಶೀತಲ ಕೊಠಡಿಗಳ ಕಲೆ. ನಂತರ ರಾಜತಾಂತ್ರಿಕತೆ ಜನರ ಹೃದಯ ಮುಟ್ಟುವ ಭಾಷೆಯಾಯಿತು. ಮೋದಿ ಮತ್ತು ಟ್ರಂಪ್– ಇಬ್ಬರೂ ಹಳೆಯ ನಿಯಮಗಳನ್ನು ಮೀರಿದರು. ಆದರೆ ಮೋದಿಯವರು ಅದನ್ನು ಪ್ರೀತಿಯಿಂದ ಮಾಡಿದರೆ, ಟ್ರಂಪ್ ಬೀರಿದ ಪರಿಣಾಮ ಜಗತ್ತಿನಲ್ಲಿ ಋಣಾತ್ಮಕ ಪರಿಣಾಮವನ್ನು ಬೀರಿತು. ಅತ್ಯಂತ ಮಹತ್ವದ ಸಂಗತಿ ಏನೆಂದರೆ – ಮೋದಿ ಅವರು ಒಂದೇ ಒಂದು ಪತ್ರಿಕಾಗೋಷ್ಠಿ ನಡೆಸದೆ, ಯಾವ ಪತ್ರಕರ್ತರ ಪ್ರಶ್ನೆಗಳಿಗೂ ಔಪಚಾರಿಕವಾಗಿ ಉತ್ತರಿಸದೆ, 2014ರಿಂದ 2026ರವರೆಗೆ ಜಾಗತಿಕ ವೇದಿಕೆಯಲ್ಲಿ ಅತ್ಯಂತ ಗೌರವಾನ್ವಿತ ನಾಯಕರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಇದು ಹೇಗೆ ಸಾಧ್ಯ? ಏಕೆಂದರೆ ಅವರು ತಮ್ಮ ಸ್ವಭಾವದ ಮೂಲಕ, ಸನ್ನಡತೆಯ ಮೂಲಕ, ತಮ್ಮ ವ್ಯಕ್ತಿತ್ವದ ಮೂಲಕ ದೇಶಗಳ ಗಡಿ ಮೀರಿ ಜನರ ಮನಸ್ಸನ್ನು ಗೆದ್ದರು.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಟೈಟಲ್ ಕಾರ್ಡ್: ಮತ್ತೆ ಆರಂಭ?

ನೀ ಕೊಡೆ ನಾ ಬಿಡೆ ಕೊಸರಾಟದಲ್ಲಿ ಅಂತೂ ಇಂತೂ ಅನಿವಾರ್ಯತೆಗೆ ತಲೆಬಾಗಿ ಸಿದ್ದರಾಮಯ್ಯನವರು, ಪಟ್ಟು ಬಿಡದ ತ್ರಿವಿಕ್ರಮ ಡಿಕೆಶಿಯವರಿಗೆ ಮುಖ್ಯಮಂತ್ರಿ ಪಟ್ಟವನ್ನು ಬಿಟ್ಟುಕೊಟ್ಟಿದ್ದಾರೆ. ಹೈಕಮಾಂಡ್ ಕೂಡ ನಿಟ್ಟುಸಿರುಬಿಟ್ಟಿದೆ. ಆದರೆ, ಇನ್ನೊಂದೆಡೆ ರೆಸಾರ್ಟ್ ರಾಜಕೀಯ ನಡೆಯದೇ ಹೋದರೂ ಗುಪ್ತ ಚಟುವಟಿಕೆಗಳು ಅವಿರತವಾಗಿ ಸಾಗಿವೆ. ಎಲ್ಲ ಶಾಸಕರೂ ಮೇಲ್ನೋಟಕ್ಕೆ ತ್ಯಾಗಿ, ಒಳಗೊಳಗೆ ಸಚಿವ ಪಟ್ಟಕ್ಕೆ ಟವೆಲ್! ಅನುಯಾಯಿಗಳನ್ನು ಛೂಬಿಟ್ಟು ಪರೇಡ್ ನಡೆಸಿ ಸಚಿವ ಪದವಿಗೆ ತಮ್ಮನ್ನೇ ಪರಿಶೀಲಿಸಲು ಒತ್ತಾಯ! ವ್ಯಕ್ತಿಯ ಸಾಮರ್ಥ್ಯ, ದಕ್ಷತೆಗಿಂತಲೂ ತಮ್ಮ ಸಮುದಾಯ, ಜಾತಿ, ಪಂಗಡಗಳದ್ದೇ ಹೆಗ್ಗಳಿಕೆ. ತಮಗೆ ಆಕಾಂಕ್ಷೆಯಿಲ್ಲ. ಬೆಂಬಲಿಗರ ಒತ್ತಾಯ ಎಂಬ ಸಬೂಬು. ಉಪ ಮುಖ್ಯಮಂತ್ರಿ ಆಗುವ ಹೆಬ್ಬಯಕೆ. ಯಾರಿಗೂ ಪೈಸೆಯಷ್ಟೂ ಲಾಭವಿಲ್ಲದ ಸ್ಪೀಕರ್ ಹುದ್ದೆ ಬೇಡ. ಹಾಗೂ ಹೀಗೂ ಮೊದಲ ಪಟ್ಟಿಯ ಒಂದಷ್ಟು ಜನರ ಆಯ್ಕೆಯಾದ ನಂತರ ಮುಖ್ಯಮಂತ್ರಿಯೊಂದಿಗೆ ಪ್ರಮಾಣವಚನ ಸ್ವೀಕಾರ ಸಮಾರಂಭ ಮುಗಿದ ಕ್ಷಣವೇ ಉತ್ತಮ ಖಾತೆಗಾಗಿ ಹೋರಾಟ. ಕಮಾಯಿ ಜಾಸ್ತಿ ಇರುವ ಖಾತೆಗೆ ಬಿಡ್. ಎಲ್ಲ ಸಚಿವರ ಆಯ್ಕೆ ಮುಗಿದ ನಂತರ ಸನ್ಮಾನಗಳ, ಹಾರ ತುರಾಯಿಗಳ ಮೆರವಣಿಗೆ. ಈಗ ಹೊಸ ಸಚಿವರಿಗೆ ಸರಕಾರಿ ಮನೆಗಳ ವಿತರಣೆಯ ಸಮಯ. ನನಗದೇ ಬೇಕು. ನನಗಿದೇ ಬೇಕು ಕಲರವ, ಕಲಹ. ಹೊಸ ಕಾರುಗಳ ವಿತರಣೆ. ನಿಗಮಗಳು, ಸಮಿತಿಗಳಿಗೆ ತಮಗೆ ಬೇಕಾದವರನ್ನು ತಂದು ತಮ್ಮ ಪಕ್ಕ ಕೂರಿಸುವಿಕೆ. ಅಷ್ಟರಲ್ಲಾಗಲೇ ಇನ್ನಾರು ತಿಂಗಳು ಮುಗಿದಿರುತ್ತದೆ. ರಾಜ್ಯದ ಹಣಕಾಸು ಪರಿಸ್ಥಿತಿ, ಯೋಜನೆಗಳು, ಮಾಡಬೇಕಾದ ಕೆಲಸಗಳಿಗೆ ಉಳಿದ18 ತಿಂಗಳು ಸಾಕೇ? ಇವರ ಇಷ್ಟೆಲ್ಲ ರಾಜಕೀಯ ಆಟಕ್ಕೇ ಕೋಟಿಗಟ್ಟಲೆ ಹಣ ವ್ಯಯ ವಾದರೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಎಲ್ಲಿ ಸ್ವಾಮಿ? ಈ ಪ್ರಶ್ನೆ ಕೇಳುವ ಹಕ್ಕು ನಮಗಿದೆ. ಏಕೆಂದರೆ ಹಲವು ಕಷ್ಟಗಳ ನಡುವೆ ಕೈಗೊಂದು ಕಾಲಿಗೊಂದು ಎಂದು ಸರಕಾರ ವಿಧಿಸಿರುವ ತೆರಿಗೆ ಗಳನ್ನು ನಿಯತ್ತಿನಿಂದ ಪಾವತಿಸುತ್ತಿರುವ ಬಡಪಾಯಿ ತೆರಿಗೆದಾರ ನಾನು!

– ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ಐಪಿಎಲ್: ಆರ್‌ಸಿಬಿ ಗೆಲುವು

ಆರ್‌ಸಿಬಿ ಮತ್ತೊಮ್ಮೆ ಜಯಭೇರಿ ಹೊಡೆದಿದೆ. ಅಷ್ಟೇ ಅಲ್ಲ, ಕರ್ನಾಟಕದ ಗಲ್ಲಿ–ಗಲ್ಲಿಯಲ್ಲಿ ಸಂಭ್ರಮಾಚರಣೆ! ಐಪಿಎಲ್ ಶುರುವಾದಾಗಿನಿಂದ 'ಈ ಬಾರಿ ಆರ್‌ಸಿಬಿ' ಸ್ಲೋಗನ್ ಮೊಳಗುತ್ತಲೇ ಇದೆ. ಕರ್ನಾಟಕದ ತುಂಬೆಲ್ಲ ಅದೇನು ಉತ್ಸಾಹ, ಸಂತೋಷ! ವಿಷಯ ಅದಲ್ಲವೇ ಅಲ್ಲ. ಇಷ್ಟೊಂದು ದೊಡ್ಡ ಸ್ಪರ್ಧೆಯಲ್ಲಿ ಮೊದಲನೇ ಸ್ಥಾನ ಪಡೆಯುವುದೆಂದರೆ ಸಣ್ಣ ವಿಷಯ ಅಲ್ಲವೇ ಅಲ್ಲ. ಅದಕ್ಕಾಗಿ ಈ ಸಂಭ್ರಮ. ಆದರೆ, ರಾಯಲ್ ಚಾಲೇಂಜರ್ಸ್ ಬೆಂಗಳೂರಿನಲ್ಲಿ, ಬೆಂಗಳೂರಿನ ಅಥವಾ ಕರ್ನಾಟಕದ ಎಷ್ಟು ಆಟಗಾರರು ಇದ್ದಾರೆ ಎಂಬುದನ್ನು ಅರಿತಾಗ, ನಿರಾಶೆ ಹುಟ್ಟುತ್ತದೆ. ಹೆಸರಿಗಷ್ಟೇ ಬೆಂಗಳೂರು. ಈ ಆಟಗಾರರೆಲ್ಲ ಹರಾಜಿನಲ್ಲಿ ಬಿಕ್ರಿ ಆದವರು. ಈ ಪ್ರಕ್ರಿಯೆಯಲ್ಲಿ ಯಾವ ರಾಜ್ಯದ ಆಟಗಾರರು ಇನ್ನಾರತೆಕ್ಕೆ ಸೇರುತ್ತಾರೆಂಬುದು ನಿರ್ಣಯವಾಗುವುದೂ ಅವರೆಷ್ಟು ಮೊತ್ತಕ್ಕೆ ಮಾರಾಟವಾಗಿದ್ದಾರೆ ಎಂಬುದನ್ನು ಅವಲಂಬಿಸಿರುವಾಗ, ಇನ್ನಾವ ಕ್ಲೇಮ್ ಕೆಲಸಕ್ಕೇ ಬರದು. ಹೀಗಾಗಿ ಬೆಂಗಳೂರು ತಂಡದ ಮಾಲಿಕ, ಇಲ್ಲಿಯ ಆಟಗಾರರಿಗೆ ಹೆಚ್ಚು ಮೊತ್ತ ಕೊಡಲು ಸಿದ್ಧನಾಗದ್ದರಿಂದ ಎಲ್ಲೆಲ್ಲೋ ಹಂಚಿ ಹೋಗಿದ್ದರೂ, ತಂಡ ಮಾತ್ರ ಬೆಂಗಳೂರು ಹೆಸರು ಉಳಿಸಿಕೊಂಡಿದೆ. ಇನ್ನೂ ಚೋದ್ಯ ಅಂದರೆ, ಐಪಿಎಲ್ ಪ್ರಾರಂಭವಾದಾಗ, ಕಿಂಗ್ ಫಿಶರ್ ಮಾಲಿಕ ಮಲ್ಯ, ತನ್ನ ಕಂಪನಿಯ ಹೆಸರು 'ರಾಯಲ್ ಚಾಲೆಂಜರ್ಸ್' ಎಂದು ಇಟ್ಟಿದ್ದ. ಆದರೆ, ದುರದೃಷ್ಟ, ಈಗ ಆ ವ್ಯಕ್ತಿಯೇ ತಲೆ ಮರೆಸಿಕೊಂಡು ವಿದೇಶದಲ್ಲಿ ವಾಸವಾಗಿದ್ದಾನೆ. ಆದರೂ ಹೆಸರು ಅದೇ ಇದೆ. ಆಟದಲ್ಲಿ ಗೆದ್ದಾಗ ಸಂತೋಷಪಡುವುದೂ ಸಹಜ. ಆದರೆ, ನಮ್ಮವರೇ ಇಲ್ಲದ ನಮ್ಮ ತಂಡ ಗೆದ್ದಾಗ ಇಷ್ಟೊಂದು ಬೀಗುವುದು ಸರಿಯೇ? ಇದಕ್ಕೆ ಪರಿಹಾರ ಮುಂದಿನ ದಿನಗಳಲ್ಲಿ ಸಿಗಬಹುದೇ?

– ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ಯುವ ಜನರಿಗೆ ಸಿಗಲಿ ಆದ್ಯತೆ

ಬುಧವಾರ ರಚನೆ ಆಗಲಿರುವ ಡಿಕೆ ಶಿವಕುಮಾರ್ ನೇತೃತ್ವದ ನೂತನ ಮಂತ್ರಿ ಮಂಡಲದಲ್ಲಿ ಯುವ ಪಡೆ ಒಳಗೊಂಡ ಸಂಪುಟಕ್ಕೆ ಪ್ರಾಮುಖ್ಯತೆಯ ಅವಕಾಶ ಕಲ್ಪಿಸಬೇಕಿದೆ. ಯಾವುದೇ ಸರಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತ ಭ್ರಷ್ಟಾಚಾರ ರಹಿತ, ಸಾರ್ವಜನಿಕರಿಗೆ ಸದಾ ಸ್ಪಂದಿಸುವ ನಿಷ್ಠೆ, ಬದ್ಧತೆ ತೋರುವ ಗುಣ ಇರುವ ಯುವ ಉತ್ಸಾಹಿ ಹೊಸ ಮುಖಗಳಿಗೆ ಮಣೆ ಹಾಕಬೇಕಿದೆ. ಕಳೆದ ಮೂರು ವರ್ಷಗಳ ಸಿದ್ದರಾಮಯ್ಯ ಅವಧಿಯಲ್ಲಿ ಬಹುತೇಕರು 60 ವರ್ಷ ಮೀರಿದವರೆ ಸಚಿವರಾಗಿದ್ದರು ಇದು ಉಳಿದ ಎರಡು ವರ್ಷಕ್ಕೂ ಪುನರಾವರ್ತನೆ ಆಗಬಾರದು. ಏಕೆಂದರೆ, ಇವರುಗಳಿಂದ ಹೆಚ್ಚಿನ ಗುಣ ಮಟ್ಟದ ಕಾರ್ಯಕ್ಷಮತೆ ಬಯಸಲು ಅಸಾಧ್ಯ. ಸಾರ್ವಜನಿಕರ ಸಮಸ್ಯೆಗಳನ್ನು ಕುಂತಲ್ಲೇ ನಿಂತಲ್ಲೇ ಪರಿಹರಿಸುವ ಮೂಲಕ ಅತ್ಯಂತ ಹೆಚ್ಚು ಉತ್ಸಾಹಿಯಾಗಿ ಜನರ ನಡುವೆ ಬೆರೆಯುವ ಸರಳತೆಯಿಂದ ಆಲಿಸುವ ರಾಜ್ಯಾದ್ಯಂತ ಪಾದರಸದಂತೆ ಜನರ ಸಮಸ್ಯೆಗಳನ್ನು ಆಲಿಸುವ ಯುವ ಉತ್ಸಾಹಿ ನಾಯಕರು ಸಚಿವರಾಗಬೇಕು. ಸದ್ಯ, ನೆರೆಯ, ತಮಿಳುನಾಡಿನಲ್ಲಿ ನೂತನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಟಿವಿಕೆ ನೇತೃತ್ವದ ಮಂತ್ರಿ ಮಂಡಲ ಯುವ ಪಡೆ ಒಳಗೊಂಡ ಸಂಪುಟ ಶೈಲಿಯ ಸರಕಾರದ ಕಾರ್ಯ ವೈಖರಿಯ ಶೈಲಿ ಇಡೀ ದೇಶಕ್ಕೆ ಮಾದರಿ ಆಗಿ ಯುವ ಜನರ ಆಶೋತ್ತರಗಳಿಗೆ ಕಾರ್ಯನಿರ್ವಹಿಸುತ್ತಿದೆ. ಬಹುತೇಕರು 40 ವರ್ಷ ವಯಸ್ಸಿನ ಒಳಗಿನವರಾಗಿದ್ದು ನಿಜಕ್ಕೂ ಇದು ಶ್ಲಾಘನೀಯ. ಜನರ ನಡುವಿನ ಕೊಂಡಿಯಾಗಿ ಸಮಸ್ಯೆಗಳನ್ನು ಪರಿಹರಿಸುವ ಹಗಲಿರುಳು ಕೆಲಸ ಮಾಡುವ ಯುವ ಶಾಸಕರನ್ನು ಗುರುತಿಸಿ ಸಚಿವರಾಗಿ ಮಾಡಿದರೆ ರಾಜ್ಯಾದ್ಯಂತ ಇನ್ನಷ್ಟು ಜನಪರ ಕೆಲಸ ಕಾರ್ಯಗಳನ್ನು ಮಾಡಲು ಪ್ರಯೋಜನವಾಗಲಿದೆ. ಸಚಿವ ಸ್ಥಾನ ನಿಭಾಯಿಸುವ ಸಾಮರ್ಥ್ಯ ಹೊಂದಿರುವ ಕಿರಿಯ ಶಾಸಕರುಗಳಿಗೆ ಆದ್ಯತೆ ಸಿಗಲಿ.

– ಅನಿಲ್ ಕುಮಾರ್, ನಂಜನಗೂಡು

ಬ್ರಹ್ಮಾನಂದಂ ಪುಸ್ತಕ ನಿರೀಕ್ಷೆ

ಈ ವಾರದ ವಿಶ್ವವಾಣಿ ವಿರಾಮ ಪುರವಣಿ ಕೈಗೆತ್ತಿಕೊಳ್ಳುತ್ತಿದ್ದಂತೆ ಕಣ್ಣಿಗೆ ಬಿದ್ದಿದ್ದು ವಿಶ್ವೇಶ್ವರ ಭಟ್ಟರ ಬ್ರಹ್ಮಾನಂದಂ ಪುಸ್ತಕದ ಆಯ್ದ ಭಾಗ 'ಅಳುವ ಕಡಲೊಳು ತೇಲಿಬಂದ ನಗೆಯ ಹಾಯಿ ದೋಣಿ'. ಕಳೆದೊಂದು ವಾರದಿಂದ ವಿಶ್ವವಾಣಿ ಪತ್ರಿಕೆಯಲ್ಲಿ 'ನಾನು ನಿಮ್ಮ ಬ್ರಹ್ಮಾನಂದಂ' ಪುಸ್ತಕದ ಬಗೆಗಿನ ಪ್ರಚಾರ ಕುತೂಹಲ ಕೆರಳಿಸಿತ್ತು. ಭಟ್ಟರು ಹೇಗೆ ಅನುವಾದಿಸಿದ್ದಾರೋ? ಅನುವಾದಕ್ಕೆ ಸೂಕ್ತ ಆಯ್ಕೆ ಅಂತ ತೀರ್ಮಾನಿಸಿ ಎತ್ತಿಕೊಳ್ಳುವಾಗ ಮೂಲ ಕೃತಿ ಓದುಗರಲ್ಲಿ ಆಸಕ್ತಿ ಹುಟ್ಟಿಸಿ ಕೊಂಡು ಓದಲು ಪ್ರೇರೇಪಿಸುತ್ತದೆ ಮತ್ತೆ ಅಪಾರ ಓದುಗರನ್ನು ಆಕರ್ಷಿಸುವಷ್ಟು ಹೂರಣ ಈ ಕತೆಯಲ್ಲಿದೆ ಎನ್ನುವ ತೀರ್ಮಾನಕ್ಕೆ ಬಂದು ಭಟ್ಟರು ಅನುವಾದಕ್ಕೆ ಎತ್ತಿಕೊಂಡಿದ್ದಾರೆ ಮತ್ತು ಭಟ್ಟರ ಆಯ್ಕೆ ಯಾವತ್ತೂ ತೂಕದ್ದಾಗಿರುತ್ತದೆ ಅನ್ನುವ ಕುತೂಹಲದಿಂದಲೇ ಲೇಖನ ಓದಲು ಶುರುವಿಟ್ಟರೆ ಕೊನೆಯ ಪದದವರೆಗೂ ಬಿಡದೇ ಓದಿಸಿಕೊಂಡು ಹೋಯಿತು. ಇಷ್ಟೊಂದು ಬಿಡವಿಲ್ಲದ ಕೆಲಸಗಳ ನಡುವೆ ಭಟ್ಟರು ಜಿತದಲ್ಲಿ ಕುಳಿತು ಅನುವಾದ ಮಾಡಿದುದರ ಬಗ್ಗೆ ಅಸೂಯೆ, ಹೊಟ್ಟೆಕಿಚ್ಚಿಗಿಂತ ಹೆಚ್ಚಾಗಿ ಮೆಚ್ಚುಗೆ ತೂಕ ಜಾಸ್ತಿ ಆಗಿ ಈ ನಾಲ್ಕು ಸಾಲುಗಳು.

– ರಾಘವೇಂದ್ರ ಎಸ್. ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 319



ವಿಶ್ವವಾಣಿ ಪುಸ್ತಕ
QR CODE ಸ್ಕ್ಯಾನ್ ಮಾಡಿ
ಫೋನ್ ಪೇ/ ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ.
ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966
₹375

ಸಮಾಚಾರ ಸಣ್ಣದಲ್ಲ

ಮಹಾರಾಷ್ಟ್ರ ಗೃಹಲಕ್ಷ್ಮೀ ಯೋಜನೆ: 80 ಲಕ್ಷ ಮಹಿಳೆಯರಿಗೆ ಕೊಕ್

ಮುಂಬೈ: ಮಹಾರಾಷ್ಟ್ರದಲ್ಲಿ ಲಾಡ್ಕಿ ಬಹೀಣ (ಕರ್ನಾಟಕದ ಗೃಹಲಕ್ಷ್ಮೀ ಮಾದರಿ ಯೋಜನೆ) ಯೋಜನೆಯಲ್ಲಿ 80 ಲಕ್ಷ ಮಹಿಳೆಯರನ್ನು ಫಡ್ನವೀಸ್ ಸರ್ಕಾರ ಕೈಬಿಟ್ಟಿದೆ. ವಿಧಾನಸಭೆ ಚುನಾವಣೆಗೆ ಮುನ್ನ ಮಹಿಳಾ ಮತ ಸೆಳೆಯಲು ಮೈತ್ರಿಕೂಟ ಪ್ರತಿಮಹಿಳೆಗೆ ಮಾಸಿಕ 1500 ರು. ಕೊಡುವುದಾಗಿ ಘೋಷಿಸಿತ್ತು. ಇದೀಗ ನಕಲಿ ಫಲಾನುಭವಿಗಳ ಪತ್ತೆಗೆ ಇ-ಕೆವೈಸಿ ಕಡ್ಡಾಯಗೊಳಿಸಿದ್ದು, ಈ ಪ್ರಕ್ರಿಯೆ ಪೂರ್ಣಗೊಳಿಸದ 80 ಲಕ್ಷ ಮಹಿಳೆಯರನ್ನು ಯೋಜನೆಯಿಂದ ಕೈಬಿಡಲಾಗಿದೆ. ಯೋಜನೆಯಲ್ಲಿ ಈ ಮೊದಲಿದ್ದ 2.5 ಕೋಟಿ ಫಲಾನುಭವಿಗಳ ಸಂಖ್ಯೆ ಈಗ 1.7 ಕೋಟಿಗೆ ಇಳಿದಿದೆ. ಸುಮಾರು 50-55 ಲಕ್ಷ ಮಹಿಳೆಯರು ಇ-ಕೆವೈಸಿ ಪೂರ್ಣಗೊಳಿಸಿಲ್ಲ. ಸುಮಾರು 12 ಲಕ್ಷ ಮಹಿಳೆಯರು 2.5 ಲಕ್ಷ ವಾರ್ಷಿಕ ಆದಾಯ ಮಿತಿಮೀರಿದ್ದು, ಐಟಿ ಪಾವತಿಸುವವರಾಗಿದ್ದಾರೆ. 4.5 ಲಕ್ಷಕ್ಕೂ ಹೆಚ್ಚು ಮಹಿಳೆಯರು 65 ವರ್ಷ ವಯೋಮಿತಿ ಮೀರಿದ್ದರೆ, ಸುಮಾರು 5 ಲಕ್ಷ ಮಹಿಳೆಯರು ಈಗಾಗಲೇ 'ನಮೋ ಶೇತ್ಕರಿ' (ರೈತ) ಯೋಜನೆ ಸೌಲಭ್ಯ ಪಡೀತಿದ್ದಾರೆ.

ಯುಪಿಎಸ್‌ಸಿ ನಕಲಿ ಜಾಹೀರಾತು: ಕೇಂದ್ರ ಸರಕಾರದಿಂದ ದಂಡ

ದೆಹಲಿ: ಯುಪಿಎಸ್‌ಸಿ ನಾಗರಿಕ ಸೇವೆಗಳ ಪರೀಕ್ಷೆ-2023ರ ಫಲಿತಾಂಶದ ಬಗ್ಗೆ ಸುಳ್ಳು ಹಾಗೂ ದಾರಿ ತಪ್ಪಿಸುವ ಜಾಹೀರಾತು ಪ್ರಕಟಿಸಿದ್ದಕ್ಕಾಗಿ ಖಾಸಗಿ ಕೋಚಿಂಗ್ ಸಂಸ್ಥೆಯೊಂದಕ್ಕೆ 'ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ' ₹7 ಲಕ್ಷ ದಂಡ ವಿಧಿಸಿದೆ. ಯುಪಿಎಸ್‌ಸಿ ಅಭ್ಯರ್ಥಿಗಳ ಕೋರ್ಸ್‌ಗಳ ಸ್ವರೂಪದ ಬಗ್ಗೆ ತರಬೇತಿ ಸಂಸ್ಥೆ ವಾಸ್ತವ ಮರೆಮಾಚಿ ದಾರಿ ತಪ್ಪಿಸುವ ಜಾಹೀರಾತು ಪ್ರಕಟಿಸುತ್ತ ಗ್ರಾಹಕ ರಕ್ಷಣಾ ಕಾಯ್ದೆ 2019ರ ನಿಯಮ ಉಲ್ಲಂಘಿಸಿತ್ತು. ಈ ಹಿನ್ನೆಲೆಯಲ್ಲಿ ಸಿಸಿಪಿಎ ವಾಜಿರಾಮ್ ಮತ್ತು ರವಿ ಐಎಎಸ್ ಕೋಚಿಂಗ್ ಸೆಂಟರ್‌ಗೆ ಈ ದಂಡ ವಿಧಿಸಿ ಆದೇಶ ಹೊರಡಿಸಿದೆ. ಈ ಕೋಚಿಂಗ್ ಸಂಸ್ಥೆ ಯುಪಿಎಸ್‌ಸಿ ನಾಗರಿಕ ಸೇವೆಗಳ ಪರೀಕ್ಷೆ (ಸಿಎಸ್‌ಇ) 2023ರ ಯಶಸ್ವಿ ಅಭ್ಯರ್ಥಿಗಳ ಹೆಸರು, ಚಿತ್ರ ಬಳಸಿಕೊಂಡಿದ್ದಲ್ಲದೇ, ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ನಿರ್ದಿಷ್ಟ ಕೋರ್ಸ್‌ಗಳ ಮಾಹಿತಿ ಮರೆಮಾಚಿರುವುದು ಗೊತ್ತಾಗಿದೆ. ಹೇಗೆ ವಂಚನೆ?: ಯುಪಿಎಸ್‌ಸಿ ಸಿಎಸ್‌ಇ 2023ರ ಘೋಷಣೆ ನಂತರ ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಗ್ರ 10ರಲ್ಲಿ 8 ಶ್ರೇಯಾಂಕ ಪಡೆದವರು ವಾಜಿರಾಮ್ ಮತ್ತು ರವಿಯವರಿಂದ ಬಂದವರು, ಅಗ್ರ 50ರಲ್ಲಿ 37 ರ್‍ಯಾಂಕ್ ಹೊಂದಿರುವವರು ವಾಜಿರಾಮ್ ಮತ್ತು ರವಿಯವರಿಂದ ಬಂದವರು ಎಂದು ಪ್ರಕಟಿಸಲಾಗಿತ್ತು. ವಾಸ್ತವದಲ್ಲಿ ಹೀಗಿಲ್ಲ ಎಂದು ತಿಳಿದುಬಂದಿದೆ.



ಅಕ್ರಮ ಮಾನವ ಸಾಗಣೆ: ಮಹತ್ವದ ತೀರ್ಪು ನೀಡಿದ ಸರ್ವೋಚ್ಚ ಪೀಠ

ಲೈಂಗಿಕ ವೃತ್ತಿನಿರತರ ಬಂಧನ ಸಲ್ಲ; ಪೊಲೀಸರಿಂದ ಶೋಷಣೆಗೆ ತಡೆ

ಸ್ವಯಂಪ್ರೇರಿತ ಲೈಂಗಿಕ ವೃತ್ತಿ ಅಕ್ರಮವಲ್ಲ: ಸುಪ್ರೀಂ ಕೋರ್ಟ್

ದೆಹಲಿ: ಸ್ವಯಂಪ್ರೇರಿತವಾಗಿ ಲೈಂಗಿಕವೃತ್ತಿಯಲ್ಲಿ ತೊಡಗಿರುವ ವಯಸ್ಕರನ್ನು ಪೊಲೀಸರು ಗುರಿ ಮಾಡಬಾರದು ಅಥವಾ ಅವರನ್ನು ಬಲವಂತವಾಗಿ ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಬಾರದು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಲೈಂಗಿಕ ಶೋಷಣೆಗಾಗಿ ಮಾನವ ಕಳ್ಳಸಾಗಣೆಗೆ ಒಳಗಾದ ಸಂತ್ರಸ್ತರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ.ಪರ್ದಿವಾಲಾ ಮತ್ತು ಆರ್.ಮಹಾದೇವನ್ ಅವರಿದ್ದ ಪೀಠವು ಈ ಆದೇಶ ಹೊರಡಿಸಿದೆ. ಸ್ವಯಂಪ್ರೇರಿತ ಲೈಂಗಿಕ ವೃತ್ತಿ ಮಾಡುವ ವಯಸ್ಕರ ಒಪ್ಪಿಗೆ ಹಾಗೂ ಸ್ವಾಯತ್ತತೆಯನ್ನು ಕಾನೂನು ಪ್ರಕ್ರಿಯೆಗಳಲ್ಲಿ ಪ್ರಮುಖವಾಗಿ ಪರಿಗಣಿಸಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಪೊಲೀಸ್ ದೌರ್ಜನ್ಯಕ್ಕೆ ಬ್ರೇಕ್: ಸುಮಾರು 70 ವರ್ಷಗಳಷ್ಟು ಹಳೆಯದಾದ 'ಅಕ್ರಮ ಸಾಗಣೆ(ತಡೆ) ಕಾಯ್ದೆ'ಯನ್ನು ವಿಶ್ಲೇಷಿಸಿದ ಸುಪ್ರೀಂ ಕೋರ್ಟ್, ಈ ಕಾನೂನು ಸ್ವಯಂಪ್ರೇರಿತವಾಗಿ ಲೈಂಗಿಕ ವೃತ್ತಿಮಾಡುವ ವಯಸ್ಕರ ಮೇಲೆ ಕ್ರಮ ಜರುಗಿಸಲು ಪೊಲೀಸರಿಗೆ ಅಧಿಕಾರ ನೀಡುವುದಿಲ್ಲ ಎಂದು ಹೇಳಿದೆ. ಏಕೆಂದರೆ ಭಾರತದಲ್ಲಿ ಸ್ವಂತ ಇಚ್ಛೆಯಿಂದ ಲೈಂಗಿಕ ವೃತ್ತಿ ಮಾಡುವುದು ಕಾನೂನುಬಾಹಿರವಲ್ಲ. ವೇಶ್ಯಾಗೃಹ ನಡೆಸುವುದು ಕಾನೂನುಬಾಹಿರ ಹೌದು, ಆದರೆ ದಾಳಿಯ ಸಂದರ್ಭದಲ್ಲಿ ಅಲ್ಲಿ ಸಿಗುವ ಸ್ವಯಂಪ್ರೇರಿತ ಲೈಂಗಿಕ ಕಾರ್ಯಕರ್ತರನ್ನು ಸಂತ್ರಸ್ತರನ್ನಾಗಿ ಬಿಂಬಿಸಬಾರದು ಅಥವಾ ಅವರನ್ನು ವಶಕ್ಕೆ ಪಡೆಯಬಾರದು ಎಂದು

ನ್ಯಾಯಪೀಠ ತಿಳಿಸಿದೆ. ಸ್ವಂತ ಇಚ್ಛೆಯಿಂದ ಈ ವೃತ್ತಿಯಲ್ಲಿರುವಾಗ ಅವರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಆದ್ದರಿಂದ ಪೊಲೀಸರು ಅವರಿಗೆ ಕಿರುಕುಳ ನೀಡಬಾರದು ಎಂದು ಕೋರ್ಟ್ ಖಡಾಖಂಡಿತವಾಗಿ ಹೇಳಿದೆ.

ಬಲವಂತದ ಪುನರ್ವಸತಿ ತಪ್ಪು: ಯಾವುದೇ ಲೈಂಗಿಕ ಕಾರ್ಯಕರ್ತರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಪುನರ್ವಸತಿ ಕೇಂದ್ರಗಳಿಗೆ ಅಥವಾ ರಕ್ಷಣಾ ಗೃಹಗಳಿಗೆ ಕಳುಹಿಸುವಂತಿಲ್ಲ. ಪುನರ್ವಸತಿ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದ್ದರೂ, ಅದನ್ನು ಯಾರ ಮೇಲೂ ಬಲವಂತವಾಗಿ ಹೇರುವಂತಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಐಟಿಪಿಎ ಕಾಯ್ದೆಯ ಸೆಕ್ಷನ್ 17ರ ಅಡಿಯಲ್ಲಿ ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುವುದನ್ನು ಕೋರ್ಟ್ ತಳ್ಳಿಹಾಕಿದೆ. ಕಳ್ಳಸಾಗಣೆಗೆ ಒಳಗಾದವರು, ಬಲವಂತವಾಗಿ ಸಿಲುಕಿದವರು ಮತ್ತು ಸ್ವಯಂಪ್ರೇರಿತವಾಗಿ ವೃತ್ತಿ ಮಾಡುವವರು ಎಲ್ಲರನ್ನೂ ಒಂದೇ ರೀತಿ ಪರಿಗಣಿಸುವುದು ತಪ್ಪು. ಸಂತ್ರಸ್ತರನ್ನು ಕೇವಲ ರಕ್ಷಣೆ ಮತ್ತು ಪುನರ್ವಸತಿ ವಸ್ತುವಿನಂತೆ ನೋಡದೆ, ಅವರ ವೈಯಕ್ತಿಕ ಆಯ್ಕೆ ಮತ್ತು ಘನತೆಯನ್ನು ಗೌರವಿಸಿ 'ಸಂತ್ರಸ್ತರ ರಕ್ಷಣಾ ಯೋಜನೆ' ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

- 70 ವರ್ಷ ಹಳೆಯ ಐಟಿಪಿಎ (ಅಕ್ರಮ ಮಾನವ ಸಾಗಣೆ) ಕಾಯ್ದೆಗೆ ವಿವರಣೆ ನೀಡಿದ ಪೀಠ
- ವೇಶ್ಯಾವಾಟಿಕೆ ನಡೆಸುವುದು ತಪ್ಪು, ಆದರೆ ಸಮ್ಮತಿಯಿಂದ ಅಲ್ಲಿ ಲೈಂಗಿಕಕ್ರಿಯೆ ನಡೆಸುವವರನ್ನು ಬಂಧಿಸುವುದು ತಪ್ಪಾಗುತ್ತದೆ
- ಅಕ್ರಮವಾಗಿ ಸಾಗಣೆಗೊಳಗಾದವರು, ಬಲವಂತಕ್ಕೆ ಒಳಪಟ್ಟವರ ರಕ್ಷಣೆ ಸರಿ. ಸ್ವಯಿಚ್ಛೆಯಿಂದ ಕ್ರಿಯೆಯಲ್ಲಿ ತೊಡಗಿದವರ ಬಂಧನ ಬೇಡ

ಚಿನ್ನ ಖರೀದಿ ಕಡಿಮೆ ಮಾಡಲು ಮೋದಿ ಮನವಿ

ಆಮದು ಸುಂಕ ಏರಿಕೆ ಸೇರಿ ಕುಗ್ಗಿದ ಚಿನ್ನ ಖರೀದಿ

ದೇಶದ ಚಿನ್ನದ ಆಮದು ಪ್ರಮಾಣ ಶೇ.70 ಇಳಿಕೆ

ಬೆಂಗಳೂರು: ದೇಶದಲ್ಲಿ ಚಿನ್ನದ ಖರೀದಿ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಚಿನ್ನದ ಆಮದು ಪ್ರಮಾಣದಲ್ಲೂ ಭಾರಿ ಇಳಿಕೆ ಕಂಡುಬಂದಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಭಾರತ 27 ಟನ್ ಚಿನ್ನವನ್ನು ಆಮದು ಮಾಡಿಕೊಂಡಿತ್ತು. ಆದರೆ ಈ ಬಾರಿ ಕೇವಲ 7.5 ಟನ್ ಚಿನ್ನ ಮಾತ್ರ ಆಮದಾಗಿದೆ ಎಂದು ವರದಿಗಳು ತಿಳಿಸಿವೆ. ಇದರೊಂದಿಗೆ ಚಿನ್ನದ ಆಮದು ಪ್ರಮಾಣದಲ್ಲಿ ಸುಮಾರು 70% ಇಳಿಕೆ ದಾಖಲಾಗಿದೆ.

ಕರ್ನಾಟಕ ರಾಜಧಾನಿ ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಚಿನ್ನದ ವ್ಯಾಪಾರ 50%ರಿಂದ 70% ಕುಸಿದಿದೆ ಎಂದು ಚಿನ್ನಾಭರಣ ವ್ಯಾಪಾರಿಗಳು ತಿಳಿಸಿದ್ದಾರೆ. ಚಿನ್ನದ ಮೇಲಿನ ಆಮದು ಸುಂಕ ಹೆಚ್ಚಳವಾದ ಬಳಿಕ ಚಿನ್ನದ ವ್ಯಾಪಾರದಲ್ಲಿ ಕುಸಿತ ಕಂಡುಬಂದಿದೆ ಎಂದು ವ್ಯಾಪಾರ ವಲಯ ತಿಳಿಸಿದೆ. ಬೇಡಿಕೆ ಕಡಿಮೆಯಾಗಿರುವ ಕಾರಣ ಚಿನ್ನಾಭರಣ ಅಂಗಡಿಗಳಲ್ಲೂ ವಹಿವಾಟು ನಿರೀಕ್ಷಿತ ಮಟ್ಟದಲ್ಲಿ ನಡೆಯುತ್ತಿಲ್ಲ ಎಂದು ಹೇಳಲಾಗಿದೆ. ಅಧಿಕ ಮಾಸದ ಹಿನ್ನೆಲೆ ಮದುವೆ ಹಾಗೂ ಇತರ ಶುಭಕಾರ್ಯಗಳು ಕಡಿಮೆಯಾಗಿರುವುದರಿಂದ ಚಿನ್ನದ ಬೇಡಿಕೆ ಇನ್ನೂ ಇಳಿಕೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರಾಚ್ಯ ಬಿಕ್ಕಟ್ಟು ಮತ್ತು ಜಾಗತಿಕ ಇಂಧನ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ, ದೇಶದ ಆರ್ಥಿಕತೆಯನ್ನು ರಕ್ಷಿಸಲು ಪ್ರಮುಖ ಮಿತವ್ಯಯ ಕ್ರಮಗಳನ್ನು ಪಾಲಿಸುವಂತೆ ದೇಶದ ಜನರಿಗೆ ಕರೆ ನೀಡಿದ್ದರು. ಈ ಮಿತವ್ಯಯ ಕ್ರಮಗಳಲ್ಲಿ ಚಿನ್ನ ಖರೀದಿಯನ್ನು ಕಡಿಮೆ

ಮಾಡುವುದು ಸಹ ಪ್ರಮುಖವಾಗಿತ್ತು. ಜಗತ್ತಿನಲ್ಲೇ ಹೆಚ್ಚು ಚಿನ್ನವನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳಲ್ಲಿ ಚೀನಾ ಮೊದಲನೇ ಸ್ಥಾನದಲ್ಲಿದ್ದು, ಭಾರತ ಎರಡನೇ ಸ್ಥಾನದಲ್ಲಿದೆ.

ದೇಶದಲ್ಲಿ ಮಧ್ಯಮವರ್ಗದವರಿಂದ ಹಿಡಿದು ಪ್ರತೀ ಭಾರತೀಯನೂ ಚಿನ್ನದ ಮೇಲೆ ಹೂಡಿಕೆ ಮಾಡುವುದರಿಂದ ಚಿನ್ನಕ್ಕೆ ಹೆಚ್ಚಿನ ಬೇಡಿಕೆ ಇದೆ. ಆದರೆ ಇದರಿಂದ ಆಮದು ಶುಲ್ಕಕ್ಕೆ ಹೆಚ್ಚಿನ ಹಣ ವ್ಯಯವಾಗುತ್ತದೆ. ಚಿನ್ನ ಕೊಳ್ಳುವಾಗ ಡಾಲರ್ ಪಾವತಿ ಮಾಡಬೇಕಾಗಿರುವುದರಿಂದ ಅದರ ಮೌಲ್ಯ ಹೆಚ್ಚಾಗಿ, ರುಪಾಯಿ ಮೌಲ್ಯ ಕುಸಿಯುತ್ತಿದೆ. ಇದರಿಂದ ದೇಶದ ಆರ್ಥಿಕ ವ್ಯವಸ್ಥೆ ನಿಯಂತ್ರಣ ಕಳೆದುಕೊಳ್ಳುತ್ತದೆ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿಯವರು ಮಿತವ್ಯಯ ಕರೆ ನೀಡಿದ್ದರು. ಇದರನುಸಾರ ಭಾರತೀಯರು ಎಷ್ಟೇ ಆಭರಣ ಪ್ರಿಯರಾಗಿದ್ದರೂ ಚಿನ್ನದ ಮೇಲಿನ ವ್ಯಾಮೋಹವನ್ನು ಕೆಲ ದಿನಗಳ ಕಾಲ ಬದಿಗಿಟ್ಟು ಬಂಗಾರ ಖರೀದಿಯನ್ನು ಕಡಿಮೆ ಮಾಡಿದ್ದಾರೆ.

ಭಾರತದೊಂದಿಗಿನ ಭೂವಿವಾದ ಸೌಹಾರ್ದಪೂರ್ಣ ಇತ್ಯರ್ಥಕ್ಕೆ ಬಾಲೆನ್ ಶಾ ಒಲವು

ನಮ್ಮಿಂದಲೂ ಅತಿಕ್ರಮಣ: ನೇಪಾಳ ಪ್ರಧಾನಿ

ಕಠ್ಮಂಡು: ನೇಪಾಳ ಪ್ರಧಾನಿ ಬಾಲೇನ್ ಶಾ ಅವರು, ಭಾರತ ಮಾತ್ರವಲ್ಲ, ನೇಪಾಳವೂ ಭಾರತದ ಭೂಪ್ರದೇಶವನ್ನು ಅತಿಕ್ರಮಿಸಿದೆ ಎಂದು ಸಂಸತ್ತಿನಲ್ಲಿ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಈ ದೀರ್ಘಕಾಲದ ಗಡಿ ವಿವಾದವನ್ನು ಇತಿಹಾಸಕಾರರು ಮತ್ತು ತಜ್ಞರ ಸಹಾಯದಿಂದ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಉಭಯ ದೇಶಗಳು ಒಪ್ಪಿಕೊಂಡಿವೆ ಎಂದು ಅವರು ತಿಳಿಸಿದ್ದಾರೆ.

'ಭಾರತವು ನಮ್ಮ ಲಿಪುಲೇಖ್ ಪಾಸ್ ಸೇರಿ ಹಲವು ಸ್ಥಳ ಅತಿಕ್ರಮಿಸಿಕೊಂಡಿದೆ. ಲಿಪುಲೇಖ್ ನಮ್ಮದು' ಎಂದು ಈ ಹಿಂದೆ ಹೇಳಿ ವಿವಾದ ಸೃಷ್ಟಿಸಿದ್ದ ನೇಪಾಳ ಪ್ರಧಾನಿ ಬಾಲೇನ್ ಶಾ, ಇದೀಗ ಬರೀ ಭಾರತ ಮಾತ್ರ ನಮ್ಮ ಭೂಮಿಯನ್ನು ಅತಿಕ್ರಮಿಸಿಕೊಂಡಿಲ್ಲ, ನೇಪಾಳವೂ ಭಾರತದ ಹಲವಾರು ಸ್ಥಳಗಳಲ್ಲಿ ಅತಿಕ್ರಮಣ ಮಾಡಿದೆ' ಎಂದು ಹೇಳಿಕೆ ನೀಡಿದ್ದಾರೆ. ಬಾಲೆನ್ ಅವರ ಹೇಳಿಕೆ ನೇಪಾಳದ ವಿಪಕ್ಷಗಳ ಆರೋಪಕ್ಕೆ ಗುರಿಯಾಗಿದೆ.

ನೇಪಾಳ ಸಂಸತ್ತಿನಲ್ಲಿ ಭಾಷಣ ಮಾಡಿದ ಅವರು, 'ನಾನು ಇತ್ತೀಚೆಗೆ ಪ್ರಧಾನಿಯಾದ ನಂತರವೇ ತಿಳಿದ ಒಂದು ಸಂಗತಿಯ ಬಗ್ಗೆ ನಿಮಗೆ ಆಶ್ಚರ್ಯವಾಗುತ್ತದೆ. ನೇಪಾಳವೂ ಭಾರತದ ಹಲವಾರು ಸ್ಥಳಗಳಲ್ಲಿ ಅತಿಕ್ರಮಣ ಮಾಡಿಕೊಂಡಿದೆ ಎಂಬುದೇ ಆ ವಿಷಯ' ಎಂದರು. ಎರಡೂ ದೇಶಗಳು ವಾಸ್ತವವನ್ನು ಅಧ್ಯಯನ ಮಾಡಿ ಸ್ನೇಹಿತರಾಗಿ ಒಟ್ಟಾಗಿ ಕುಳಿತು ಸಮಸ್ಯೆ ಪರಿಹರಿಸಿಕೊಳ್ಳಬೇಕು. ದೀರ್ಘಕಾಲದ ಗಡಿ ವಿವಾದಕ್ಕೆ ಪರಿಹಾರ ಪಡೆಯಲು ಇತಿಹಾಸಕಾರರು, ಸರ್ವೇಯರ್‌ಗಳು ಮತ್ತು ತಜ್ಞರ ಸಹಾಯವನ್ನು ಪಡೆಯಲು ಎರಡೂ ದೇಶಗಳು ಒಪ್ಪಿಕೊಂಡಿವೆ ಎಂದು ಹೇಳಿದರು. ಈ ವಿವಾದವು 1947ರಲ್ಲಿ ಬ್ರಿಟಿಷ್ ಸರಕಾರ ಈ ಪ್ರದೇಶವನ್ನು ತೊರೆದಾಗಿನಿಂದ ಇದೆ. ಹೀಗಾಗಿ ಬ್ರಿಟನ್ ಹಾಗೂ ನೆರೆಯ ಚೀನಾ ಜತೆಗೂ ನಾವು ಮಾತುಕತೆ ನಡೆಸಿದ್ದೇವೆ ಎಂದು ಬಾಲೆನ್ ಶಾ ತಿಳಿಸಿದ್ದಾರೆ.



ಏನಿದು ಅತಿಕ್ರಮಣ ವಿವಾದ?

ಭಾರತ ಮತ್ತು ನೇಪಾಳಗಳು ಕಾಲಾಪಾನಿ, ಲಿಪುಲೇಖ್ ಮತ್ತು ಲಿಂಪಿಯಾಧುರಗಳ ಕುರಿತು ದೀರ್ಘಕಾಲದ ಗಡಿ ವಿವಾದ ಹೊಂದಿವೆ. ಎರಡೂ ದೇಶಗಳು ಭಾರತ, ಟಿಬೆಟ್ ಮತ್ತು ನೇಪಾಳಗಳ ತ್ರಿಕೋನ ಜಂಕ್ಷನ್ ಬಳಿ ಇರುವ ಈ ಪ್ರದೇಶಗಳ ಮೇಲೆ ಹಕ್ಕು ಸಾಧಿಸುತ್ತಿವೆ. ಅದಕ್ಕೆಂದೇ ಲಿಪುಲೇಖ್ ಮೂಲಕ ನಡೆಯುವ ಕೈಲಾಸ ಮಾನಸ ಸರೋವರ ಯಾತ್ರೆಗೆ ನೇಪಾಳ ಸರಕಾರ ಇತ್ತೀಚೆಗೆ ಆಕ್ಷೇಪಿಸಿತ್ತು. ಆದರೆ ಈ ಪ್ರದೇಶಗಳು ಉತ್ತರಾಖಂಡದ ಭಾಗವೆಂದು ಭಾರತವು ಸಮರ್ಥಿಸಿಕೊಂಡಿದೆ.

ಇಬ್ಬರು ಶಾಸಕರನ್ನು ಉಚ್ಚಾಟಿಸಿದ ಟಿಎಂಸಿ

ಇಬ್ಬರು ಶಾಸಕರಿಂದ ಪಕ್ಷ ವಿರೋಧಿ ಚಟುವಟಿಕೆ: ಟಿಎಂಸಿ ಆರೋಪ

ತಮ್ಮ ಸಹಿ ನಕಲು: ಟಿಎಂಸಿ ವಿರುದ್ಧ ತಿರುಗಿಬಿದ್ದ ಸಂದೀಪನ್, ಋತಬ್ರತಾ

ಕೋಲ್ಕತಾ: ಪಶ್ಚಿಮ ಬಂಗಾಳ ರಾಜಕೀಯದಲ್ಲಿ ನಕಲಿ ಸಹಿ ಆರೋಪ ಭಾರೀ ಸಂಚಲನ ಸೃಷ್ಟಿಸಿದೆ. ಈ ವಿವಾದದ ನಡುವೆಯೇ ತೃಣಮೂಲ ಕಾಂಗ್ರೆಸ್ ತನ್ನ ಇಬ್ಬರು ಶಾಸಕರಾದ ಸಂದೀಪನ್ ಸಹಾ ಮತ್ತು ಋತಬ್ರತಾ ಬ್ಯಾನರ್ಜಿ ಅವರನ್ನು ಪಕ್ಷದಿಂದ ಉಚ್ಚಾಟಿಸಿದೆ. ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ ಎಂಬ ಆರೋಪದ ಮೇಲೆ ಇಬ್ಬರ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಟಿಎಂಸಿ ತಿಳಿಸಿದೆ.

ಈ ಬೆಳವಣಿಗೆಗೂ ಮುನ್ನ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಶೋಭನ್‌ದೇಬ್ ಚಟ್ಟೋಪಾಧ್ಯಾಯ ಅವರನ್ನು ಬೆಂಬಲಿಸುವ ಪತ್ರದಲ್ಲಿ ತಮ್ಮ ಪರವಾಗಿ ನಕಲಿ ಸಹಿ ಹಾಕಲಾಗಿದೆ ಎಂದು ಇಬ್ಬರು ಶಾಸಕರು ದೂರು ನೀಡಿದ್ದರು.

ಈ ಬಗ್ಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಟಿಎಂಸಿಯ ಇಬ್ಬರು ಶಾಸಕರೇ ತಮ್ಮ ಸಹಿ ನಕಲಿ ಮಾಡಲಾಗಿದೆ ಎಂದು ದೂರು ನೀಡಿದ್ದಾರೆ ಎಂದು ಹೇಳಿದ್ದರು. ಈ ಹೇಳಿಕೆ ನೀಡಿದ ಕೆಲವೇ ಹೊತ್ತಿನಲ್ಲಿ ಟಿಎಂಸಿ ತನ್ನ ಇಬ್ಬರು ಶಾಸಕರ ಉಚ್ಚಾಟನೆ ಆದೇಶ ಹೊರಡಿಸಿದೆ. ಟಿಎಂಸಿ ಉಪಾಧ್ಯಕ್ಷೆ ಚಂದ್ರಿಮಾ ಭಟ್ಟಾಚಾರ್ಯ ಸಹಿ ಮಾಡಿರುವ ಪತ್ರದಲ್ಲಿ, ಇಬ್ಬರು ಶಾಸಕರು ಪಕ್ಷದ ಸಭೆಗಳಿಗೆ ಪದೇಪದೇ ಗೈರಾಗುತ್ತಿದ್ದರು. ಅಲ್ಲದೆ ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು ಎಂದು ಆರೋಪಿಸಲಾಗಿದೆ.

ಪಕ್ಷದ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವ ಹೇಳಿಕೆಗಳನ್ನು ನೀಡಿರುವ ಕಾರಣದಿಂದ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಈ ಕುರಿತು ಸುವೇಂದು ಅಧಿಕಾರಿ ಮಾತನಾಡಿ, ತೃಣಮೂಲ ಕಾಂಗ್ರೆಸ್ ತನ್ನದೇ ಶಾಸಕರ ಸಹಿಗಳನ್ನು ನಕಲಿ ಮಾಡಿದೆ. ಈ ಬಗ್ಗೆ ದೂರು ನೀಡಿರುವುದು ಅವರ ಪಕ್ಷದ ಶಾಸಕರೇ ಎಂದು ಟಿಎಂಸಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಇದರಲ್ಲಿ ಬಿಜೆಪಿಯ ಯಾವುದೇ ಪಾತ್ರವಿಲ್ಲ ಎಂದು ಹೇಳಿದ್ದಾರೆ.

ಲೋಕಸಭೆ ಚುನಾವಣೆಯ ನಂತರ ಟಿಎಂಸಿಯೊಳಗಿನ ಭಿನ್ನಾಭಿಪ್ರಾಯಗಳು ಹೆಚ್ಚಾಗಿವೆ ಎಂಬ ಚರ್ಚೆಗಳು ನಡೆಯುತ್ತಿರುವ ಹೊತ್ತಲ್ಲೇ ಈ ಘಟನೆ ರಾಜಕೀಯ ವಲಯದಲ್ಲಿ ಹೊಸ ಸಂಚಲನಕ್ಕೆ ಕಾರಣವಾಗಿದೆ.

ಸದ್ಯ ನಕಲಿ ಸಹಿ ಆರೋಪ ಮತ್ತು ಶಾಸಕರ ಉಚ್ಚಾಟನೆ ಪ್ರಕರಣ ಪಶ್ಚಿಮ ಬಂಗಾಳ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

Government of Karnataka
(Urban Development Department)
VIJAYAPURA CITY CORPORATION, VIJAYAPURA
Bagalkot Road, Jalanagar-586109
Phone : 08352-278536, Fax: 08352-278532 Help Line : 08352-222474
website: www.bijapurcity.mrc.gov.in, E-mail: itstaff_ulb_bijapur@yahoo.co.in
Ref. No: VCC/Tender/2026-27 Date: 29.05.2026

Expression of Interest (EOI)

Under the Urban Challenge Fund scheme of the Central Government, the Vijayapura City Municipal Corporation has been provided with guidelines to undertake projects by expecting revenue for the corporation through Central Government Capital Assistance (CA) of 25% grant, a minimum of 50% funding through market-based finance such as bank loans and municipal bonds, and through Public/Private/Participatory (PPP) models.
Accordingly, the Vijayapura City Municipal Corporation intends to undertake projects in Vijayapura city as per the above-mentioned guidelines. For this purpose, it has been resolved and a resolution has been passed in the general meeting of the Municipal Corporation held on 30/04/2026. The details of the projects undertaken are as follows.

Sl. No	Name of the Project	(Estimated Amount of the Project) (Rs In Crore)
1	Comprehensive development of inner and outer moat and fort wall of Vijayapura city including rejuvenation and construction of storm water drains and Rajnalas for mitigation of urban flooding.	100.00
2	Construction of multilevel car parking at municipal site near Gandhi chowk in Vijayapura city core area.	40.00

Expression of Interest is hereby invited from interested bankers, qualified agencies, NGOs, and other organizations for the projects mentioned above. In accordance with this notification, interested agencies/NGOs/other organizations are required to submit a Letter of Interest expressing their willingness to participate toCommissioner Vijayapura City Municipal Corporation, Vijayapuraon or before08/06/2026 through post or e-mail (e-mail id: itstaff_ulb_bijapur@yahoo.co.in
If further information and clarification is required, the Executive Engineer (UCF Project) can be contacted in person or by phone/mobile number: 8970098190 and9481082045 and the complete UCF Guidelines and Central Government project details, project location, building plans etc. can be checked on the Vijayapura Municipal Corporation Website: www.bijapurcity.mrc.gov.in
ವಾಸಾಸಂಇ/ವಿಜಯಪುರ/117/ಕೆಎಸ್‌ಎಂಸಿಎ/2026-27
Executive Engineer, City Corporation, Vijayapura

ಅಪ್ರೂವರ್ ಆಗಿದ್ದರೂ ವಿಚಾರಣೆಗೆ ಕೋರ್ಟ್ ಆದೇಶ

ಸುಕೇಶ್ ವಂಚನೆ ಪ್ರಕರಣ: ಜಾಕೆಲಿನ್‌ಗೆ ಮತ್ತೆ ಸಂಕಷ್ಟ

ದೆಹಲಿ: ಬಹುಕೋಟಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಾಲಿವುಡ್ ನಟಿ ಜಾಕೆಲಿನ್ ಫೆರ್ನಾಂಡಿಸ್‌ಗೆ ಮತ್ತೊಂದು ಕಾನೂನು ಸವಾಲು ಎದುರಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ನ್ಯಾಯಾಲಯ ಜಾಕೆಲಿನ್ ಸೇರಿದಂತೆ ಹಲವು ಆರೋಪಿಗಳ ವಿರುದ್ಧ ದೋಷಾರೋಪ ರೂಪಿಸಲು ಅನುಮತಿ ನೀಡಿದ್ದು, ಜೂನ್ 3ರಂದು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಿದೆ.

ಬಲಿಪಶು ವಾದಕ್ಕೆ ಸಿಗಲಿಲ್ಲ ಬೆಂಬಲ: ಪ್ರಕರಣದಲ್ಲಿ ತಾವು ವಂಚನೆಯ ಬಲಿಪಶುವಾಗಿದ್ದೇವೆ ಎಂಬ ಜಾಕೆಲಿನ್ ಅವರ ವಾದವನ್ನು ನ್ಯಾಯಾಲಯ ಒಪ್ಪಿಲ್ಲ. ತನಿಖಾ ದಾಖಲೆಗಳಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಆರೋಪಿಗಳ ವಿರುದ್ಧ ವಿಚಾರಣೆ ನಡೆಸಲು ಸಾಕಷ್ಟು ಆಧಾರಗಳಿವೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಉಡುಗೊರೆಗಳೇ ತನಿಖೆಯ ಕೇಂದ್ರಬಿಂದು: ಮುಖ್ಯ ಆರೋಪಿ ಸುಕೇಶ್ ಚಂದ್ರಶೇಖರ್ ಜೊತೆ ಜಾಕೆಲಿನ್ ನಿರಂತರ ಸಂಪರ್ಕ ಹೊಂದಿದ್ದರು ಎನ್ನಲಾಗಿದೆ. ಈ ಅವಧಿಯಲ್ಲಿ ಕೋಟ್ಯಂತರ ರುಪಾಯಿ ಮೌಲ್ಯದ ಉಡುಗೊರೆಗಳು, ಆರ್ಥಿಕ ನೆರವು ಹಾಗೂ ಐಷಾರಾಮಿ ಸೌಲಭ್ಯಗಳನ್ನು ಪಡೆದಿರುವ ಆರೋಪವೂ ತನಿಖೆಯಲ್ಲಿ ಪ್ರಮುಖ ವಿಷಯವಾಗಿ ಹೊರಹೊಮ್ಮಿದೆ. ಪ್ರಕರಣದಲ್ಲಿ ಅಪ್ರೂವರ್ ಆಗಲು ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆಯಲು ನ್ಯಾಯಾಲಯ ಅವಕಾಶ ನೀಡಿದರೂ, ಜಾರಿ ನಿರ್ದೇಶನಾಲಯ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಪ್ರಮುಖ ಆರೋಪಿಯೊಂದಿಗೆ ನೇರ ಸಂಪರ್ಕ ಹೊಂದಿದ್ದ ಹಿನ್ನೆಲೆಯಲ್ಲಿ ವಿಶೇಷ ಸಡಿಲಿಕೆ ನೀಡಬಾರದು ಎಂದು ಇಡಿ ವಾದಿಸಿತ್ತು.

ಸುವೇಂದು ಸಂಪುಟ ವಿಸ್ತರಣೆ, ಸಚಿವರ ಸಂಖ್ಯೆ 41ಕ್ಕೇರಿಕೆ

ಪಶ್ಚಿಮ ಬಂಗಾಳ: ಇನ್ನೂ 35 ಬಿಜೆಪಿ ಶಾಸಕರಿಗೆ ಸಚಿವರಾಗುವ ಯೋಗ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಸುವೇಂದು ಅಧಿಕಾರಿ ನೇತೃತ್ವದ ಸಚಿವ ಸಂಪುಟ ವಿಸ್ತರಣೆಯ ಭಾಗವಾಗಿ ಸ್ವಪನ್ ದಾಸ್‌ಗುಪ್ತಾ, ತಪಸ್ ರಾಯ್ ಮತ್ತು ಶಂಕರ್ ಘೋಷ್ ಸೇರಿ 35 ಬಿಜೆಪಿ ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಲೋಕಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಆರ್.ಎನ್.ರವಿ ಶಾಸಕರಿಗೆ ಪ್ರಮಾಣವಚನ ಬೋಧಿಸಿದರು. 35 ಶಾಸಕರು ಸಚಿವ ಸಂಪುಟಕ್ಕೆ ಸೇರ್ಪಡೆಯಾದ ನಂತರ, ಸಂಪುಟದ ಬಲ ಈಗ 41 ಆಗಿದೆ.

55 ವರ್ಷದ ಸುವೇಂದು ಅಧಿಕಾರಿ ಮೇ 9ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೂರು ವಾರಗಳ ನಂತರ ಸಚಿವ ಸಂಪುಟ ವಿಸ್ತರಣೆ ನಡೆಯಿತು. 294 ಸದಸ್ಯ ಬಲದ ವಿಧಾನಸಭೆಯಲ್ಲಿ 208 ಸ್ಥಾನಗಳನ್ನು ಗಳಿಸುವ ಮೂಲಕ ರಾಜ್ಯದಲ್ಲಿ ಮೊದಲ ಬಾರಿ ಬಿಜೆಪಿ ಸರಕಾರ ಸ್ಥಾಪಿಸಿತು. ಈ ಮೂಲಕ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್‌ನ 15 ವರ್ಷಗಳ ಆಳ್ವಿಕೆಯನ್ನು ಕೊನೆಗೊಳಿಸಿತು.

ಅಧಿಕಾರಿ ಜತೆ ಬಿಜೆಪಿ ಶಾಸಕರಾದ ದಿಲೀಪ್ ಘೋಷ್, ಅಗ್ನಿಮಿತ್ರ ಪಾಲ್, ನಿಶೀತ್ ಪ್ರಾಮಾಣಿಕ್, ಅಶೋಕ್ ಕೀರ್ತಾನಿಯಾ ಮತ್ತು ಕ್ಷುದಿರಾಮ್ ತುಡು ಕೂಡ ಮೇ 9ರಂದು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ಸಚಿವ ಸಂಪುಟಕ್ಕೆ ಸದಸ್ಯರ ಸೇರ್ಪಡೆ ಕುರಿತು ಅಧಿಕಾರಿ ಮತ್ತು ರಾಜ್ಯ ಬಿಜೆಪಿ ಮುಖ್ಯಸ್ಥ ಸಮಿಕ್ ಭಟ್ಟಾಚಾರ್ಯ ಕಳೆದ ವಾರ ನವದೆಹಲಿಯಲ್ಲಿ ಪಕ್ಷದ ಕೇಂದ್ರ ನಾಯಕತ್ವದೊಂದಿಗೆ ಸಭೆ ನಡೆಸಿದ್ದರಿಂದ ಈ ವಾರ ಸಚಿವ ಸಂಪುಟ ವಿಸ್ತರಣೆಯಾಗಬಹುದು ಎಂದು ನಿರೀಕ್ಷಿಸಲಾಗಿತ್ತು.

ಅಮೆರಿಕದ ಜಾರ್ಜಿಯಾದಲ್ಲಿ ಹೆಲಿಕಾಪ್ಟರ್ ದುರಂತ | ವಧು ಪಾರು, ದುರಂತಕ್ಕೆ ಕಾರಣ ಗೊತ್ತಾಗಿಲ್ಲ

ಮದುವೆಯಾದ ಕೆಲ ಗಂಟೆಗಳಲ್ಲೇ ಮಸಣ ಸೇರಿದ ಕೇರಳದ ವರ!

ವಾಷಿಂಗ್ಟನ್: ಅಮೆರಿಕದ ಜಾರ್ಜಿಯಾದಲ್ಲಿ ಖುಷಿಖುಷಿಯಾಗಿ ಮದುವೆಯಾಗಿ ಹೊಸಜೀವನಕ್ಕೆ ಕಾಲಿಟ್ಟು ಅದರ ಖುಷಿಯಲ್ಲೇ ಹೆಲಿಕಾಪ್ಟರ್‌ನಲ್ಲಿ ಮಧುಚಂದ್ರಕ್ಕೆ ತೆರಳುತ್ತಿದ್ದ ಕೇರಳದ ವರ ಮಸಣ ಸೇರಿದ್ದಾರೆ. ವಿವಾಹ ಸ್ಥಳವಾದ ಡಾಸನ್‌ವಿಲ್ಲೆ ಸಮೀಪದ ಕಾಡಿನಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದೆ. ಕೇರಳ ಮೂಲದವರಾದ 26 ವರ್ಷದ ಡೇವ್ ಫಿಜಿ ಅಮೆರಿಕದಲ್ಲಿ ಡೆಲ್ಟಾ ಏರ್‌ಲೈನ್ಸ್‌ನಲ್ಲಿ

ಪೈಲಟ್ ಆಗಿ ಕೆಲಸ ಮಾಡುತ್ತಿದ್ದರು. ಅದೇ ದೇಶದಲ್ಲಿ ನರ್ಸ್ ಆಗಿದ್ದ ಜೆನ್ನಿ ಎಂಬಾಕೆಯನ್ನು ಡಾಸನ್‌ವಿಲ್ಲೆಯಲ್ಲಿ ಶುಕ್ರವಾರ (ಮೇ 29) ವಿವಾಹವಾಗಿದ್ದರು. ಇದಾದ ಬಳಿಕ ಖುಷಿಖುಷಿಯಾಗಿ ರಾಬಿನ್ಸನ್ ಆರ್66 ಹೆಲಿಕಾಪ್ಟರ್ ಮೂಲಕ ಮಧುಚಂದ್ರಕ್ಕೆಂದು ತೆರಳಲು ಡೆಕಾಲ್ಬ್-ಪೀಚ್‌ಟ್ರೀ ವಿಮಾನ ನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ್ದಾರೆ. ಆದರೆ ಹೆಲಿಕಾಪ್ಟರ್ ಹಾರಾಟ ನಡೆಸಿದ ಕೆಲವೇ ಹೊತ್ತಿನಲ್ಲೇ ಮದುವೆ ಸ್ಥಳದಿಂದ ಸ್ವಲ್ಪ ದೂರದಲ್ಲಿರುವ ಮೌಂಟ್ ವೆರ್ನಾನ್ ಡ್ರೈವ್ ಬಳಿಯ ಡಾಸನ್ ಕೌಂಟಿಯ ದೂರದ ಅರಣ್ಯ ಪ್ರದೇಶದಲ್ಲಿ ಅಪಘಾತಕ್ಕೀಡಾಗಿದೆ.

ಕಾರಣ ಪತ್ತೆಯಾಗಿಲ್ಲ: ರಕ್ಷಣಾ ತಂಡಗಳಿಗೆ ಪತನವಾದ ಹೆಲಿಕಾಪ್ಟರ್ ಅನ್ನು ಪತ್ತೆಹಚ್ಚಲು 6 ಗಂಟೆಗಳ ಕಾಲ ಸಮಯಹಿಡಿದಿದ್ದು, ಇಷ್ಟರಲ್ಲಾಗಲೇ ದುರಂತದಲ್ಲಿ ಪೈಲಟ್ ಹಾಗೂ ನವವಿವಾಹಿತ ವರ ಸಾವನ್ನಪ್ಪಿದ್ದರು. ವಧು ಜೆನ್ನಿ ಗಾಯಗಳೊಂದಿಗೆ ಪಾರಾಗಿದ್ದಾರೆ. ಇನ್ನು, ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯು ಅಪಘಾತದ ತನಿಖೆ ನಡೆಸುತ್ತಿದ್ದು, ಹೆಲಿಕಾಪ್ಟರ್ ದುರಂತಕ್ಕೆ ಕಾರಣ ಪತ್ತೆಯಾಗಿಲ್ಲ.

ಸಮಾಚಾರ ಸಣ್ಣದಲ್ಲ

6ನೇ ತರಗತಿ ದಾಖಲಾತಿಗೆ ಆಹ್ವಾನ

ಬಳ್ಳಾರಿ: ನಗರದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಹ ವಿದ್ಯಾರ್ಥಿಗಳ ಪ್ರವರ್ಗವಾರು ಕಟ್ ಆಫ್ ಅಂಕಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮಕ್ಕಳ ಪೋಷಕರಿಗೆ ಪ್ರವೇಶಾತಿ ಮಾಡಿಕೊಳ್ಳಲು ಕೇವಲ 3 ದಿನಗಳ ಕಾಲ ಮಾತ್ರ ಅವಕಾಶ ನೀಡಲಾಗಿದೆ. ಹಾಗಾಗಿ, ಪೋಷಕರು ಯಾವುದೇ ವಿಳಂಬ ಮಾಡದೆ ತಕ್ಷಣವೇ ಸರಕಾರಿ ಆದರ್ಶ ವಿದ್ಯಾಲಯಕ್ಕೆ ಭೇಟಿ ನೀಡಿ ಪ್ರವೇಶಾತಿ ಅರ್ಜಿಯನ್ನು ಪಡೆದುಕೊಳ್ಳಬೇಕು. ಮಕ್ಕಳು ಪ್ರಸ್ತುತ ಓದುತ್ತಿರುವ ಶಾಲೆಯಿಂದ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಹಾಗೂ ಇತರ ಅಗತ್ಯ ಮೂಲ ದಾಖಲೆಗಳನ್ನು ತಂದು ನಿಗದಿತ ಅವಧಿಯೊಳಗೆ ಪ್ರವೇಶಾತಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ಸತ್ಯನಾರಾಯಣ ಎ.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ನಗದು ಬಹುಮಾನಕ್ಕೆ ಅರ್ಜಿ

ಬಳ್ಳಾರಿ: ಜಿಲ್ಲೆಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವತಿಯಿಂದ 2026–27ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ (ಪಿಯುಸಿ, ಡಿಪ್ಲೋಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿ – ಪಿಜಿ) ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಂದ ನಗದು ಬಹುಮಾನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ವೆಬ್ಸೈಟ್ twd.karnataka.gov.in ಮೂಲಕ ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಿದ ನಂತರ, ಅಗತ್ಯವಿರುವ ಎಲ್ಲಾ ಪೂರಕ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ (ಅಟೆಸ್ಟೆಡ್), ತಾಲ್ಲೂಕು ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ (ವಾಲ್ಮೀಕಿ ಭವನ, ನಲ್ಲಚೇರುವು ಪ್ರದೇಶ, ಬಳ್ಳಾರಿ) ಇಲ್ಲಿಗೆ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.9110224569 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ತಾಲ್ಲೂಕು ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ

ಬಳ್ಳಾರಿ: ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2026–27ನೇ ಸಾಲಿಗೆ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೆಟ್ರಿಕ್ ನಂತರದ ಕೋರ್ಸ್‌ಗಳಾದ ಪಿಯುಸಿ, ಡಿಪ್ಲೋಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ವಿದ್ಯಾರ್ಥಿಗಳು ಸ್ಟೇಟ್ ಹಾಸ್ಟೆಲ್ ಪೋರ್ಟಲ್ ವೆಬ್ಸೈಟ್ ಮುಖಾಂತರ ಆನ್ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ, ಆ ಅರ್ಜಿಯ ಪ್ರತಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಬಳ್ಳಾರಿ ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕಾಗುತ್ತದೆ. ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ವಾಲ್ಮೀಕಿ ಭವನ, ನಲ್ಲಚೇರವು ಪ್ರದೇಶ, ಸ್ಟೇಡಿಯಂ ಹತ್ತಿರ, ಬಳ್ಳಾರಿ. ಹೆಚ್ಚಿನ ಮಾಹಿತಿಗಾಗಿ ಕಚೇರಿ ಮೊ.9110224569 ಕ್ಕೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಬಳ್ಳಾರಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಹನ ಚಾಲನಾ ತರಬೇತಿಗೆ ಅರ್ಜಿ

ಕೊಪ್ಪಳ: ಕರ್ನಾಟಕ ಸರಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ (ಎಸಿ) ಹಾಗೂ ಪರಿಶಿಷ್ಟ ಪಂಗಡ (ಎಸ್ಟಿ) ಸಮುದಾಯದ ನಿರುದ್ಯೋಗಿ ಯುವಕ–ಯುವತಿಯರಿಗೆ ಉಚಿತ ಲಘು ಮತ್ತು ಭಾರಿ ವಾಹನ ಚಾಲನಾ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಕೌಶಲ್ಯ ಮಿಷನ್, ಕೊಪ್ಪಳ ಇವರ ಸಹಯೋಗದಲ್ಲಿ 30 ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ತರಬೇತಿಯೊಂದಿಗೆ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಚಾಲನಾ ಪರವಾನಗಿ (ಡಿಎಲ್) ಪಡೆಯಲು ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ತರಬೇತಿ ಅವಧಿಯಲ್ಲಿ ಉಚಿತ ವಸತಿ ಹಾಗೂ ಊಟದ ವ್ಯವಸ್ಥೆಯೂ ಇರಲಿದೆ. ಅಭ್ಯರ್ಥಿಗಳು ಎಸ್ಎಸ್ಎಲ್ಸಿ ಅಥವಾ ಜನ್ಮದಿನಾಂಕ ಹೊಂದಿರುವ ಅಂಕಪಟ್ಟಿ, ಆಧಾರ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಪಾಸ್ಪೋರ್ಟ್ ಅಳತೆಯ ಭಾವಚಿತ್ರಗಳು ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ನೇರವಾಗಿ ತರಬೇತಿ ಕೇಂದ್ರಗಳಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9449925367, 9663653500, 9449971416 ಹಾಗೂ 7996865758.

{ಆರ್. ಅಶೋಕ} ಪ್ರತಿಪಕ್ಷ ನಾಯಕ

ಸಿಎಂ ಬದಲಾವಣೆ ಆದ್ರೆ ಫೈನಾನ್ಸ್‌ನಲ್ಲಿ ಇರೋ ಲೆಕ್ಕ ಪತ್ರ ಬದಲಾಗುತ್ತಾ? ನಮ್ಮ ರಾಜ್ಯದ ಸಾಲ 7.54 ಲಕ್ಷ ರು. ಕೋಟಿ. ಆದಾಯದಕ್ಕಿಂತ ಸಾಲ ಜಾಸ್ತಿ ಇದೆ. ಸಾಲ ಜಾಸ್ತಿ ಮಾಡಿದ್ದೆ ಸಿದ್ದರಾಮಯ್ಯ. ಬೊಮ್ಮಾಯಿ ಸರ್‌ಪ್ಲಸ್ ಬಜೆಟ್ ಮಂಡನೆ ಮಾಡಿದ್ರು. ಈಗ ಸಿದ್ದರಾಮಯ್ಯ ಸಾಲ ಮಾಡಿದ್ದಾರೆ. ಡಿಕೆ ಶಿವಕುಮಾರ್‌ಅವರೇ ಈ ಸಾಲ ತೀರಿಸುವವರು ಯಾರು? ಮುಂದಿನ ಪೀಳಿಗೆ ತೀರಿಸಬೇಕಾ? ನೀವೇ ತೀರಿಸ್ತೀರಾ?.

ಸರಕಾರದ ನಿಯಮ ಗಾಳಿ ತೂರಿದ ಅಧಿಕಾರಿಗಳು | ಕರ್ನಾಟಕ ನವ ನಿರ್ಮಾಣ ಸೇನೆ ಒತ್ತಾಯ

ನಗರಸಭೆ ಭ್ರಷ್ಟಾಚಾರ ಪ್ರಕರಣ ಸಿಬಿಐಗೆ ವಹಿಸಿ

ವಿಶ್ವವಾಣಿ ಸುದ್ದಿಮನೆ ಕೊಪ್ಪಳ

ಕಳೆದ 3 ತಿಂಗಳಲ್ಲಿ ಕೊಪ್ಪಳ ನಗರಸಭೆ ನಿಧಿಯಿಂದ ಸುಮಾರು 1 ಕೋಟಿ ರು. ಗೂ ಹೆಚ್ಚು ಅನುದಾನ ದುರ್ಬಳಕೆ ಆಗಿದೆ. ಕಳೆದ ನಾಲ್ಕು ತಿಂಗಳಲ್ಲಿ ಬೇರೆ ಬೇರೆ ಹೆಡ್ ನಿಂದ 3 ಕೋಟಿ ರು.ಗೂ ಹೆಚ್ಚು ಹಣ ದುರ್ಬಳಕೆ ಆಗಿದೆ. ಈ ಎಲ್ಲ ಭ್ರಷ್ಟಾಚಾರದ ಬಗ್ಗೆ ಸಿಬಿಐ ತನಿಖೆ ಆಗಬೇಕು ಎಂದು ಕರ್ನಾಟಕ ನವ ನಿರ್ಮಾಣ ಸೇನೆ ಜಿಲ್ಲಾಧ್ಯಕ್ಷ ವಿಜಯಕುಮಾರ ಕವಲೂರು ಆಗ್ರಹಿಸಿದರು.

ಕೊಪ್ಪಳ ನಗರಸಭೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕೊಪ್ಪಳ ನಗರದ ಜನರ ಆಶೋತ್ತರ ಹಾಗೂ ನೀರಿಕ್ಷೆ ಪೂರೈಸುವಲ್ಲಿ ನಗರಸಭೆ ಸಂಪೂರ್ಣವಾಗಿ ವಿಫಲವಾಗಿದೆ. ಈ ಹಿಂದಿನಿಂದಲೂ ನಗರಸಭೆಯಲ್ಲಿ ಭ್ರಷ್ಟಾಚಾರ ಆರೋಪ ಕೇಳಿ ಬಂದಿದ್ದು, ಒಂದು ವರ್ಷದಲ್ಲಿ 2 ಬಾರಿ ಲೋಕಾಯುಕ್ತ ದಾಳಿ ಮಾಡಿ ಹತ್ತು ಕೋಟಿಗೂ ಹೆಚ್ಚು ಹಣದ ಭ್ರಷ್ಟಾಚಾರ ನಡೆದಿದೆ ಎಂಬ ವರದಿ ಆಗಿದ್ದವು. ಇಷ್ಟೆಲ್ಲ ನಡೆದರೂ ನಗರಸಭೆ ಅಧಿಕಾರಿಗಳು ತಮ್ಮ ಭಂಡತನದ ಭ್ರಷ್ಟಾಚಾರ ಮುಂದುವರೆಸಿದ್ದಾರೆ ಎಂದು ದೂರಿದರು.

ಕೇವಲ ಮೂರು ತಿಂಗಳಲ್ಲಿ ನಾಲ್ಕು ಕೋಟಿಗೂ ಹೆಚ್ಚು ಹಣ ತಮಗೆ ಇಷ್ಟ ಬಂದಂತೆ ಖರ್ಚು ಮಾಡಿದ್ದಾರೆ. ಜನರ ತೆರಿಗೆ ಹಣವನ್ನು ತಮಗೆ ಇಷ್ಟ ಬಂದಂತೆ ಬಳಸಿದ್ದು ದುರಂತ ಹಾಗೂ ದುರದುಷ್ಟಕರ. ಐದು ಲಕ್ಷದ ಮೇಲಿನ ಕಾಮಗಾರಿಗಳಿಗೆ ಕ್ರೀಯಾ ಯೋಜನೆ ಮಾಡಬೇಕು. ಟೆಂಡರ್‌ಕರೆಯಬೇಕು. ಸ್ಥಳೀಯ ಹಾಗೂ ರಾಜ್ಯ ವ್ಯಾಪ್ತಿ ಪತ್ರಿಕೆಗಳಿಗೆ ಪ್ರಕಟಣೆ ನೀಡಬೇಕು. ಆದರೆ, ಇಲ್ಲಿನ ನಗರಸಭೆ ಅಧಿಕಾರಿಗಳು ಈ ಯಾವ ನಿಯಮಗಳನ್ನೂ ಅನುಸರಿಸಿಲ್ಲ, ಸರಕಾರದ ನಿಯಮಗಳನ್ನು ಗಾಳಿಗೆ ತೂರಿ ತಮಗೆ ಇಷ್ಟ ಬಂದ ವ್ಯಕ್ತಿಗಳಿಗೆ ತಮಗೆ ಇಷ್ಟ ಬಂದ ಏಜೆನ್ಸಿಗಳಿಗೆ ಕಾಮಗಾರಿ ನೀಡಿ ಭ್ರಷ್ಟಾಚಾರ ಎಸಗಿದ್ದಾರೆ ಎಂದು ದೂರಿದರು.

ಅದೇ ರೀತಿ ಬೀದಿ ದೀಪ ನಿರ್ವಹಣೆ, ಹೊಸ ಬೀದಿ ದೀಪ ಅಳವಡಿಕೆಯಲ್ಲೂ ಭ್ರಷ್ಟಾಚಾರ ಮಾಡಿದ್ದಾರೆ. ಹೊಸ ಕೇಬಲ್ ಅಳವಡಿಕೆ ಸೇರಿ ಪ್ರತಿಯೊಂದು ಕಾಮಗಾರಿಗೂ ಕಾಮಗಾರಿ ನಾಮ ಫಲಕ ಹಾಕಬೇಕು, ಕಾಮಗಾರಿ ಹೆಸರು ಹಾಕಬೇಕು. ಅಂದಾಜು ಮೊತ್ತ, ಗುತ್ತಿಗೆದಾರನ ಹೆಸರು, ಯಾವ ಅನುದಾನದಲ್ಲಿ ಕಾಮಗಾರಿ ನಿರ್ವಹಿಸುತ್ತಿದ್ದಾರೆ ಈ ಎಲ್ಲಾ ಮಾಹಿತಿ ನಾಮ ಫಲಕದಲ್ಲಿ ಹಾಕಬೇಕು. ಆದರೆ, ನಗರಸಭೆ ಅಧಿಕಾರಿಗಳು ಎಲ್ಲಿಯೂ ಕೂಡ ನಾಮಫಲಕ ಹಾಕುತ್ತಿಲ್ಲ. ಇದರಿಂದ ಒಂದು ಕಾಮಗಾರಿಗೆ ಬೇರೆ ಬೇರೆ ಇಲಾಖೆಯಲ್ಲಿ ಹಣ ದುರ್ಬಳಕೆಯಾಗುವುದು ನಿಲ್ಲುತ್ತದೆ ಎಂದು ತಿಳಿಸಿದರು.

ನೂರಾರು ಕಾಮಗಾರಿಗಳಲ್ಲಿ ಭ್ರಷ್ಟಾಚಾರ ನಡೆದಿದೆ.ನಗರದ ಮೂಲ ಸೌಕರ್ಯ ಅಭಿವೃದ್ಧಿಗೆ ಬಳಕೆ ಆಗಬೇಕಾದ ಜನರ ತೆರಿಗೆ ಹಣ ಭ್ರಷ್ಟರ ಜೇಬು ಸೇರುತ್ತಿದೆ. ಹೀಗಾಗಿ ಕೊಪ್ಪಳ ನಗರಸಭೆ ಭ್ರಷ್ಟಾಚಾರವನ್ನು ಸಿಬಿಐಗೆ ವಹಿಸಿ ಸೂಕ್ತ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಬೇಕು. ಹಣವನ್ನು ವಸೂಲಿ ಮಾಡಬೇಕೆಂದು ಎಂದು ದಾಖಲೆ ಬಿಡುಗಡೆ ಮಾಡಿ ಆಗ್ರಹಿಸಿದರು. ಜಿಲ್ಲಾ ಗೌರವಾಧ್ಯಕ್ಷರಾದ ಜಿ,ಎಸ್ ಗೋನಾಳ, ಜಿಲ್ಲಾ ಉಪಾಧ್ಯಾಕ್ಷರಾದ ಮಂಜುನಾಥ ಸಾಲಿಮಠ, ತಾಲೂಕಾಧ್ಯಕ್ಷ ಮಹೇಶ ಅಲ್ಲಾನಗರ, ಜಿಲ್ಲಾ ಮುಂಖಡ ಶಿವಕುಮಾರ ಏಣಗಿ ಇದ್ದರು.



ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ಕರ್ನಾಟಕ ನವ ನಿರ್ಮಾಣ ಸೇನೆ ಮುಖಂಡರು ಸುದ್ದಿಗೋಷ್ಠಿ ನಡೆಸಿದರು.

ನಕಲಿ ದಾಖಲೆ ಬಿಲ್ ಸೃಷ್ಟಿ

ಕನ್ನಡ ರಾಜ್ಯೋತ್ಸವ, ಶ್ರೇಷ್ಠ ಸಂತ ಶ್ರೀ ಕನಕದಾಸರ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಮೂರು ಬಾರಿ ಬಿಲ್ ಎತ್ತಿರುವುದು ದಾಖಲೆಯಲ್ಲಿ ಇದೆ . ಅದೇ ರೀತಿ ಮೂಲೆಗುಂಪಾಗಿರುವ ಕಸ ವಿಲೇವಾರಿ ವಾಹನಗಳಿಗೆ ಇಂಧನ ಹಾಕಿಸಿದಂತೆ ದಾಖಲೆ ಸೃಷ್ಟಿ ಮಾಡಿದ್ದಾರೆ. ನಗರಸಭೆಯ 40ಕ್ಕೂ ಹೆಚ್ಚಿನ ವಾಹನಗಳಿಗೆ ಇಂಧನ ಹಾಕಿದ ನೆಪದಲ್ಲಿ ತಿಂಗಳಲ್ಲಿ ಲಕ್ಷಂತರ ರೂಪಾಯಿ ಬಿಲ್ ಖಾಸಗಿ ಬಂಕ್ ಮಾಲೀಕರಿಗೆ ಪಾವತಿಸಿದ್ದಾರೆ. ಇದನ್ನು ಗಮನಿಸಿದರೇ ಒಂದು ರೀತಿಯ ಇಂಧನ ಮಾಫೀಯ ನಡೆದಿರುವುದು ಗೊತ್ತಾಗುತ್ತಿದೆ. ಕಸ ಸಂಗ್ರಹಣಾ ಘಟಕ ನಿರ್ಮಾಣ ಆದಾಗಿನಿಂದ ಇಲ್ಲಿಯವರೆಗೆ ಕೋಟಿ ಕೋಟಿ ಹಣ ದುರುಪಯೋಗವಾಗಿದೆ ಕಸ ಸಂಗ್ರಹಣೆ ಘಟಕದ ಯಂತ್ರವನ್ನು ಸುಮಾರು ಒಂದು ಖರೀದಿ 1.40 ಕೋಟಿ ರು. ಗೆ ಖರೀದಿಸಿ ಅದರಲೂ ಭ್ರಷ್ಟಾಚಾರ ಮಾಡಿದ್ದಾರೆ. ಈ ಯಂತ್ರವನ್ನು ಒಂದು ದಿನವು ಚಾಲನೆ ಮಾಡಿಲ್ಲ ಎಂದು ವಿಜಯಕುಮಾರ ಕವಲೂರು ದೂರಿದರು.

ಅನೇಕ ಕಾಮಗಾರಿಗಳಿಗೆ ಬೋಗಸ್ ಬಿಲ್ ಮಾಡಿದ್ದಾರೆ. ಮೂರನೇ ವ್ಯಕ್ತಿ ತಪಸಣಾ ವರದಿ ಮಾಡುವ ಸಂಸ್ಥೆ ಕೂಡಾ ಇದರಲ್ಲಿ ಭಾಗಿಯಾಗಿದೆ. ಆ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಹಾಗೂ ಅವರ ವಿರುದ್ಧ ಕ್ರಮಿನಲ್ ಮೊಕ್ಕದ್ದಮೆ ದಾಖಲು ಮಾಡಬೇಕು. ಗಣೇಶ ಹಬ್ಬದಲ್ಲಿ ನಗರದಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ಖಾಸಗಿ ವ್ಯಕ್ತಿಗೆ ಲಕ್ಷಂತರ ರೂ. ಬಾಡಿಗೆ ನೀಡಿ, ಅನುದಾನ ದುರ್ಬಳಕೆ ಮಾಡಿದ್ದಾರೆ. ಜಿಎಸ್ ಟಿ ಹಣ ಸರಕಾರಕ್ಕೆ ಪಾವತಿ ಮಾಡದೇ ನಗರಸಭೆ ಅಧಿಕಾರಿಗಳು ಕಾಮಗಾರಿ ಹೆಸರಲ್ಲಿ ದುರ್ಬಳಕೆ ಮಾಡಿದ್ದಾರೆ.

– ಮಂಜುನಾಥ ಸಾಲಿಮಠ, ಜಿಲ್ಲಾ ಉಪಾಧ್ಯಾಕ್ಷ, ಕನನಿಸೇ

ಜಮೀರ್‌ಗೆ ಡಿಸಿಎಂ ಸ್ಥಾನ ನೀಡಲು ಮುಸ್ಲಿಮರ ಆಗ್ರಹ

ಹೊಸಪೇಟೆ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಅಲ್ಪ ಸಂಖ್ಯಾತರ ನಾಯಕ ಜಮೀರ್ ಅಹಮ್ಮದ್ ಖಾನ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಮುಸ್ಲಿಂ ಸಮುದಾಯದ ಮುಖಂಡರಾದ ಕೊತ್ತವಾಲ್ ಮೊಹಮ್ಮದ ಮೊಸೀನ್ ಹಾಗೂ ಪೀರೋಜ್ ಖಾನ್ ಒತ್ತಾಯಿಸಿದ್ದಾರೆ.

ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷವು ಸದಾ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿದೆ.

ನಮ್ಮ ಸಮುದಾಯವು ರಾಜ್ಯದಲ್ಲಿ ಸುಮಾರು 80 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದ್ದು ನಮ್ಮ ನ್ಯಾಯಯುತ ಬೇಡಿಕೆಗೆ ಸ್ಪಂದಿಸಬೇಕು ಎಂದು ಮನವಿಮಾಡಿದರು. ರಾಜ್ಯದ ಅಲ್ಪಸಂಖ್ಯಾತ ಸಮುದಾಯಕ್ಕೆ ಸರ್ಕಾರದ ಉನ್ನತ ಹಂತದಲ್ಲಿ ಸೂಕ್ತ ಸ್ಥಾನ ದೊರಕಬೇಕು. ಜಮೀರ್‌ಅಹಮ್ಮದ್ ಖಾನ್ ಅವರು ರಾಜ್ಯದಲ್ಲಿ ಒಂದು ಸಮುದಾಯದ ನಾಯಕರಲ್ಲ, ಅವರು ಎಲ್ಲಾ ಜಾತಿ, ಜನಾಂಗ ಧರ್ಮಗಳನ್ನು ಪ್ರೀತಿಸುವ ನಾಯಕರಾಗಿದ್ದಾರೆ ಎಂದರು.

ಕಷ್ಟ ದಲ್ಲಿ ಯಾರೇ ಆದರೂ ಅವರಿಗೆ ತನು ಮನದಿಂದ ಸಹಾಯ ಸಹಕಾರ ನೀಡುವ ಮಾನವೀಯ ಗುಣದ ನಾಯಕರಟಗಿದ್ದಾರೆ. ಜಮೀರ್‌ಅಹಮ್ಮದ್ ಖಾನ್ ಅವರ ರಾಜಕೀಯ ಅನುಭವ ಹಲವು ವರ್ಷಗಳಿಂದ ಜನಸೇವೆ ಮತ್ತು ಪಕ್ಷ ಸಂಘಟನೆಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಸಚಿವರಾಗಿ ವಿವಿಧ ಇಲಾಖೆಗಳ ನಿರ್ವಹಣೆಯಲ್ಲಿ ಕಾರ್ಯಕ್ಷಮತೆ ತೋರಿದ್ದಾರೆ. ರಾಜ್ಯಾದ್ಯಂತ ಪಕ್ಷದ ಬಲವರ್ಧನೆಗೆ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ರಾಷ್ಟ್ರೀಯ ನಾಯಕತ್ವ ಹಾಗೂ ರಾಜ್ಯ ನಾಯಕರು ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ಆಶಯಗಳಿಗೆ ಗೌರವ ನೀಡಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಮುದಾಯದ ಮುಖಂಡರಾದ ಪೀರೋಜ್ ಖಾನ್, ಬಿ. ಅನ್ವರ್‌ಭಷಾ, ಎಮ್.ಎಮ್. ಗೌಸ್, ಅಬೂಬ್ ಕರ್, ಎನ್.ಎಸ್. ರಫೀಕ್, ಅತೀಕ್ ರಷೀಧ್, ರಾಜಾಕ್, ಎಮ್.ಡಿ. ಜಾವೀದ್ ಸಾದೀಕ್ ಅಲಿ, ನೌಷಾದ್, ಅಬ್ದುಲ್ ಗಫುರ್, ಕರಂಗಿ ನಜೀರ್, ಯೂನಿಸ, ನಾವಜ್ ಇತರರಿದ್ದರು.

ಸುದ್ದಿಗೋಷ್ಠಿಯಲ್ಲಿ ಮೊಹಮ್ಮದ ಮೊಸೀನ್ ಹಾಗೂ ಪೀರೋಜ್ ಖಾನ್ ಮಾತನಾಡಿದರು.

ವಿದ್ಯಾರ್ಥಿಗಳು ಕಲಿಕೆಯಲ್ಲಿ ಪ್ರಯತ್ನ ಹಾಕಲಿ

ರಾಯಚೂರು: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಉತ್ತಮವಾದ ಗುರಿಯನ್ನು ಇಟ್ಟುಕೊಳ್ಳಬೇಕು. ಹಾಗೆಯೆ ಆ ಗುರಿಯನ್ನು ತಲುಪಲು ಕಲಿಕೆಯಲ್ಲಿ ನಿರಂತರ ಪ್ರಯತ್ನ ಇದ್ದಾಗ ಮಾತ್ರ ತಾವು ಸಾಧನೆ ಗೈಯುವುದರೊಂದಿಗೆ ಸಮಾಜದಲ್ಲಿ ಮಹತ್ತರವಾದ ಬದಲಾವಣೆಯನ್ನು ತರಲು ಸಾಧ್ಯ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಹೇಳಿದರು.

ರಾಯಚೂರು ನಗರದ ರೈಲ್ವೆ ಸ್ಟೇಷನ್ ರಸ್ತೆಯ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳು ಉತ್ತಮ ಜೀವನದ ಮೌಲ್ಯಗಳು, ಸಂಸ್ಕಾರಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಚೆನ್ನಾಗಿ ಓದಿ ಉನ್ನತ ಹುದ್ದೆಗಳಾದ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ ಸೇರಿದಂತೆ ಇತರೆ ವಿವಿಧ ಉನ್ನತ ಹುದ್ದೆಗಳ ಕನಸು ಕಾಣಬೇಕು. ವಿದ್ಯಾರ್ಥಿಗಳು ಯಾರು ಶಾಲೆಯನ್ನು ಬಿಡದಂತೆ ನೋಡಿಕೊಳ್ಳಬೇಕು. ಶಾಲೆ ಬಿಟ್ಟಲ್ಲಿ ಮರಳಿ ಶಾಲೆಗೆ ಕರೆ ತರುವ ಕೆಲಸ ಶಿಕ್ಷಕರಿಂದ ಆಗಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್‌ಕಾಂದೂ ಅವರು ಮಾತನಾಡಿ, ಶಾಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ನೋಡಿ ನನಗೆ ಸಂತೋಷವಾಗಿದೆ. ಮಕ್ಕಳನ್ನು ನೋಡಿ, ನಮ್ಮ ಬಾಲ್ಯದ ನೆನಪು ಆಗುತ್ತದೆ. ಮಕ್ಕಳು ಒಂದು ಗುರಿಯನ್ನು ಇಟ್ಟಕೊಳ್ಳಬೇಕು. ಆ ಗುರಿಯನ್ನು ಸಾಧಿಸಲು ಸತತ ಪ್ರಯತ್ನ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ, ಬಾಬು, ರಾಯಚೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೋಸಗಿ, ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕುಂಟೆಪ್ಪ ಸೇರಿದಂತೆ ಶಾಲೆಯ ಮುಖ್ಯಗುರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಐಪಿಎಲ್ ಫೈನಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮುದಗಲ್ ಪಟ್ಟಣದಲ್ಲಿ ಭಾನುವಾರ ರಾತ್ರಿ, ಅಭಿಮಾನಿಗಳು ಸಂಭ್ರಮಾಚರಣೆ ಮಾಡಿದರು. ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಗುಜರಾತ್ ಟೈಟನ್ಸ್‌ವಿರುದ್ಧ ಜಯಭೇರಿ ಬಾರಿಸಿ, ಸತತ ಎರಡನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದ ಹಿನ್ನೆ ಲೆಯಲ್ಲಿ ಪಟ್ಟಣದಲ್ಲಿ ಅಭಿಮಾನಿಗಳು ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಿದರು. ಇದೆ ವೇಳೆ ಪಿಎಸ್‌ಐ ವೆಂಕಟೇಶ ಮಾಡಗೇರಿ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.

ಎಪಿಎಂಸಿ ಅಭಿವೃದ್ಧಿಗೆ 5 ಕೋಟಿ ಅನುದಾನ

ಮಸ್ಕಿ: ಇಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ ಬಿಡುಗಡೆ ಯಾಗಿದೆ ಎಂದು ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು ಹೇಳಿದರು.

ಇಲ್ಲಿಯ ಪತ್ರಿಕಾ ಭವನದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಶಾಸಕ ಬಸನಗೌಡ ತುರ್ವಿಹಾಳ ಅವರ ಪ್ರಯತ್ನದಿಂದ ಹಣ ಬಿಡುಗಡೆಯಾಗಿದೆ ಎಂದರು. ಕೃಷಿ ಮಾರುಕಟ್ಟೆ ಬಳಿ ರೈತ, ವರ್ತಕರಿಗೆ ಮೂಲ ಸೌಲಭ್ಯ ಕಲ್ಪಿಸುವ ಜತೆ ಮಾರುಕಟ್ಟೆ ಅಭಿವೃದ್ಧಿಗೆ ಅನುದಾನ ಬಳಕೆ ಯಾಗಲಿದೆ ಎಂದರು. ಮಾರುಕಟ್ಟೆ ಯಲ್ಲಿ ವರ್ತಕರು ವ್ಯಾಪಾರ, ವಹಿವಾಟು ಆರಂಭಿಸಬೇಕು ರೈತರ ಅನುಕೂಲಕ್ಕೆ ಶೀಘ್ರದಲ್ಲಿ ಕುರಿ, ಜಾನುವಾರು ಮಾರಾಟ ಸಂತೆ ಆರಂಭಿಸಲಾಗುವುದು ಎಂದರು. ನಿವೇಶನ ಪಡೆದಿರುವ ಅನೇಕ ವರ್ತಕರು ಕಟ್ಟಡ ನಿರ್ಮಾಣ ಮಾಡಿಸಬೇಕು ಇಲ್ಲವಾದಲ್ಲಿ ಕ್ರಮ ಕೈ ಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಸಚಿವ ಸಂಪುಟ ರಚನೆ ಸಂದರ್ಭದಲ್ಲಿ ಶಾಸಕ ಬಸನ ಗೌಡ ತುರ್ವಿಹಾಳ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಗ್ಯಾರಂಟಿ ಯೋಜನೆ ಅಧ್ಯಕ್ಷ ಮಹಿಬೂಬ್ ಸಾಬ್ ಮುದ್ದಾಪೂರ, ಕೃಷ್ಣ ಚಿಗರಿ, ಮೌಲಪ್ಪ, ವಿರೇಶ ಪಾಟೀಲ್, ಶರಣಪ್ಪ ಎಲಿಗಾರ ಇದ್ದರು.

ಸುದ್ದಿಗೋಷ್ಠಿಯಲ್ಲಿ ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು ಮಾತನಾಡಿದರು.

ನಕಲಿ ವೈದ್ಯ, ಕ್ಲಿನಿಕ್‌ಗಳ ಮೇಲೆ ದಾಳಿ

ಮುದಗಲ್ : ಪಟ್ಟಣದ ಆದರ್ಶ ಕ್ಲಿನಿಕ್ ಹಾಗೂ ನಕಲಿ ವೈದ್ಯರ ಮೇಲೆ ಜಿಲ್ಲಾ ಆಯುಷ್ ಅಧಿಕಾರಿ ಶಂಕರಗೌಡ ಪಾಟೀಲ್ ಸೋಮವಾರ ದಾಳಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗರಾಜ ಪಾಟೀಲ್ ಎಂಬುವರು ಆದರ್ಶ ಮತ್ತು ನಕಲಿ ವೈದ್ಯರ ಹಾವಳಿ ಹೆಚ್ಚಾಗಿದೆ ಎಂದು ಆರೋಗ್ಯ ಇಲಾಖೆಗೆ ದೂರು ನೀಡಿದ್ದರು. ದೂರನ್ನಾಧರಿಸಿ ಪಟ್ಟಣದ ಆದರ್ಶ ಕ್ಲಿನಿಕ್ ಮತ್ತು ನಾನಾ ನಕಲಿ ವೈದ್ಯರ ಕ್ಲಿನಿಕ್ಗಳ ಮೇಲೆ ದಾಳಿ ಮಾಡಿದಾಗ ಆದರ್ಶ ಕ್ಲಿನಿಕ್ ನಲ್ಲಿ ಅನಧಿಕೃತ ಚಿಕಿತ್ಸೆ ನೀಡುವುದು ಕಂಡು ಬಂದಿರುವುದಿಲ್ಲ. ನಕಲಿ ವೈದ್ಯರು ಕ್ಲಿನಿಕ್ಗಳಿಗೆ ಬೀಗ ಹಾಕಿರುವುದು ಕಂಡುಬಂತು. ಇದರಿಂದ ಜಿಲ್ಲಾ ಆಯುಷ್ ಅಧಿಕಾರಿ ಬಂದ ದಾರಿಗೆ ಸುಂಕವಿಲ್ಲದಂತೆ ತೆರಳಿದರು. ಈ ಕುರಿತು ನಕಲಿ ವೈದ್ಯರಿಗೆ ನೋಟಿಸ್ ನೀಡಲಾಗುವುದು ಎಂದರು.ಈ ವೇಳೆ ತಾಲೂಕು ಆರೋಗ್ಯ ಅಧಿಕಾರಿ ಅಮರೇಶ ಪಾಟೀಲ್, ವೈದ್ಯಾ ಧಿಕಾರಿ ದ್ಯಾಮಣ್ಣ ಹುಲ್ಲೂರು ಇದ್ದರು.

ಪಟ್ಟಣದ ಆದರ್ಶ ಕ್ಲಿನಿಕ್ ಹಾಗೂ ನಕಲಿ ವೈದ್ಯರ ಮೇಲೆ ಜಿಲ್ಲಾ ಆಯುಷ್ ಅಧಿಕಾರಿ ಶಂಕರಗೌಡ ಪಾಟೀಲ್ ಸೋಮವಾರ ದಾಳಿ ಮಾಡಿದರು.

ಎಂಎಲ್ಸಿ ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಲಿ

ಕುಷ್ಟಗಿ: ಎಮ್‌ಎಲ್ಸಿ ಹಾಗೂ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷರಾಗಿರುವ ಡಿ.ಟಿ.ಶ್ರೀನಿವಾಸ್ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಯಾದವ ಸಮಾಜದ ಮುಖಂಡರು ಒತ್ತಾಯಿಸಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಅವರು ಕರ್ನಾಟಕ ರಾಜ್ಯದಲ್ಲಿ ಯಾದವ (ಗೊಲ್ಲ) ಸಮುದಾಯವು ಸುಮಾರು 19.00 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿದ್ದು, ರಾಜಕೀಯವಾಗಿ ಪ್ರಾತಿನಿಧ್ಯ ಇಲ್ಲದಂತಾಗಿದೆ. ಕರ್ನಾಟಕದ ಯಾದವ ಸಮುದಾಯದ ಧೀಮಂತ ನಾಯಕರಾದ ದಿ. ಎ.ಕೃಷ್ಣಪ್ಪ ರವರ ನಂತರ ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘದ ನೇತೃತ್ವವನ್ನು ಡಿ.ಟಿ.ಶ್ರೀನಿವಾಸ್ ರವರು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಮೂಲಕ ಆಯ್ಕೆಯಾಗಿ ಮುನ್ನಡೆಸುತ್ತಿದ್ದಾರೆ. ಡಿ ಟಿ ಶ್ರೀನಿವಾಸ ಅವರು ಅನೇಕ ಪದವಿಗಳನ್ನು ಪಡೆದು ಶಿಕ್ಷಣ ತಜ್ಞರಾಗಿದ್ದಾರೆ. ಹಿಂದುಳಿದ ಪ್ರವರ್ಗ–1ರ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿ ಸುಮಾರು 95ಕ್ಕೂ ಹೆಚ್ಚು ಅತೀ ಹಿಂದು ಳಿದ ಸಮಾಜಗಳನ್ನು ಸಂಘಟಿಸಿ ಅವರನ್ನು ಮುನ್ನೆಲೆಗೆ ತರಲು ಶ್ರಮಿಸುತ್ತಿದ್ದಾರೆ. ಆದ್ದರಿಂದ ಡಿ.ಟಿ.ಶ್ರೀನಿವಾಸ ರವರನ್ನು ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಲು ಯಾದವ ಸಮಾಜ ಮುಖಂಡರು ಒತ್ತಾಯಿಸಿದ್ದಾರೆ.

ಮೊದಲ ದಿನ ಮಕ್ಕಳಿಗೆ ಶಿಕ್ಷಕರಿಂದ ಅದ್ದೂರಿ ಸ್ವಾಗತ

ರಾಯಚೂರು : ಬೇಸಿಗೆ ರಜೆ ಮುಗಿಸಿ, ಇಂದಿನಿಂದ ಆರಂಭಗೊಂಡ ಶಾಲೆಗಳಿಗೆ ವಿದ್ಯಾರ್ಥಿಗಳು ಖುಷಿ ಖುಷಿಯಿಂದಲೇ ಆಗಮಿಸಿದರು. ಶಿಕ್ಷಕರು ಮಕ್ಕಳಿಗೆ ಹೂ ನೀಡಿ ಬರಮಾಡಿಕೊಂಡು ಸಿಹಿ ಹಂಚುವ ಮೂಲಕ ಅದ್ದೂರಿಯಾಗಿ ಬರಮಾಡಿಕೊಂಡರು.

ಮಕ್ಕಳ ಸ್ವಾಗತಕ್ಕಾಗಿ ತಳಿರು ತೋರಣಗಳಿಂದ ಶಾಲೆಗಳನ್ನು ಸಿಂಗಾರಗೊಳಿಸಲಾಗಿತ್ತು. ಶಾಲೆಗಳಲ್ಲಿ ಹಬ್ಬದ ವಾತಾರಣವಿತ್ತು. ಕಳೆದ ಎರಡು ದಿನಗಳಿಂದ ಶಾಲೆಗೆ ಬರುತ್ತಿರುವ ಶಿಕ್ಷಕ ವೃಂದ ಎಲ್ಲ ಸಿದ್ಧತೆ ಮಾಡಿಕೊಂಡಿತ್ತು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು, ಸದಸ್ಯರು ಮಕ್ಕಳಿಗೆ ಸಿಹಿ ತಿನಿಸಿ ಶಾಲೆಗಳಿಗೆ ಬರಮಾಡಿಕೊಂಡರು.

ಅಕ್ಷರ ದಾಸೋಹದಿಂದ ಎಲ್ಲಾ ಶಾಲೆಗಳಿಗೆ ಬಿಸಿಯೂಟ ಪೂರೈಕೆಯಾಗಿದ್ದು, ಹೆಸರು ಬೇಳೆ ಪಾಯಸ ಬಡಿಸಲಾಯಿತು. ವಿದ್ಯಾರ್ಥಿಗಳು ಲವಲವಿಕೆಯಿಂದಲೇ ಶಾಲೆಗೆ ಬಂದಿದ್ದಾರೆ. ಎಲ್ಲಾ ಶಿಕ್ಷಕರು ಸಹ ಹಾಜರಿದ್ದು, ಮಕ್ಕಳನ್ನು ಸ್ವಾಗತಿಸಿದರು. ಮೊದಲ ದಿನವೇ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಉತ್ಸಾಹದಿಂದ ಶಾಲೆಗಳತ್ತ ಹೆಜ್ಜೆ ಹಾಕಿದರು. ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರ ವಿತರಿಸಲಾಯಿತು.

ಸೋಮವಾರ ಶಾಲೆಗೆ ಬಂದ ಮಕ್ಕಳಿಗೆ ಶಿಕ್ಷಕರ ಹೂ ನೀಡಿ ಬರಮಾಡಿಕೊಂಡು ಸಿಹಿ ಹಂಚುವ ಮೂಲಕ ಅದ್ದೂರಿಯಾಗಿ ಬರಮಾಡಿಕೊಂಡರು.

ಜಿಲ್ಲಾಡಳಿತದಿಂದ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ| ಆಯುಕ್ತ ಬಿ.ವೆಂಕಟಸಿಂಗ್ ಹೇಳಿಕೆ

ಮಾಹಿತಿ ಹಕ್ಕು ಸಾರ್ವಜನಿಕರಿಗೆ ದೊರೆತ ಕಾನೂನುಬದ್ಧ ಅಧಿಕಾರ

ವಿಶ್ವವಾಣಿ ಸುದ್ದಿಮನೆ ಹೊಸಪೇಟೆ

ಸಾರ್ವಜನಿಕರಿಗೆ ಮಾಹಿತಿ ಹಕ್ಕು ಎಂಬುದು ಸಾಂವಿಧಾನಿಕ ಬದ್ದವಾಗಿ ದೊರೆತ ಕಾನೂನು ಹಕ್ಕು. ಕಾಯ್ದೆಯ ಜಾರಿಯಾಗಿ 20 ವರ್ಷ ಗತಿಸಿದೆ. ಈ ಕಾಯ್ದೆ 2005ರಲ್ಲಿ ಜಾರಿಯಾದರೂ ಇಂದಿಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಕೆಲ ಮಾಹಿತಿ ಕೊರತೆ ಇದೆ. ಆದ್ದರಿಂದ ಅರ್ಜಿ ವಿಲೇವಾರಿ ಮಾಡಲು ವಿವಿಧ ರೀತಿ ಸಂಕಷ್ಟ ಎದುರಿಸುತ್ತಿದ್ದಾರೆ. ಅದಕ್ಕಾಗಿಯೇ ರಾಜ್ಯಾದ್ಯಂತ ಜಾಗೃತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಅದರಂತೆ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದು, ಇದು 5ನೇ ಜಿಲ್ಲೆಯಾಗಿದೆ ಎಂದು ಕಲಬುರಗಿ ಪೀಠದ ಆಯುಕ್ತ ವೆಂಕಟಸಿಂಗ್ ಹೇಳಿದರು.

ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣ ಸಭಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ, ತಾಲೂಕು ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಒಂದು ದಿನದ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿಯೊಂದು ಸರಕಾರಿ ಇಲಾಖೆ ಹಾಗೂ ಕಚೇರಿಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಾರ್ವಜನಿಕರು ಕೇಳುವ ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕು. ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ಮತ್ತು ಭ್ರಷ್ಟಾಚಾರವನ್ನು ನಿಯಂತ್ರಿಸುವ ಉದ್ದೇಶದಿಂದ ಸರಕಾರವು ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಿದೆ. ಸಾರ್ವಜನಿಕರು ಕೇಳಿದ ಮಾಹಿತಿ ಬೇರೆ ಇಲಾಖೆಗೆ ಸಂಬಂಧಿಸಿದ್ದಾಗಿದ್ದರೆ, ವಿಷಯ ನಿರ್ವಾಹಕರು ಅಥವಾ ಅಧಿಕಾರಿಗಳು ವಿಳಂಬ ಮಾಡದೆ ತಕ್ಷಣವೇ ಆ ಅರ್ಜಿಯನ್ನು ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಬೇಕು ಎಂದರು.

ಯಾವುದೇ ಸಂಘ ಸಂಸ್ಥೆಯ ಹೆಸರಿನಲ್ಲಿ ಮಾಹಿತಿ ಕೇಳುವಾಗ, ಆ ಸಂಸ್ಥೆಯ ಪದಾಧಿಕಾರಿಯು ಮೊದಲು ತನ್ನ ಹೆಸರನ್ನು ಸ್ಪಷ್ಟವಾಗಿ ಸೂಚಿಸಬೇಕು. ಹಾಗಿದ್ದಲ್ಲಿ ಮಾತ್ರ ಮಾಹಿತಿ ನೀಡಬೇಕು, ಇಲ್ಲದಿದ್ದರೆ ಅರ್ಜಿಯನ್ನು ತಿರಸ್ಕರಿಸಬಹುದು ಎಂದು ತಿಳಿಸಿದರು.

ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಡಾ.ಹರೀಶ್ ಕುಮಾರ್‌ಮಾತನಾಡಿದರು. ಕಾರ್ಯಾಗಾರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಇದ್ದರು.

ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಒಂದು ದಿನದ ಕಾರ್ಯಾಗಾರ ಕಾರ್ಯಕ್ರಮವನ್ನು ಕಲಬುರಗಿ ಪೀಠದ ಆಯುಕ್ತ ವೆಂಕಟಸಿಂಗ್ ಉದ್ಘಾಟಿಸಿದರು.

ಅಧಿಕಾರಿಗಳು ತಾಳ್ಮೆಯಿಂದ ಕಾರ್ಯ ನಿರ್ವಹಿಸಿ

ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಕೆ.ಬದ್ರುದ್ದೀನ್ ಮಾತನಾಡಿ, ಈ ಕಾಯ್ದೆ ಅತ್ಯಂತ ಸರಳ ಕಾಯ್ದೆ. ತುಂಬ ಸುಲಭವಾಗಿ ಆರಾಮದಾಯಕವಾಗಿ ನಿಭಾಯಿಸಬಹುದು. ಸರಕಾರದ ಕೆಲಸ ಎಲ್ಲರಿಗೂ ಸಿಗುವಂತದಲ್ಲ. ಆದ್ದರಿಂದ ಅಧಿಕಾರಿಗಳು ಸಹಾನುಭೂತಿ, ತಾಳ್ಮೆಯಿಂದ ಕಾರ್ಯ ನಿರ್ವಹಿಸಬೇಕು. ಮಾಹಿತಿ ಹಕ್ಕು ಅರ್ಜಿ ಬಂದಾಗ ತಾಳ್ಮೆ ಸಹಾನುಭೂತಿಯಿಂದ ಓದಿಕೊಂಡು ಅರ್ಥಮಾಡಿಕೊಂಡು ಪ್ರತ್ಯುತ್ತರ ನೀಡಬೇಕು ಎಂದು ತಿಳಿಸಿದರು.

ಮಾಹಿತಿದಾರನು ಅರ್ಜಿ ಸಲ್ಲಿಸಿದ 30 ದಿನಗಳ ಒಳಗಾಗಿ ಅರ್ಜಿದಾರರಿಗೆ ಮಾಹಿತಿ ತಲುಪಿಸಬೇಕು. ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಅರ್ಜಿದಾರರಿಗೆ 100 ಪುಟಗಳವರೆಗೆ ಉಚಿತವಾಗಿ ಮಾಹಿತಿ ನೀಡಬೇಕು. ಆದರೆ, ಅವರು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರ ಅರ್ಜಿಯೊಂದಿಗೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

– ವೆಂಕಟಸಿಂಗ್, ಕಲಬುರಗಿ ಪೀಠದ ಆಯುಕ್ತ

6 ಆರ್‌ಸಿಬಿ ಗೆಲುವಿಗೆ ಕಾರಣ

ತಾರೆಯರ ಮೇಲೆ ಅವಲಂಬನೆಯಿಲ್ಲ, ಸಂಘಟಿತ ಆಟ, ಸಂತುಲಿತ ತಂಡಕ್ಕೆ ಮಹತ್ವ

ಅಹ್ಮದಾಬಾದ್: 2007ರಿಂದ 2024ರವರೆಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾಕ್ ಕಾಲಿಸ್, ಕ್ರಿಸ್ ಗೇಲ್, ಎಬಿ ಡಿವಿಲಿಯರ್ಸ್, ಜಹೀರ್ ಖಾನ್ ಹೀಗೆ ಹತ್ತಾರು ತಾರಾ ಆಟಗಾರರು ಬಂದು ಹೋಗಿದ್ದಾರೆ. ಆದರೆ ಯಾವತ್ತೂ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿರಲೇ ಇಲ್ಲ. ಪ್ರತಿಬಾರಿಯೂ ಈ ಬಾರಿ ಕಪ್ ನಮ್ದೇ ಎಂದು ಹೇಳುವಾಗಲೆಲ್ಲಾ ಕ್ರಿಕೆಟ್ ವಲಯದಲ್ಲಿ ಒಂದು ತಮಾಷೆ ಅನ್ನಿಸುತ್ತಿತ್ತು. ಈಗ ಅದೇ ತಂಡ ಸತತ 2ನೇ ಬಾರಿ ಚಾಂಪಿಯನ್! ವಿರಾಟ್ ಕೊಹ್ಲಿ ದೀರ್ಘಕಾಲ ತಂಡದ ನಾಯಕರಾಗಿದ್ದರೂ ಆಗದ್ದು ಈ ಎರಡು ವರ್ಷದಲ್ಲಿ ಆಗಿದೆ. ಆರ್‌ಸಿಬಿ ತಂಡದ ಆಡಳಿತ ವರ್ಗದ ಜಾಣ್ಮೆಯ ನಿರ್ಧಾರಗಳೇ ಈ ಬದಲಾವಣೆಗೆ ಕಾರಣ ಎಂದು ಧೈರ್ಯವಾಗಿ ಹೇಳಬಹುದು. ಈ ವಿಶ್ಲೇಷಣೆ ಇಲ್ಲಿದೆ.

ನಾಯಕತ್ವದ ಬದಲಾವಣೆ

1 2024ರ ಸೀಸನ್‌ನಲ್ಲಿ ನಾಯಕನಾಗಿದ್ದ ಹಿರಿಯ ಆಟಗಾರ ಫಾ ಡು ಪ್ಲೆಸಿಸ್ ಅವರಿಗೆ ಕೊಕ್ ನೀಡಿ ರಜತ್ ಪಾಟೀದಾರ್ ಅವರನ್ನು ತಂಡದ ನಾಯಕನನ್ನಾಗಿ ನೇಮಿಸಿದಾಗ ಅಚ್ಚರಿಯಾಗಿತ್ತು. ಕೇವಲ ಮಧ್ಯಪ್ರದೇಶ ರಣಜಿ ತಂಡವನ್ನಷ್ಟೇ ಮುನ್ನಡೆಸಿ ಅನುಭವವಿದ್ದ ರಜತ್ ಇಷ್ಟು ದೊಡ್ಡ ಒತ್ತಡವನ್ನು ತಾಳಿಕೊಳ್ಳಬಲ್ಲನೇ ಎಂಬ ಪ್ರಶ್ನೆ ಸಹಜವಾಗಿದ್ದೇ ಬಿಡಿ. ಆದರೆ ಮೈದಾನದಲ್ಲಿ ಶಾಂತಚಿತ್ತರಾಗಿ ನಿರ್ಧಾರ ಕೈಗೊಳ್ಳುವ ಪಾಟೀದಾರ್ 10 ವರ್ಷಗಳ ನಾಯಕತ್ವದ ಅನುಭವವಿದ್ದಂತೆ ಕಂಡುಬಂದರು. ಯಾವುದೇ ತಾರಾ ವರ್ಚಸ್ಸಿನ ಹಂಗಿಲ್ಲದೆ ತಂಡವನ್ನು ಮುನ್ನಡೆಸಿದರು. ಕೊಹ್ಲಿಯ ಅನುಭವವನ್ನು ಯಥೇಚ್ಛವಾಗಿ ಬಳಸಿಕೊಂಡರು.

ಸಾಂಘಿಕ ಬ್ಯಾಟಿಂಗ್ ಪ್ರದರ್ಶನ

2 ಬೇಕಿದ್ದರೆ ಕೆಲ ತಂಡಗಳು ಈ ಬಾರಿ ಆಡಿದ ಪರಿ ನೋಡಿ. ಫೈನಲ್‌ನಲ್ಲೇ ಸಿಕ್ಕ ಗುಜರಾತ್ ಟೈಟಾನ್ಸ್ ಗಿಲ್, ಸುದರ್ಶನ್ ಮತ್ತು ಜೋಸ್ ಬಟ್ಲರ್ ಮೇಲೆ ಅವಲಂಬಿತವಾಗಿದೆ.

ರಾಜಸ್ಥಾನ 15ರ ಹರೆಯದ ಬಾಲಕ ವೈಭವ್ ಸೂರ್ಯವಂಶಿ ಮೇಲೆ, ಡೆಲ್ಲಿ ಕೆ.ಎಲ್.ರಾಹುಲ್ ಅವರ ಕಡೆಗೆ ನೋಡುತ್ತಿತ್ತು. ಅದೇ ಆರ್‌ಸಿಬಿ ಅಗ್ರಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ, ವೆಂಕಟೇಶ್ ಅಯ್ಯರ್, ದೇವದತ್ ಪಡಿಕ್ಕಲ್, ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟೀದಾರ್, ಟಿಮ್ ಡೇವಿಡ್, ಜಿತೇಶ್ ಶರ್ಮಾ ತಂಡದ ಬಹು ದೊಡ್ಡ ಶಕ್ತಿಯಾದರು.

ಬೌಲಿಂಗ್ ವೈವಿಧ್ಯ

3 ಈ ಟೂರ್ನಿ ಪ್ರಾರಂಭಕ್ಕೂ ಮುನ್ನ ಎಲ್ಲರ ಕಣ್ಣಿದ್ದದ್ದು ಜೋಶ್ ಹೇಜಲ್‌ವುಡ್ ಅವರ ಪ್ರದರ್ಶನದ ಬಗ್ಗೆ. ಆದರೆ ಎದುರಾಳಿ ತಂಡಗಳನ್ನು ಇನ್ನಿಲ್ಲದಂತೆ ಕಾಡಿದ್ದು ಮಾತ್ರ ಸ್ವಿಂಗ್ ಕಿಂಗ್ ಭುವನೇಶ್ವರ್ ಕುಮಾರ್. ಅವರು ಟೂರ್ನಿಯಲ್ಲಿ 28 ವಿಕೆಟ್ ಕಿತ್ತು ಕೇವಲ ಒಂದು ವಿಕೆಟ್‌ನಿಂದ ಪರ್ಪಲ್ ಕ್ಯಾಪ್‌ನಿಂದ ವಂಚಿತರಾದರು. ಜೇಕಬ್ ಡಫಿ, ಯುವ ಮಧ್ಯಮ ವೇಗಿ ರಸಿಖ್ ಸಲಾಂ (12 ಪಂದ್ಯಗಳಿಂದ 19 ವಿಕೆಟ್), ಕೃಣಾಲ್ ಪಾಂಡ್ಯ ಇವರ ಪರಿಣಾಮಕಾರಿ ಆಟ ಸಾಮಾನ್ಯವಾದದ್ದಲ್ಲ.

ಕೊಹ್ಲಿಯ ಸ್ಥಿರತೆ, ಮಾರ್ಗದರ್ಶನ

4 ಆರ್‌ಸಿಬಿ ತಂಡದಲ್ಲಿದ್ದ ಏಕೈಕ ತಾರೆ, ಗೆಲ್ಲಿಸಬಲ್ಲ ಆಟಗಾರ ವಿರಾಟ್ ಕೊಹ್ಲಿ. ಐಪಿಎಲ್ ಪ್ರಾರಂಭವಾದಾಗಿನಿಂದಲೂ ತಂಡದ ಭಾಗವಾಗಿರುವವರು. ಕಳೆದ ನಾಲ್ಕು ಋತುಗಳಲ್ಲಿ ಸತತವಾಗಿ 600 ರನ್ ದಾಟಿದ್ದಾರೆ. ಜೊತೆಗೆ ಅವರು ಇತ್ತೀಚಿನ 2 ವರ್ಷಗಳಲ್ಲಿ ಆಡಿದಷ್ಟು ಮುಕ್ತವಾಗಿ, ಒತ್ತಡರಹಿತವಾಗಿ ಹಿಂದೆಂದೂ ಆಡಿರಲಿಕ್ಕಿಲ್ಲ. ಹಿರಿಯಣ್ಣನಾಗಿ ತಂಡಕ್ಕೆ ತಮ್ಮೆಲ್ಲಾ ಅನುಭವವನ್ನು ಧಾರೆಯೆರೆಯುತ್ತಿದ್ದಾರೆ.

5. ಸಾಲ್ಟ್ ಗೈರು, ಕಾಡದ ಕೊರತೆ

5 ಆರ್‌ಸಿಬಿಯ ಆರಂಭಿಕರಾಗಿ ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ಬಹಳ ಹೊಂದಿಕೊಂಡಿದ್ದರು. ಆದರೆ ಫಿಲ್ ಸಾಲ್ಟ್ ಅವರು ಗಾಯದ ಕಾರಣಕ್ಕಾಗಿ ತಂಡದಿಂದ ಬೇರ್ಪಟ್ಟಾಗ ಪ್ಲೇಯಿಂಗ್ ಇಲೆವನ್‌ನಲ್ಲಿ ಅವಕಾಶ ಪಡೆದ ಜೇಕಬ್ ಬೆಥೆಲ್ ಯಶಸ್ವಿಯಾಗಲಿಲ್ಲ.

ಹಾಗೆಂದು ಅವರ ವಿಕೆಟ್ ಆರ್‌ಸಿಬಿಯ ಬ್ಯಾಟಿಂಗ್ ಕ್ರಮಾಂಕದ ಸ್ಥಿರತೆಯ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ವೆಂಕಟೇಶ್ ಅಯ್ಯರ್ ಆ ಸ್ಥಾನವನ್ನು ತುಂಬಿದರು. ಸಾಲ್ಟ್ ಮರಳಿ ದರೂ ತಂಡ ಅಯ್ಯರ್‌ರನ್ನೇ ಮುಂದುವರಿಸಿತು.

ಧೃತಿಗೆಡದ ಮನೋಭಾವ

6 ಎಂತಹದ್ದೇ ಪರಿಸ್ಥಿತಿಯಲ್ಲೂ ಧೃತಿಗೆಡದೆ ಆಡುವುದು ತಂಡವನ್ನು ಯಾವ ಹಂತಕ್ಕೆ ಬೇಕಾದರೂ ಏರಿಸಬಲ್ಲುದು. ಆರ್‌ಸಿಬಿಯ ದೊಡ್ಡ ಪ್ಲಸ್ ಪಾಯಿಂಟ್ ಅದೇ.

ಒಬ್ಬ ಬ್ಯಾಟರ್ ಔಟಾದ ಎಂದೊಡನೆ ಮುಂದಿನವರು ಅದನ್ನು ತನಗೆ ಸಿಕ್ಕ ಅವಕಾಶ ಎಂಬಂತೆ ಬಳಸಿಕೊಂಡರು. ಬೌಲರ್‌ಗಳೂ ಸಂದರ್ಭಕ್ಕೆ ತಕ್ಕಂತೆ ತಾಳಿಕೊಂಡು ಆಡಿದರು.

ಗುಜರಾತ್ ಆಟಗಾರರಿಗೆ ನೋವಿನ ಮೇಲೆ ನೋವು

ಗುಜರಾತ್ ಬಸ್‌ನಲ್ಲಿ ಬೆಂಕಿ!

ಅಹ್ಮದಾಬಾದ್: ಐಪಿಎಲ್ ಫೈನಲ್‌ನಲ್ಲಿ ಆರ್‌ಸಿಬಿ ವಿರುದ್ಧ ಸೋತು ನಿರಾಸೆ ಅನುಭವಿಸಿದ ಗುಜರಾತ್ ಟೈಟಾನ್ಸ್ ತಂಡ ಅದಾದ ಸ್ವಲ್ಪ ಸಮಯದಲ್ಲೇ ಮತ್ತೊಂದು ಸಂಕಷ್ಟದಿಂದ ಪಾರಾಗಿದೆ. ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಪಂದ್ಯ ಮುಗಿಸಿ ಹೋಟೆಲ್‌ಗೆ ತೆರಳುತ್ತಿದ್ದ ವೇಳೆ ಗುಜರಾತ್ ಟೈಟಾನ್ಸ್ ತಂಡ ಪ್ರಯಾಣಿಸುತ್ತಿದ್ದ ಬಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಕಾಣಿಸಿಕೊಂಡಿದೆ. ಆಟಗಾರರನ್ನೆಲ್ಲ ಸುರಕ್ಷಿತವಾಗಿ ಕೆಳಕ್ಕಿಳಿಸಲಾಗಿದೆ. ಆದರೆ ಇನ್ನೊಂದು ಬಸ್‌ಗಾಗಿ ಒಂದು ಗಂಟೆ ಸ್ಥಳದಲ್ಲೇ ಕಾದಿದ್ದಾರೆ. ಬಳಿಕ ಆಟ ಗಾರರನ್ನು ಬೇರೆ ಬಸ್‌ನಲ್ಲಿ ಕಳುಹಿಸಿ ಕೊಡಲಾಗಿದೆ.



ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ವರದಿಗಳು ತಿಳಿಸಿವೆ.

ಪ್ಲೇಆಫ್ಸ್ ತಲುಪಿದಾಗಿನಿಂದ ಗುಜರಾತ್ ಟೈಟಾನ್ಸ್ ಪ್ರಯಾಣ ಅಷ್ಟೇನೂ ಸುಖಕರವಾಗಿರಲಿಲ್ಲ. ಒತ್ತಡದ ಶೆಡ್ಯೂಲ್‌ನಲ್ಲಿ ತಂಡ ಸಂಚರಿಸಿತ್ತು. ಮೇ 27ರಂದು ಆರ್‌ಸಿಬಿ ವಿರುದ್ಧ ಮೊದಲ ಕ್ವಾಲಿಫೈಯರ್ ಪಂದ್ಯ ಸೋತ ಗುಜರಾತ್, ಮೇ 29ಕ್ಕೆ 2ನೇ ಕ್ವಾಲಿಫೈಯರ್ ಆಡಲು ಮುಲ್ಲಾಂಪುರಕ್ಕೆ ಬಂದಿತ್ತು. ಅಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಮಣಿಸಿ ಫೈನಲ್‌ಗೇರಿತ್ತು. ಫೈನಲ್ ಆಡಲು ಅಹಮದಾಬಾದ್‌ಗೆ ಬರಬೇಕಿದ್ದ ಗುಜರಾತ್ ಟೈಟಾನ್ಸ್ ತಂಡಕ್ಕೆ ಪ್ರತಿಕೂಲ ವಾತಾವರಣ ಅಡ್ಡಿಯಾಗಿತ್ತು. ಹಾಗಾಗಿ, ಮೇ 30ರಂದು ರಾತ್ರಿ 10 ಗಂಟೆ ಸುಮಾರಿಗೆ ಗುಜರಾತ್ ತಂಡ ಅಹ್ಮದಾಬಾದ್ ತಲುಪಿತ್ತು. ಸತತವಾಗಿ ದೊಡ್ಡ ಪಂದ್ಯಗಳನ್ನು ಎದುರಿಸಿದ ಗುಜರಾತ್ ತಂಡಕ್ಕೆ ಸೂಕ್ತ ವಿಶ್ರಾಂತಿ ಮತ್ತು ಅಭ್ಯಾಸಕ್ಕೆ ಸಮಯ ಸಿಕ್ಕಿಲ್ಲ ಎಂದು ವರದಿಗಳು ತಿಳಿಸಿವೆ.

ವೈಭವ್ ಸೂರ್ಯವಂಶಿಗೆ ಕಾರು ಸಿಕ್ಕಿದೆ ಓಡಿಸಲು ಇನ್ನೂ 3 ವರ್ಷ ಬೇಕು!

5 ಪ್ರಶಸ್ತಿ, 45 ಲಕ್ಷ ರು. ನಗದು, ಒಂದು ಸಿಯೆರಾ ಕಾರು

ಅಹ್ಮದಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲೇ ಹಿಂದೆಂದೂ ಕಾಣದ ದಾಖಲೆಯೊಂದಕ್ಕೆ ಪ್ರಸಕ್ತ ಟೂರ್ನಿ ಸಾಕ್ಷಿಯಾಗಿದೆ. ಕೇವಲ 15 ವರ್ಷದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ, ಐಪಿಎಲ್ ಟೂರ್ನಿಯಲ್ಲಿ ಗರಿಷ್ಠ ರನ್ ಕಲೆಹಾಕುವ ಮೂಲಕ ಆರೆಂಜ್ ಕ್ಯಾಪ್ ಗೆದ್ದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಅವರಿಗೆ ಐದು ಪ್ರಶಸ್ತಿ ಸಿಕ್ಕಿದೆ. ಅದರಿಂದ 45 ಲಕ್ಷ ರು. ಹಣ, ಜೊತೆಗೆ ಒಂದು ಸಿಯೆರಾ ಕಾರು ಸಿಕ್ಕಿದೆ. ವಿಷಯವೆಂದರೆ ಇನ್ನೂ 15 ವರ್ಷದ ವೈಭವ್‌ಗೆ ಕಾರು ಚಾಲನಾ ಪರವಾನಗಿ ಸಿಗಲು ಇನ್ನೂ 3 ವರ್ಷಬೇಕು. ಅರ್ಥಾತ್ 18 ವರ್ಷ ಆಗಿರಬೇಕು! ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದ ವೈಭವ್, ಆಡಿದ 16 ಪಂದ್ಯಗಳಿಂದ ಒಟ್ಟು 776 ರನ್ ಸಿಡಿಸಿ ಈ ಸಾಧನೆ ಮಾಡಿದ್ದಾರೆ.

ನನಗೂ ಟೆಸ್ಟ್ ಕ್ರಿಕೆಟ್ ಆಡೋ ಆಸೆಯಿದೆ: ವೈಭವ್

ಅಹ್ಮದಾಬಾದ್: ಆಕ್ರಮಣಕಾರಿ ಆಟಕ್ಕೆ ಹೆಸರಾಗಿರುವ ವೈಭವ್ ಸೂರ್ಯವಂಶಿ ಗೂ ಟೆಸ್ಟ್ ಆಡುವ ಆಸೆಯಿದೆ. ಹಾಗಂತ ಅವರೇ ಹೇಳಿಕೊಂಡಿದ್ದಾರೆ. ಐಪಿಎಲ್ ಫೈನಲ್ ಪಂದ್ಯ ಮುಗಿದ ಬಳಿಕ ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಜೊತೆ ಮಾತನಾಡಿರುವ ವೈಭವ್ ಸೂರ್ಯವಂಶಿ, ತಮಗೆ ಟೆಸ್ಟ್ ಕ್ರಿಕೆಟ್ ಆಡುವ ತೀವ್ರ ಬಯಕೆಯಿದೆ. ಕ್ರಿಕೆಟ್‌ನ ಅಂತಿಮ ಮತ್ತು ನೈಜ ಸ್ವರೂಪವೇ ಟೆಸ್ಟ್ ಕ್ರಿಕೆಟ್ ಎಂದು ನನ್ನ ತಂದೆ ಸದಾ ಹೇಳುತ್ತಿದ್ದರು. ಯಾವಾಗಲೂ ಬ್ಯಾಟಿಂಗ್ ದಂತಕಥೆ ಸುನೀಲ್ ಗಾವಸ್ಕರ್ ಅವರ ಉದಾಹರಣೆಯನ್ನು ನನಗೆ ನೀಡುತ್ತಿದ್ದರು ಎಂದು ವೈಭವ್ ತಿಳಿಸಿದ್ದಾರೆ.

ಚಿನ್ನಸ್ವಾಮಿ ಮೈದಾನದ ಆಸನ ಸಾಮರ್ಥ್ಯ 55000ಕ್ಕೇರಿಸಲು ಕೆಎಸ್‌ಸಿಎ ನಿರ್ಧಾರ ಕಾಮಗಾರಿ ಮುಕ್ತಾಯಕ್ಕೆ 2 ವರ್ಷ ಬೇಕು | ರಾಯಪುರದಲ್ಲಿ ಆರ್‌ಸಿಬಿ ಆಟ ಸಾಧ್ಯತೆ

ಮುಂದಿನ ವರ್ಷ ಚಿನ್ನಸ್ವಾಮಿಯಲ್ಲಿ ಆರ್‌ಸಿಬಿ ಆಟ ಇಲ್ಲ?

ಬೆಂಗಳೂರು: 18ನೇ ಆವೃತ್ತಿಯ ಐಪಿಎಲ್ ಚಾಂಪಿಯನ್ ಆಗಿದ್ದ ಆರ್‌ಸಿಬಿ, ಈ ಬಾರಿ ಫೈನಲ್ ಪಂದ್ಯವನ್ನು ಬೆಂಗಳೂರಿನಲ್ಲೇ ಆಡ ಬೇಕಾಗಿತ್ತು. ಆದರೆ ಮೈದಾನ ಚಿಕ್ಕದು ಎಂಬ ಕಾರಣಕ್ಕೆ ಪಂದ್ಯವನ್ನು ಅಹ್ಮದಾಬಾದ್‌ಗೆ ಸ್ಥಳಾಂತ ರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಚಿನ್ನಸ್ವಾಮಿ ಮೈದಾನದ ಆಸನ ಸಾಮರ್ಥ್ಯವನ್ನು 55000 ಕ್ಕೇರಿಸಲು ಕೆಎಸ್‌ಸಿಎ ನಿರ್ಧರಿಸಿದೆ. ಇನ್ನೂ 2 ವರ್ಷ ಕಾಮಗಾರಿ ನಡೆಯುವುದರಿಂದ ಮುಂದಿನ ವರ್ಷ ಚಿನ್ನಸ್ವಾಮಿಯಲ್ಲಿ ಆರ್‌ಸಿಬಿ ಆಡುವುದು ಸಾಧ್ಯವಿಲ್ಲ. ಬದಲಿ ಮೈದಾನವಾಗಿ ಛತ್ತೀಸ್‌ಗಢದ ರಾಯಪುರ ಆಯ್ಕೆಯಾಗುವ ನಿರೀಕ್ಷೆಯಿದೆ.

ಮುಂಬರುವ 20ನೇ ಐಪಿಎಲ್ ಸೀಸನ್‌ನಲ್ಲೂ ಆರ್‌ಸಿಬಿಯೇ ಕಪ್ ಗೆದ್ದು ಹ್ಯಾಟ್ರಿಕ್ ಚಾಂಪಿಯನ್ ಆಗಿ ಇತಿಹಾಸ ಸೃಷ್ಟಿಸಲಿ ಎಂಬುದು ಅಭಿಮಾನಿಗಳ ಬಯಕೆ. ಈ ನಡುವೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಚಿನ್ನಸ್ವಾಮಿ ಕ್ರೀಡಾಂಗಣದ ನವೀಕರಣಕ್ಕೆ ಮುಂದಾಗಿರುವುದರಿಂದ ಮುಂದಿನ ಐಪಿಎಲ್‌ನಲ್ಲಿ ಬೆಂಗಳೂರು ತಂಡಕ್ಕೆ ತವರಿನ ಮೈದಾನ ಯಾವುದು ಎನ್ನುವ ಪ್ರಶ್ನೆ ಮೂಡಿದೆ.

52 ವರ್ಷದ ಹಿಂದೆ ನಿರ್ಮಾಣವಾಗಿದ್ದ ಆರ್‌ಸಿಬಿಯ ತವರು ನೆಲ ಚಿನ್ನಸ್ವಾಮಿ ಕ್ರೀಡಾಂಗಣದ ಸದ್ಯದ 35,000 ಆಸನಗಳ ಸಾಮರ್ಥ್ಯವನ್ನು 55,000 ಆಸನಗಳಿಗೆ ಹೆಚ್ಚಿಸಲು ಕೆಎಸ್‌ಸಿಎ ನಿರ್ಧರಿಸಿದೆ. ಹೀಗಾಗಿ ಇಡೀ ಕ್ರೀಡಾಂಗಣವನ್ನು ಕೆಡವಿ ಹೊಸದಾಗಿ ನಿರ್ಮಿಸುವ ಅನಿವಾರ್ಯತೆ ಇದೆ. ಎಷ್ಟೇ ತ್ವರಿತವಾಗಿ ಕಾಮಗಾರಿ ನಡೆದರೂ ಸಂಪೂರ್ಣಗೊಳ್ಳಲು ಕನಿಷ್ಠ ಎರಡು ವರ್ಷ ಬೇಕಾಗಬಹುದು. ವಸ್ತುಸ್ಥಿತಿಯಲ್ಲಿ ಚಾಂಪಿ ಯನ್ ತಂಡದ ತವರು ನೆಲದಲ್ಲೇ ಮುಂದಿನ ಆವೃತ್ತಿಯ ಫೈನಲ್ ಪಂದ್ಯ ನಡೆಯಬೇಕು. ಆದರೆ ಆರ್‌ಸಿಬಿ ಕಳೆದ ಬಾರಿಯ ಚಾಂಪಿಯನ್ ಆಗಿದ್ದರೂ ಈ ಬಾರಿ ಫೈನಲ್ ಆಡಿಸಲಿಲ್ಲ. ಮುಂದಿನ ಬಾರಿಯೂ ಅದೇ ಸ್ಥಿತಿ ಪುನರಾ ವರ್ತನೆಯಾಗುವ ಸಾಧ್ಯತೆಯಿದೆ. ಈ ಋತುವಿನಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಕೋಲ್ಕತಾ ನೈಟ್‌ರೈಡರ್ಸ್ ವಿರುದ್ಧದ ಎರಡು ಪಂದ್ಯಗಳಿಗೆ ರಾಯಪುರವನ್ನು ತನ್ನ ತವರು ಕ್ರೀಡಾಂಗಣವನ್ನಾಗಿ ಆಯ್ಕೆ ಮಾಡಿ ಕೊಂಡಿತ್ತು. ಹಾಗಾಗಿ ಮುಂದಿನ ಸೀಸನ್‌ನಲ್ಲಿಯೂ ಆರ್‌ಸಿಬಿ ರಾಯಪುರವನ್ನು ತವರು ಮೈದಾನವಾಗಿ ಮುಂದುವರಿಸುವ ಸಾಧ್ಯತೆ ಇದೆ.

ವಿ ಟಾಕೀಸ್

ಚಂದನವನಕ್ಕೆ ಜಾನ್ವಿ ಕಪೂರ್

ಬಾಲಿವುಡ್ ಬೆಡಗಿ ಜಾನ್ವಿ ಕಪೂರ್ ಟಾಲಿವುಡ್ ಅಂಗಳದಲ್ಲಿ ಪೆದ್ದಿಯಾಗಿ ಮುದ್ದಾಗಿ ಮಿಂಚುತ್ತಿದ್ದಾರೆ. ಆ ಮೂಲಕ ಜಾನ್ವಿ ಪ್ಯಾನ್ ಇಂಡಿಯಾ ನಟಿಯಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಜಾನ್ವಿ ತೆಲುಗು ಚಿತ್ರದ ಬಳಿಕ ಕನ್ನಡ ಚಿತ್ರರಂಗಕ್ಕೂ ಬರುತ್ತಾರಾ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಅದಕ್ಕೆ ಜಾನ್ವಿ ಅವರೇ ಉತ್ತರಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಜಾನ್ವಿ, ಕನ್ನಡದಲ್ಲಿಯೂ ಒಳ್ಳೆಯ ಸಿನಿಮಾಗಳು ಮೂಡಿಬರುತ್ತಿವೆ. ಇಡೀ ಭಾರತೀಯ ಚಿತ್ರರಂಗವೇ ಸ್ಯಾಂಡಲ್‌ವುಡ್‌ನತ್ತ ತಿರುಗಿ ನೋಡುವಂತಾಗಿದೆ. ಈ ಹಿಂದೆಯೇ ನನ್ನ ತಾಯಿ ಕನ್ನಡ ಸಿನಿಮಾರಂಗದ ಬಗ್ಗೆ ಹೇಳುತ್ತಿದ್ದರು. ಆಗಲೇ ಸ್ಯಾಂಡಲ್‌ವುಡ್ ಬಗ್ಗೆ ತಿಳಿದಿದ್ದೇನೆ. ಶಿವಣ್ಣ ಅವರಂತಹ ಅದ್ಭುತ ನಟರು ಕನ್ನಡ ಚಿತ್ರರಂಗದಲ್ಲಿದ್ದಾರೆ. ಅದು ನಿಜಕ್ಕೂ ಹೆಮ್ಮೆ ವಿಚಾರ. ಅವರಂತಹ ನಟರೂ ಚಿತ್ರರಂಗದಲ್ಲಿರುವಾಗ ಅವಕಾಶಗಳು ಬಂದರೆ ಬೇಡ ಅನ್ನಲಾದೀತೆ. ಮುಂದೆ ಒಳ್ಳೆಯ ಕಥೆ, ನಿರ್ದೇಶಕರು ಸಿಕ್ಕಿದರೆ ಖಂಡಿತವಾಗಿಯೂ ಕನ್ನಡ ಚಿತ್ರರಂಗದಲ್ಲಿ ನಟಿಸುತ್ತೇನೆ ಎಂದು ಜಾನ್ವಿ ಕಪೂರ್ ಸಂತಸದಿಂದ ನುಡಿದಿದ್ದಾರೆ.

ಪೆದ್ದಿ ಗ್ರಾಮೀಣ ಭಾಗದ ಕಥೆಯನ್ನು ಒಳಗೊಂಡಿದ್ದು, ರಾಮ್‌ಚರಣ್ ನಾಯಕನಾಗಿ ನಟಿಸಿದ್ದಾರೆ. ಹಳ್ಳಿಗಾಡಿನ ಕ್ರಿಕೆಟ್ ಜತೆಗೆ ಕುಸ್ತಿ ಪಂದ್ಯಾವಳಿಯ ಸ್ಟೋರಿಯೂ ತೆರೆಯಲ್ಲಿ ಸಾಗಲಿದೆ. ರಾಮ್‌ಚರಣ್ ಈ ಚಿತ್ರಕ್ಕಾಗಿ ಸಾಕಷ್ಟು ಶ್ರಮ ವಹಿಸಿದ್ದು, ಹೊಸ ಅವತಾರದಲ್ಲಿ ಕಂಗೊಳಿಸಿದ್ದಾರೆ. ಶಿವಣ್ಣ ಗೌರು ನಾಯ್ಡು ಪಾತ್ರದಲ್ಲಿ ಗರಡಿಯ ಉಸ್ತಾದ್ ಆಗಿ ಅಬ್ಬರಿಸಿದ್ದಾರೆ. ಜಾನ್ವಿ ಕಪೂರ್ ಹಳ್ಳಿ ಹುಡುಗಿಯಾಗಿ ಲಂಗ ಧಾವಣಿ ತೊಟ್ಟು ಕಂಗೊಳಿಸಿದ್ದಾರೆ. ಬಲು ಅದ್ದೂರಿಯಾಗಿ ಮೂಡಿಬಂದಿರುವ ಈ ಚಿತ್ರವನ್ನು ಬುಚ್ಚಿ ಬಾಬು ಸನ ನಿರ್ದೇಶನ ಮಾಡಿದ್ದಾರೆ. ಇದೇ ವಾರ ಪೆದ್ದಿ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.



ಹೊಂಬಾಳೆ ಮ್ಯೂಸಿಕ್‌ನಲ್ಲಿ ಭಾವಾಂತರ

ವೀರ ಕನ್ನಡಿಗ, ಮ್ಯಾಜಿಕ್ ಅಜ್ಜಿ ಸೇರಿದಂತೆ ಮೂವತ್ತಕ್ಕೂ ಅಧಿಕ ಚಿತ್ರಗಳಲ್ಲಿ ಬಾಲನಟನಾಗಿ ಗುರುತಿಸಿಕೊಂಡಿದ್ದ ಕಾರ್ತಿಕ್ ಶರ್ಮ, ಸಂಗೀತ ನಿರ್ದೇಶಕನಾಗಿಯೂ ಜನಪ್ರಿಯತೆ ಪಡೆದಿದ್ದಾರೆ. ನೂರಕ್ಕೂ ಅಧಿಕ ಧಾರಾವಾಹಿ ಹಾಗೂ ಟಿವಿ ಶೋ ಗಳಿಗೂ ಸಂಗೀತ ನೀಡಿರುವ ಕಾರ್ತಿಕ್ ಶರ್ಮ ಪ್ರಸ್ತುತ ಭಾವಾಂತರ ಚಿತ್ರದ ಮೂಲಕ ನಿರ್ದೇಶಕನಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ. ನೈಜ ಘಟನೆ ಆಧರಿಸಿರುವ ಈ ಚಿತ್ರಕ್ಕೆ ಕಾರ್ತಿಕ್ ಶರ್ಮ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಸಂಗೀತ ನಿರ್ದೇಶನದ ಜತೆಗೆ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಳಿಸಿರುವ ಈ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಇತ್ತೀಚಿಗೆ ಟೀಸರ್ ಬಿಡುಗಡೆಯಾಗಿದ್ದು, ಆಡಿಯೋ ಹಕ್ಕನ್ನು ಹೊಂಬಾಳೆ ಮ್ಯೂಸಿಕ್ ಸಂಸ್ಥೆ ಪಡೆದುಕೊಂಡಿದೆ. ಬಾಲನಟನಾಗಿ ಹಾಗೂ ಸಂಗೀತ ಸಂಯೋಜಕ ನಾಗಿ ಪರಿಚಿತನಾಗಿದ್ದ ನಾನು, ಭಾವಾಂತರ ಸಿನಿಮಾ ಮೂಲಕ ನಿರ್ದೇಶಕನಾಗಿದ್ದೇನೆ. ನನ್ನ ಆರಂಭದ ದಿನಗಳಿಂದಲೂ ತಾವು ನೀಡುತ್ತಿರುವ ಪ್ರೋತ್ಸಾಹ ಈಗಲೂ ಮುಂದುವರೆಯಲಿ. ಭಾವಾಂತರ, ಇದೊಂದು ನೈಜ ಘಟನೆ ಆಧಾರಿತ ಚಿತ್ರ. ನನಗೆ ತಿಳಿದ ಹಾಗೆ ದಕ್ಷಿಣ ಭಾರತದಲ್ಲೇ ಈ ರೀತಿಯ ಕಥೆ ಈವರೆಗೂ ಬಂದಿಲ್ಲ. ಅಂತಹ ಅಪರೂಪದ ಕಥಾಹಂದರ ಹೊಂದಿರುವ ಚಿತ್ರವಿದು. ಚಿತ್ರದಲ್ಲಿ ನಾನೇ ಸಂಗೀತ ಸಂಯೋಜಿಸಿರುವ ಐದು ಹಾಡುಗಳಿದ್ದು, ಹೆಸರಾಂತ ಹೊಂಬಾಳೆ ಮ್ಯೂಸಿಕ್ ಸಂಸ್ಥೆ ಆಡಿಯೋ ಹಕ್ಕು ಪಡೆದುಕೊಂಡಿದೆ. ಟೀಸರ್ ಕೂಡ ಬಿಡುಗಡೆಯಾಗಿದ್ದು, ನಿರೀಕ್ಷೆಗೂ ಮೀರಿ ಮೆಚ್ಚುಗೆ ಪಡೆದುಕೊಂಡಿದೆ. ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಉಡುಪಿ, ಬೆಂಗಳೂರು ಹಾಗೂ ತಮಿಳುನಾಡಿನಲ್ಲಿ ಚಿತ್ರೀಕರಣ ನಡೆದಿದೆ. ಚಿತ್ರ ತೆರೆಗೆ ಬರಲು ಸಿದ್ಧವಾಗಿದ್ದು, ಆದಷ್ಟು ಬೇಗ ಬಿಡುಗಡೆಯಾಗಲಿದೆ ಎಂದು ಕಾರ್ತಿಕ್ ಶರ್ಮ ಹೇಳಿದರು. ತನ್ವಿ ರಾವ್, ಪ್ರಣವ್ ಶ್ರೀಧರ್, ಶ್ರೀ ವೈಷ್ಣವ್, ವೇದ ರಾವ್, ಭಾನು ಮುಂತಾದವರು ತಾರಾಬಳಗದಲ್ಲಿದ್ದಾರೆ. ಕಿಕ್ ಮೀಡಿಯಾ ಸಂಸ್ಥೆ ನಿರ್ಮಾಣ ಮಾಡಿರುವ ಈ ಚಿತ್ರಕ್ಕೆ ಸಾಗರ್ ಛಾಯಾಗ್ರಹಣ ಹಾಗೂ ಆಶೀಷ್ ಹುಲಕುಂದ್ ಸಂಕಲನವಿದೆ.

ಗ್ರಾಮಾಯಣದಲ್ಲಿ ಹಾಡಿ ಕುಣಿದ ವಿನಯ್

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಗ್ರಾಮಾಯಣ ಸಿನಿಮಾದ ಮೂಲಕ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಗ್ರಾಮಾಯಣ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದೆ. ಹಳ್ಳಿಗಾಡಿನ ಕಥೆ ಚಿತ್ರದಲ್ಲಿದೆ ಎಂಬುದು ಶೀರ್ಷಿಕೆ ಕೇಳಿದರೆ ಸ್ಪಷ್ಟವಾಗುತ್ತದೆ. ಈ ಚಿತ್ರದ ಬೆಂಕಿಯಲ್ಲಿ ತಂಪು ಕಂಡೆನು... ಹಾಡು ಈ ಹಿಂದೆಯೇ ಬಿಡುಗಡೆಯಾಗಿತ್ತು. ಮಿಲಿಯನ್ ಗಟ್ಟಲೇ ವೀಕ್ಷಣೆ ಕಂಡಿತ್ತು. ಈಗ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ, ಶತಮಾನಗಳಿಂದ.. ಎಂಬ ಹಾಡು ಇದಾಗಿದ್ದು, ಸಿನಿಪ್ರಿಯರನ್ನು ಸೆಳೆಯುತ್ತಿದೆ. ಇಡೀ ಹಾಡನ್ನ ಗಮನಿದರೆ ಹಾಡಿನಲ್ಲಿ ಬರುವ ಸಾಲುಗಳು ಕಿಚ್ಚು ಹತ್ತಿಸುತ್ತವೆ. ತೆಗಿ ತೇಗಿ ಉಂಡವರೇ ಸಾಕು ಸಾಕು ಎದ್ದೇಳಿ... ಅನ್ನುವ ಸಾಲು ಗಮನ ಸೆಳೆಯುತ್ತವೆ. ಕಿತ್ತು ತಿನ್ನುವ ಜನರೇ ಹುಡುಕಿ ನಿಮ್ಮ ಬಿಲವೆಲ್ಲಿ.. ಅನ್ನೋದು ಉಳ್ಳವರಿಗೆ ಸಲಹೆ ಕೊಟ್ಟಂತೆಯೂ ಇದೆ. ಪೂರ್ಣಚಂದ್ರ ತೇಜಸ್ವಿ ರಚನೆಯ ಈ ಗೀತೆಗೆ ರಘುದೀಕ್ಷಿತ್ ದನಿಯಾಗಿದ್ದಾರೆ.

ಗ್ರಾಮಾಯಣ ಸಿನಿಮಾದಲ್ಲಿ ವಿಜಯ್ ರಾಜ್‌ಕುಮಾರ್ ನಾಯಕನಾಗಿ ನಟಿಸಿದ್ದು, ಮೇಘಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಯೋಗೇಶ್, ಅಚ್ಯುತ್ ಕುಮಾರ್, ಗೋಪಾಲ್ ದೇಶಪಾಂಡೆ, ಅರುಣ್ ಸಾಗರ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ದೇವನೂರು ಚಂದ್ರು ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸಂತೋಷ್ ರೈ ಪತಾಜೆ ಛಾಯಾಗ್ರಹಣ ಈ ಚಿತ್ರಕ್ಕಿದೆ. ಈಗಾಗಲೇ ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರೈಸಿರುವ ಚಿತ್ರತಂಡ ಜೂನ್ ಅಂತ್ಯದಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಲ್ಲಿದೆ.

ವಿಶ್ವವಾಣಿ ಬೆಂಗಳೂರು 02-06-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಭಾವುಕತೆ

ಖಾಲಿ ದೋಣಿ

ಒಬ್ಬ ಜೆನ್ ಗುರು ನದಿಯಲ್ಲಿ ಸಣ್ಣ ದೋಣಿಯಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರು. ನದಿ ತುಂಬಾ ಶಾಂತವಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ಮತ್ತೊಂದು ದೋಣಿ ಬಂದು ಅವರ ದೋಣಿಗೆ ಬಡಿಯಿತು. ಗುರು ಕೋಪದಿಂದ ಕಣ್ಣು ತೆರೆದು, 'ಯಾರು ಅದು? ನೋಡಿಕೊಂಡು ಬರಲಾರೆಯಾ?' ಎಂದು ಗದರಿಸಲು ತಯಾರಾದರು. ಆದರೆ ಎದುರಿನ ದೋಣಿಯಲ್ಲಿ ಯಾರೂ ಇರಲಿಲ್ಲ. ಅದು ಖಾಲಿ ದೋಣಿ. ನೀರಿನ ಹರಿವೇ ಅದನ್ನು ತಂದು ತಾಗಿಸಿತ್ತು. ಗುರು ಮೌನವಾಗಿ ನಕ್ಕರು. ಆ ದಿನದಿಂದ ಯಾರಾದರೂ ಅವಮಾನ ಮಾಡಿದಾಗ, ಕೋಪದಿಂದ ಮಾತಾಡಿದಾಗ ಅವರು ಮನಸ್ಸಿನಲ್ಲಿ ಒಂದು ಮಾತು ಹೇಳಿಕೊಳ್ಳುತ್ತಿದ್ದರು: ಇದು ಖಾಲಿ ದೋಣಿ. ಬಹಳ ಬಾರಿ ಎದುರಿನವರ ಕೋಪ ನಮ್ಮ ಬಗ್ಗೆ ಅಲ್ಲ, ಅವರ ಒಳಗಿನ ನೋವು, ಭಯ, ಗೊಂದಲವೇ ಆಗಿರುತ್ತದೆ. ಪ್ರತಿ ಢಿಕ್ಕಿಗೂ ಕೋಪ ತೋರಿಸಬೇಕಿಲ್ಲ.

ಸುತ್ತಮುತ್ತ

ತೇಲುವ ಊರು

ಭಾರತದಲ್ಲಿ ತೇಲುವ ಊರೊಂದಿದೆ. ಮಣಿಪುರ ರಾಜ್ಯದ ಲೋಕ್ಟಾಕ್ ಸರೋವರದಲ್ಲಿರುವ ಚಂಪು ಖಾಂಗ್ಪೋಕ್, 'ಭಾರತದ ಏಕೈಕ ತೇಲುವ ಗ್ರಾಮ' ಎಂದೇ ಪ್ರಸಿದ್ಧ. ಏಕೆಂದರೆ ಇಡೀ ಗ್ರಾಮ ನೈಸರ್ಗಿಕ ವಸ್ತುಗಳಿಂದ ಮಾಡಿದ ತೇಲುವ ಭೂಮಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಲೋಕ್ಟಾಕ್ ಸರೋವರ ಈಶಾನ್ಯ ಭಾರತದ ಅತಿದೊಡ್ಡ ಸಿಹಿನೀರಿನ ಸರೋವರ. ಸರೋವರದ ನೀರಿನ ಮೇಲೆ ದಪ್ಪ, ದಟ್ಟವಾದ ಸಸ್ಯಗಳು ಅಥವಾ ಫುಮ್ಡಿಸ್ ಎಂದು ಕರೆಯಲ್ಪಡುವ ಸಸ್ಯವರ್ಗವಿದೆ. ಫುಮ್ಡಿಸ್ ಮೇಲೆ ನಿರ್ಮಿಸಲಾದ ಈ ಗ್ರಾಮ ಕೊಳೆತ ಸಸ್ಯಗಳು, ಮಣ್ಣು ಮತ್ತು ಸಾವಯವ ವಸ್ತುಗಳಿಂದ ಮಾಡಲ್ಪಟ್ಟ ವೃತ್ತಾಕಾರದ ತೇಲುವ ಜೌಗು ಪ್ರದೇಶಗಳನ್ನು ಒಳಗೊಂಡಿದೆ. ಈ ಫುಮ್ಡಿಗಳು ಗುಡಿಸಲು, ನಡಿಗೆ ಮಾರ್ಗಗಳ ಭಾರವನ್ನು ಹೊರುವಷ್ಟು ಗಟ್ಟಿ. ಸಣ್ಣ ಕೈತೋಟ ಸಹ ಇದರ ಮೇಲೆ ನಿರ್ಮಿಸಬಹುದು. ಇಲ್ಲಿನ ನಿವಾಸಿಗಳು ಮೀನುಗಾರರು.

ಮಾತು ಗೀತೆ

ಅಪಮಾನದ ಬೆಲೆ

ಯಾರೋ ನಮ್ಮನ್ನು ಅಪಮಾನಿಸಲು ಯತ್ನಿಸುತ್ತಾರೆ. ನಮಗಾಗುವ ಅಪಮಾನದಲ್ಲಿ ಅವರ ಪ್ರಯತ್ನ ಹತ್ತು ಶೇಕಡ, ನಮ್ಮ ಪ್ರತಿಕ್ರಿಯೆಯೇ ತೊಂಬತ್ತು ಶೇಕಡ. ಇತರರ ಮಾತುಗಳಿಂದ ಮನಸ್ಸು ಕುಸಿಯದಂತೆ ಒಳಗಿನ ಸ್ಥಿರತೆಯನ್ನು ಬೆಳೆಸು ಎಂದು ಭಗವದ್ಗೀತೆ ಹೇಳುತ್ತದೆ- 'ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ' ಸುಖ-ದುಃಖ, ಲಾಭ-ನಷ್ಟ, ಗೆಲುವು-ಸೋಲು - ಇವೆಲ್ಲವನ್ನೂ ಸಮಭಾವದಿಂದ ನೋಡು. ನಿನ್ನ ಗೌರವ ಇತರರ ನಾಲಿಗೆಯಲ್ಲಿ ಇಲ್ಲ. ಅದು ನಿನ್ನ ಒಳಗಿನ ಸ್ಥಿರತೆಯಲ್ಲಿ ಇದೆ.

ಇನ್ನೊಂದು ತುಂಬಾ ಸೂಕ್ತವಾದ ಶ್ಲೋಕ: 'ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ । ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ' ಅಂದರೆ ಯಾರು ಇತರರಿಂದ ಸುಲಭವಾಗಿ ಕದಲುವುದಿಲ್ಲವೋ ಅಂತಹವನು ನನಗೆ ಪ್ರಿಯ. ಕ್ಷಣದ ನೋವಿಗಿಂತ ಒಳಗಿನ ಶಾಂತಿ ದೊಡ್ಡದು. ನಿನ್ನ ಮೌಲ್ಯವನ್ನು ನೀನೇ ತಿಳಿದುಕೋ. ಅದನ್ನು ಯಾರ ಮಾತೂ ಕಡಿಮೆ ಮಾಡಲಾರದು.

ಹನಿ ಕವಿತೆ

ಮಳೆ ಹನಿ ಅಚ್ಚರಿ

ತಲೆಯ ಮೇಲೆ ಧಾರೆ
ಧಾರೆಯಾಗಿ ಬೀಳುತ್ತಿರುವ ಮಳೆ
ಯುಗಗಳ ಹಿಂದಿನ
ಹಳೆಜನ್ಮಗಳ ನೆನಪುಗಳನ್ನು
ಕೆದಕುವುದು ಏನಚ್ಚರಿ!

● ಶಿವಾನಿ ಭಟ್

ಅಧಿಕ ಮಾಸ, ಅಳಿಯ ಮತ್ತು ಅನಾರಸ

● ಶ್ರೀದೇವಿ ವೈದ್ಯ, ಬೆಂಗಳೂರು

ಈ ಸಲ ಜ್ಯೇಷ್ಠ ಮಾಸ ಅಧಿಕ ಆಗಿ ಬಂದದ, ಎಲ್ಲ ಕಡೆ ಅಧಿಕ ಮಾಸ ಅಗದಿ ಸಂಭ್ರಮದಿಂದ ನಡದದ, ಯಾವ ಮಾಸ ಅಧಿಕ ಬಂದ್ರೂನು ನಮಗ ಸಂಭ್ರಮನ ಆ ಮಾತ ಬ್ಯಾರೆ! ಮಂದಿ ತಮ್ಮ ಕೈಲಾದ ದಾನ, ಧರ್ಮ, ಪೂಜೆ ಪುನಸ್ಕಾರ ಮಾಡ್ತಾರ. ಅದರಾಗ ನಮ್ಮ ಮಂದಿ 33 ಅನಾರಸ ದಾನ ಕೊಟ್ಟರ ಶ್ರೇಷ್ಠ ಅಂತ ನಂಬ್ತಾರ ಅದ್ರಾಗ ಅಳಿಯನಿಗೆ ಕೊಟ್ಟರ ಇನ್ನೂ ಶ್ರೇಷ್ಠ ಅಂತ. 33 ಕೊಡಬೇಕು 2 ಹೆಚ್ಚಿಸಿ ಕೊಡಬೇಕು ಅಂತ ತಿಳಿದವರು ಹೇಳ್ತಾರ. ಹಿಂಗಾಗಿ ಒಟ್ಟು 35 ಅನಾರಸ ದಾನ ಕೊಡೋ ಪದ್ಧತಿ ನಡೆದು ಬಂದದ.

ಹೋದ ಸಲ ಅಧಿಕ ಮಾಸದಾಗ ನಮ್ಮ ಮನಿಯವರಿಗೆ ಭಾಳ ಮಂದಿ ಅನಾರಸ ದಾನ ಕೊಟ್ಟು ಕೊಟ್ಟು, ಅವರಿಗೆ 'ಅನಾರಸ' ಅಂದ್ರ ಹೆದರೋ ಹಂಗ ಆಗಿಬಿಟ್ಟದ ರೀ ಪಾಪ!

ಅದೇನಾತು ಅಂದ್ರ, ನಮ್ಮ ಅಮ್ಮ 35 ಅನಾರಸ ಅಳಿಯಂದಿರಿಗೆ ದಾನ ಕೊಟ್ಟಳು, ಅವು ಇನ್ನೂ ಡಬ್ಬಿ ತುಂಬ ಹಂಗ ಅವ, ನಮ್ಮ ಸಣ್ಣ ಮೌಂಶಿಗೆ ಹೆಣ್ಣುಮಕ್ಕಳಿಲ್ಲ ಹಿಂಗಾಗಿ ಆಕೀನೂ ಇವರಿಗೆ ಅಳಿಯ ಅಂತ ದಾನ ಕೊಟ್ಟಳು. ಹಿಂಗಾಗಿ 70 ಅನಾರಸ ಆದವು. ನಮ್ಮ ಮನೆಯವರು ಆ ಅನಾರಸ ನೋಡಿನ ಸುಸ್ತಾಗಿ ಬಿಟ್ರು. ಮುಂದ ಒಂದೆರಡು ದಿನ ಆಗಿದೆ ನಮ್ಮ ಸ್ವಾದರತ್ತಿ ಫೋನ್ ಮಾಡಿದ್ರು, ನಿಮ್ಮ ಮನೆ ಅವರಿಗೆ 'ಅಳಿಯ' ಅಂತ ದಾನ ಕೊಡ್ತೀನಿ ನನಗರೇ ಬರೇ ಗಂಡು ಹುಡುಗರು ಅವ, ನಿನಗ ನಾ ನನ್ನ ಮಗಳ ಅಂತ ತಿಳಕೊಂಡೆನಿ ಅಂತ! ನನಗ ಏನ ಹೇಳಬೇಕೋ ತಿಳಿಯವಲ್ಲು ನಾ 'ನಿಮಗ ಮಗಳು ಅವರು ಅಳಿಯನಾ ಖರೇ ಆದ್ರ ಅನಾರಸ ಕೊಡಬೇಕ್ರಿ,' ಅಂತ ಹೇಳಿದೆ. ಅಯ್ಯ ಮಾರಾಳ, ಮೂರು ಮೂರು ದಿನ ಅಕ್ಕಿ ತೊಳದ ಕೊಲ್ಹಾಪೂರದ ಧೋಲೋ ಬೆಲ್ಲದ ಜೋಡಿ ಮನಿ ಒಳ್ಳಾಗ ಕುಟ್ಟಿ, ಘಮ ಘಮ ಅನ್ನೋ ಮನಿ ತುಪ್ಪದಾಗ ಕರಿದೇನಿ ಬಾಯಾಗ ಇಟ್ರ ಕರಗತಾವ ಸುಮ್ಮನೇ ಒಂದು ತಗೊಂಡು ಹೋಗ್ರೀ ಅಂತ ಜೋರು ಮಾಡಿದ್ರು. ನಾ ಮತ್ತ ಇವರಿಗೆ ವರಾತ ಶುರು ಮಾಡಿದೆ ನಮ್ಮ ಅತ್ತಾ ನಿಮಗೆ 'ಅಳಿಯ' ಅಂತ ದಾನ ಕೊಡ್ತಾರ ಅಂತ, ಅವರು ಅನಾರಸ ಆದ್ರ, ನಾ ಬರಂಗಿಲ್ಲ ಅಂತ ರಗಳಿ ತಕ್ಕೊಂಡು ಕೂತ್ರು.. ಆಯ್ತೋ ಅವರನ್ನ ರಮಿಸಿ, ಮಸ್ಕಾ ಹಚ್ಚಿ ಒಟ್ಟ ನಮ್ಮ ಅತ್ಯಾ ಮನಿಗೆ ಹೋಗಿ ಅನಾರಸದ ದಾನ ಇಸ್ಕೊಂಡು ಬರೋದ್ರಾಗ ನಾ ಕಲತ ವಿದ್ಯಾ ನೈವೇದ್ಯ ಆಗಿ ಹೋಗಿತ್ತು.

ಮುಂದ ಹಂಗ ಒಂದೆರಡು ದಿನ ಆಗೇದ ನಮ್ಮ ನಾದಿನಿ ಬಂದು ತಮ್ಮ ಅಣ್ಣಂಗ ಅಂತ ಅದ ಆ ಅನರಸನ ದಾನ ಕೊಟ್ಟು ಹೋದಳು. ಹಿಂಗಾಗಿ ಆ ಅನಾರಸದ ಸಂಖ್ಯೆ 140 ಆಯ್ತು. ಇನ್ನು 4 ಡಬ್ಬಿ ತುಂಬ ಅನಾರಸ ಕುತಾವ. ಅಡಿಗೆ ಮನಿ ತುಂಬ ಘಮ್ಮಂತ ಅನಾರಸದ ವಾಸನೆ. ಇಷ್ಟರ ನಡುವೆ ನಮ್ಮ ಗೆಳತಿ ಸುಮಾ ಅವರ ತಮ್ಮಗ ಹೈದರಾಬಾದ್ ಟ್ರಾನ್ಸಫರ್ ಆಗೇದ ಅಂತ ಹೇಳಿ ಅಲ್ಲಿ ತನಕ ಹೋಗಿ ಏನ ಕೊಡೋದು ನಿಮ್ಮ ಮನಿಯವರಿಗೆ ಕೊಡ್ತೀನಿ ಅಂದ್ಲು.. ನನಗ ನಿಮ್ಮಮನಿಯವರು ಅಣ್ಣ ಇದ್ದಂಗ ಅನಕೋತ. ನನಗ ಏನ ಹೇಳಲಿ ಏನ ಬಿಡಲಿ ಅನ್ನೋ ಹಂಗ ಆತು. ನಮ್ಮ ಮನೆಯವರಿಗೆ ಹೇಳಿದೆ ಹಿಂಗ್ಹಿಂಗ ಸುಮಾ ಅವರ ತಮ್ಮಗ ಟ್ರಾನ್ಸಫರ್ ಆಗೇದ ಅಂತ, ಅದಕ್ಕ ಅಕೀನೂ ನಿಮಗ ಅಧಿಕಮಾಸದ ಬಾಗಿನ ತಂದ ಕೊಡತಾಳ ಅಂತ, ಇನ್ನೂ ನಾ ಹೇಳೋದ ಮುಗದಿಲ್ಲ ಅನಾರಸ ಕೊಡತೇನಿ ಅಂದ್ರ ಸ್ವಚ್ಚ ಬ್ಯಾಡ ಅಂತ ಹೇಳು ಅಂತ ಜೋರಾಗಿ ಒದರಾಡ್ಲಿಕ್ಕೆ ಶುರು ಮಾಡಿದ್ರು. ಇವರದೊಳ್ಳೆ ಆತು, ದಾನ ಕೊಟ್ಟ ಎತ್ತಿನ ಹಲ್ಲು ಎಣಿಸಿದರು ಅಂತ ಏನೋ ಪಾಪ ಅಂತ ತಂದು ದಾನ ಕೊಟ್ರು. ಯಾಕೋ ಅಕೀನ ಉರಲಿಕ್ಕೆ ಹತ್ಯಾರ ಅನಸ್ತ ನನಗ! ಒಂದಿನ ಹಂಗಾ ಹಿಂಗಾ ಮುಂದ ಹಾಕಿದೆ ಆದ್ರ ಅಕಿ ನನ್ನ ಗೆಳತಿ ವಾಟ್ಸಾಪ್ ಮ್ಯಾಲೆ ವಾಟ್ಸಾಪ್ ಮೆಸೇಜು ಮಾಡಕೋತ ಕುತ್ಲು. ಯಾವಾಗ ಬರ್ತಿ, ನೀವು ಬರ್ತೀರೋ ನಾವ ಬರೋಣೋ, ಹುಣ್ಣಿವಿ ಒಳಗ ಕೊಡಬೇಕು ಅಂತ! ಈ ನನ್ನ ಗಂಡ ನೋಡಿದ್ರ, ಇನ್ನೊಬ್ಬರು ಯಾರರೇ ಅನಾರಸ ಕೊಡ್ತೀನಿ ಅಂದ್ರೆ ನಾ ಮನೀಗ ಬರುದಿಲ್ಲ ಅಧಿಕ ಮಾಸ ಮುಗಿಯೋ ತನ ಅಂತ ರಾದ್ಧಾಂತ ಶುರು ಮಾಡಿಕೊಂಡ್ರು. ಆ 140 ಅನಾರಸದಾಗ ಇವರೇನ ಒಂದು ತಿಂದಿರಲಿಲ್ಲ, ಎಲ್ಲ ನಾನ ಮುಂಜಾನೆ ಒಂದು, ಮಧ್ಯಾಹ್ನ ಒಂದು, ಸಂಜೆ ಒಂದು,

ರಾತ್ರಿ ಒಂದು ಅನಕೋತ ಒಂದಿಪ್ಪತ್ತು ತಿಂದಿದ್ದೆ. ಒಂದು ದೊಡ್ಡ ಡಬ್ಬಿಗೆ ಹಾಕಿ ಅವರ ಆಫೀಸ್‌ಗೂ ಕಳಿಸಿದ್ದೆ ಅಲ್ಲೊಂದು ಇಪ್ಪತ್ತು ಖರ್ಚಾಗಿದ್ವು. ಇನ್ನು ಒನ್ನೂರು ಉಳಕೊಂಡಿದ್ವು. ಈ ನನ್ನ ಮಕ್ಕಳು ಒಂದೇ ಒಂದು ಅನಾರಸ ತಿನ್ನಲಿಲ್ಲ. ಈಕಿ ನನ್ನ ಗೆಳತಿ ದಿನಾ ಮುಂಜಾನೆ, ಮಧ್ಯಾಹ್ನ, ರಾತ್ರಿ ಮೆಸೇಜ್ ಮ್ಯಾಲೆ ಹಾಕ್ಲಿಕತ್ಲು ಯಾವಾಗ ಬರ್ಲಿ ಅಂತ, ಅಕಿಗೆ ಹಂಗರ ಡಬ್ಬ್ಯಾ ಮುಚ್ಚಿ ಕೊಡವಾ ಅಂದೆ ಹೂಂ ಅಂದ್ಲು, ನಾ ಇವರಿಗೆ ಮತ್ತ ಶುರು ಹಚ್ಕೊಂಡೆ ಇದೊಂದು ಸಲ ಇಸ್ಕೊಳ್ರೀ ಅಂತ ಅನಾರಸ ಅಂತಂದ್ರ ನಾ ಜಪ್ಪಯ್ಯ ಅಂದ್ರು ಇಸ್ಕೊಳೋದಿಲ್ಲ ಅಂತ ಜೋರಾಗಿ ಒದರಾಡ್ಲಿಕ್ಕೆ ಶುರು ಮಾಡಿದ್ರು. ಹೂಂ ಅತ ತೋಗೊಳಿ ಅಕೀಗೆ ಅತಿರಸ ಮಾಡ್ಕೊಟಾವಾ ಅಂತೇನಿ ಅಂತ ಸಮಾಧಾನ ಮಾಡಿದೆ. ಅಕೀನೂ ತಗೊಂಡು ಬಾ ಅಂತ ಹೇಳಿದ್ಲು. ಅಕಿ ನನ್ನ ಗೆಳತಿ ಸುಮೀ ಇದರ ಜೋಡಿ ಬಂದಿಷ್ಟು ಮತ್ತ ಪೈಕಿ ಚಿಕ್ಕಿ ಜೊತಾ ತಂದು ಕೊಟ್ಟಿದ್ರು. ಒಂದು ಸ್ವಲ್ಪ ಮಾರಿ ಹಿಗ್ಗಿಸಿದ್ಲು. ಅಕಿ ಅತಿರಸ ಅನಕೋತ ಅನಾರಸ ಕೊಟ್ಟು ಹೋಗಿದ್ಲು. ಅತಿರಸ, ಅನಾರಸ, ಅಪೂಪ ಎಲ್ಲ ಒಂದ….

ಆ ಅನಾರಸದ ಕೌಂಟು 135 ಆಯ್ತು. ಮತ್ತೆ ಒಂದೆರಡು ಸಲ ಅಳಿಯಾಗೆ ಅನಾರಸ ಕೊಟ್ಟು ಕಳಸಿದೆ. ಕೆಲಸದಕೀಗೂ ಒಂದಿಷ್ಟು ಕೊಟ್ಟೆ, ಏನ ಜಿಗದಾಡಿದ್ರೂನೂ ಇನ್ನೂ 85-90 ಅನಾರಸ ಡಬ್ಬ್ಯಾಗ ಹಂಗ ಕುಲು ಕುಲು ಅಂತ ನನ್ನ ನೋಡಿ ನೋಡಿ ನಕ್ಕಂಗ ಆಗ್ಲಿಕ್ಕತ್ತಿತ್ತು. ನಾನು ಅದ್ರಾಗಿಂದನ ನಮ್ಮ ತಮ್ಮಗೆ ಕೊಟ್ರಾತು ಅನ್ಕೊಂಡೆ, ಅಂವಾ ನಮ್ಮ ಅತ್ತಿ ಅನಾರಸನ ದಾನ ಕೊಟ್ಟಾರ, ನೀನು ಅವನ್ನ ಕೊಡೋದಿದ್ರ ಕೊಡಬ್ಯಾಡ ಅಂತ ಅಗದೀ ಸ್ಪಷ್ಟ ಆಗಿ ಹೇಳಿದಾ.. ಹಿಂಗಾಗಿ ಅವಂಗ ಸೇರತಾವ ಅಂತ ಶೇಂಗಾ ಉಂಡಿ ಮಾಡಿ ಕೊಟ್ಟೆ. ಅವಂಗ ಆ ಶೇಂಗಾ ಉಂಡಿ ದಾನ ಅಂತ ಕೊಟ್ಟೆ ನೋಡ್ರಿ ನಮ್ಮ ಅನಾರಸದ ಜಗಳ ತಾರಕಕ್ಕ ಹೋತು, ಮನಿ ಮಂದಿ ಎಲ್ಲರೂ ಕೂಡಿ ಅನಾರಸ ಶ್ರೇಷ್ಠ, ಅನಾರಸ ಶ್ರೇಷ್ಠ, ಅತಿರಸ ಅನರಸ ಅನಕೋತ ನನಗೆ ಯಾಕ ಕೊಟ್ರಿ ಅಂತ. ನನಗೂ ಏನ ಸೇರತದ ಅದನ್ನ ಹೇಳಿ ಮಾಡಸಬೇಕಾಗಿತ್ತು ಅಂತ!

ಅದಕ್ಕ ಈ ವರ್ಷ ಒಣ ಈ ಝುಂಝೂಟ ಬ್ಯಾಡ ಅಂತ ಮದ್ಲ ಎಲ್ಲರಿಗೂ ಹೇಳೇನಿ ಅತಿರಸ, ಅನಾರಸ, ಅಪೂಪ ಅನ್ನೋತ ಅದನ್ನ ಕೊಡಬ್ಯಾಡ್ರೀ ಹೆಂಗೂ ಮಾವಿನ ಹಣ್ಣಿನ ಸೀಸನ್ ಅದ ಹಣ್ಣು ಕೊಡ್ರಿ, ಮಾವಿನ ಹಣ್ಣಿನ ಕೊಬ್ಬರಿ ವಡಿ ಕೊಡ್ರಿ, ಶೇಂಗಾ ಉಂಡಿ, ಬೇಸನ್ ಉಂಡಿ ಏನರೇ ಬ್ಯಾರೆ ಕೊಡ್ರಿ, ಅಕಸ್ಮಾತ್ ಅನಾರಸನ ಕೊಡೋದಿದ್ರ ಬ್ಯಾರೆದವ್ರಿಗೆ ಕೊಡ್ರಿ ಅಂತ.

ನಾಳೆ ನಮ್ಮ ಅಮ್ಮ ಬರ್ಲಿಕ್ಕತ್ತಾಳ ಅಧಿಕ ಮಾಸದ ಬಾಗಿನ ತೊಗೊಂಡು, ಏನ ತರ್ತಾಳ ಅಂತ ನನಗೂ ಗೊತ್ತಿಲ್ಲ!

ಬದುಕೆಂಬ ಮೂರಕ್ಷರದ ಅಚ್ಚರಿ!

● ಸುಮನಾ ರಮಾನಂದ, ಕೊಯ್ಮತ್ತೂರು

'ಬದುಕು' ಈ ಮೂರಕ್ಷರದ ಪದ ಯಾವಾಗಲೂ ಒಂದು ಅಚ್ಚರಿಯೆನಿಸಿ ನನ್ನ ಮನಸಿಗೆ ಕಾಡುವುದುಂಟು. ಏಕೆಂದರೆ ಆ ಭಗವಂತ ನಮಗೆಲ್ಲ ಕೊಟ್ಟಿರುವುದು ಒಂದೇ ಒಂದು ಬದುಕು. ಬಯಸಿದರೂ ನಾವು ಇನ್ನೊಂದು ಮತ್ತೊಂದು ಅಂತ ಲೆಕ್ಕ ಹಾಕಿ ಬೇರೆ ಬದುಕನ್ನು ಪಡೆಯಲಾರೆವು. ಇರುವ ಒಂದು ಬದುಕನೇ ಸರಿಯಾಗಿ ಜೀವಿಸದೇ ಸುಮ್ಮನೆ ಮನಸಿಗೆ ಕಿರಿಕಿರಿ, ನೋವು ಮಾಡಿಕೊಂಡು ಬೇರೆಯವರಿಗೂ ನೆಮ್ಮದಿಯಿಂದ ಬದುಕಲು ಬಿಡಲಾರದ ಮಂದಿ ಎಷ್ಟಿಲ್ಲ ಈ ಜಗದಲಿ. ಅವರಿಗೆಲ್ಲ ತಮ್ಮ ಬದುಕನು ತಮ್ಮದೇ ದೃಷ್ಟಿಕೋನದಿಂದ ನೋಡಿ ಗೊತ್ತಿರುವುದೇ ಹೊರತು ಬೇರೆಯವರ ದೃಷ್ಟಿಯಲ್ಲಿ ಆ ಬದುಕನು ಹೇಗೆ ಕಾಣಬೇಕು ಅಂತ ತಿಳಿದಿರುವುದಿಲ್ಲ ಅನಿಸುತ್ತೆ ಒಮ್ಮೊಮ್ಮೆ.

ಬದುಕಿನ ಬಗ್ಗೆ ಬರೆಯಲು ಕುಳಿತರೆ ಅದೆಷ್ಟೊ ಪದಗಳಲ್ಲಿ, ಸಾಲುಗಳಲ್ಲಿ ವಿವರಿಸಲಾರದ ಭಾವವೊಂದು ಮನಸಿಗೆ ಕಾಡುವುದುಂಟು. ಏಕೆಂದರೆ ಬದುಕನ್ನು ಬಂದ ಹಾಗೆಯೇ ಸ್ವೀಕರಿಸಿದವರ ಜಾಯಮಾನಕೆ ನಾನೂ ಸೇರುತ್ತೇನೆ. ಸಣ್ಣ-ಪುಟ್ಟ ವಿಷಯಗಳಿಗೂ ವಿಪರೀತ ಕೊರಗದೆ, ಸೊರಗದೆ ನಮ್ಮ ಯೋಗ್ಯತೆ ಎಷ್ಟಿದೆಯೋ ಅಷ್ಟಕ್ಕೇ ನಮ್ಮ ಬದುಕನ್ನು ನಾವು ಮಾರ್ಪಡಿಸುತ್ತಾ ಅಂತಹ ಸನ್ನಿವೇಶಗಳಿಗೆ ನಮ್ಮನು ನಾವು ಅಳವಡಿಸಿಕೊಂಡರೆ ಮಾತ್ರ ನಿಜವಾದ ನೆಮ್ಮದಿ, ಸಂತಸ ಪಡೆಯುತ್ತೇವೆ ಅನ್ನೊದಂತೂ ಸತ್ಯ. ನಾವು ಕಾಣುವ ಕನಸುಗಳು ದೊಡ್ಡದಾಗಿದ್ದರೆ ಖಂಡಿತಾ ತಪ್ಪಿಲ್ಲ. ಆದರೆ, ಅದೆಲ್ಲ ನನಸಾಗಿಸುವ ಶಕ್ತಿ, ಮನಸ್ಸಿನಲಿ ದೃಢನಿಶ್ಚಯ ನಮ್ಮಲಿದ್ದರೆ ಮಾತ್ರ ಆ ಕನಸಿಗೆ ಬೆಲೆ. ಇಲ್ಲದಿದ್ದರೆ ನಾವೂ ಸಹ ಅಂಬಾನಿಯಂತಾಗ ಬೇಕೆಂದು ಬಯಸಿದರೆ ಸಾಮಾನ್ಯವಾಗಿ ಜೀವಿಸುವ ಬದುಕೂ ನಮ್ಮಿಂದ ಕೈತಪ್ಪಿ ಹೋಗುವ ಸಂಭವವಿರುತ್ತದೆ.

ನಾವು ಬಾಳುವ ಬದುಕಲ್ಲಿ ಸದಾಕಾಲ ವಿಶ್ವಾಸವಿರಬೇಕು. ಆದರೆ, ಅತಿಯಾದ ಆತ್ಮವಿಶ್ವಾಸವಿರಬಾರದಷ್ಟೆ. ಅದಿದ್ದರೆ ಮಾತ್ರ ಬದುಕು ದುಸ್ತರವೆನಿಸುವುದು. ನಮ್ಮ ಬದುಕನು ಮತ್ತೊಬ್ಬರ ಬದುಕಿನೊಂದಿಗೆ ಹೋಲಿಸಿದಾಗಲೇ ಸಮಸ್ಯೆಯ ಉದ್ಭವವಾಗುತ್ತದೆ. ಹಾಗೊಂದು ವೇಳೆ ಹೋಲಿಸಿಕೊಳ್ಳುವ ಸಂದರ್ಭ ಬಂದರೆ ನಮಗಿಂತ ಯಾರಿಗೆ ಕಮ್ಮಿಯಾದ ಅವಕಾಶ ಸಿಕ್ಕಿರುವುದೋ ಅಂತಹ ವರೊಡನೆ ಹೋಲಿಸಿಕೊಂಡಾಗ ನಮಗೆ ಆ ಭಗವಂತ ಇಷ್ಟಾದರೂ ಕರುಣಿಸಿದ್ದಾನೆ ಅನ್ನುವ ಸತ್ಯದ ಅರಿವಾಗಿ ಬದುಕು ಸಹನೀಯವೆನಿಸುವುದು. ನಾವು ಎದುರಿಸುವ ಬದುಕಿನಲಿ ಅದೆಷ್ಟೋ ರೀತಿಯಲಿ ಅಡೆತಡೆಗಳಿದ್ದರೂ, ಅವುಗಳನೆಲ್ಲಾ ನಿವಾರಿಸುವ ಶಕ್ತಿ ಯನ್ನು ಸಹ ಆ ಭಗವಂತನೇ ನಮಗೆ ಕೊಟ್ಟಿರುತ್ತಾನೆಂಬ ಸತ್ಯವನ್ನು ಮಾತ್ರ ನಾವು ಮರೆತಂತಿರುತ್ತೇವೆ. ನಾವು ಯಾವಾಗಲೂ ಏನೊ ಬೇಡದ ಚಿಂತೆಗಳಲಿ, ಆ ಕ್ಷಣದಲಿ ನಿವಾರಣೆಯಾಗದ ಯೋಚನೆಗಳಲ್ಲಿ ಮುಳುಗಿ, ಬದುಕನ್ನು ಅದರಲಿರುವ ಅಮೂಲ್ಯವಾದ ಕ್ಷಣಗಳನ್ನು ಆಸ್ವಾದಿಸದೇ ಕಳೆದುಬಿಡುತ್ತೇವೆ.

ಮುಂದೆ ಇದರ ಅರಿವಾಗುವ ಕಾಲ ಬಂದಾಗ ನಾವು ಮೌಲ್ಯಯುತವಾದೊಂದು ನಿಧಿಯ ಕಳೆದು ಕೊಂಡೆವೆಂದು ಪರಿತಪಿಸಿ ಗೋಳಿಡುತ್ತೇವೆ. ಅದೆಂದಿಗೂ ನಮ್ಮ ಪಾಲಿಗೆ ನಿಲುಕದ ನಕ್ಷತ್ರವಾಗಿಬಿಡುತ್ತದೆ. ಹಾಗಾಗಬಾರದೆಂದರೆ ನಮಗಿರುವ ಯೋಗ್ಯತೆಯನ್ನು ಪರಿಗಣಿಸಿ ನಮ್ಮ ಗುರಿಯ ತಲುಪುವ ನಿಶ್ಚಯ ಮಾಡಬೇಕಿದೆ.

ಬದುಕಿನ ವಿಧವಿಧ ಮುಖಗಳು, ವಿವಿಧ ಮಜಲುಗಳು ನಮಗೆ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿಯೇ ನಿತ್ಯ ಕಾಣಸಿಗುತ್ತದೆ. ಒಂದು ಉದ್ಯಾನವನದಲ್ಲಿ ನಡೆಯುತ್ತಾ ಗಮನಿಸುವುದಾದರೆ ಅರಳುತಿರುವ ಹೂವಿರಬಹುದು, ಕಿಲ-ಕಿಲನೆ ನಗುತ್ತಿರುವ ಮಗುವಿರಬಹುದು, ತಮ್ಮ ಬೊಚ್ಚುಬಾಯಿಯಲಿ ನಗುತಾ ಹರಟುವ ಇಳಿ ಪ್ರಾಯದವರ ಆ ಮುಗ್ಧ ನಗುವಿನಲಿ, ಯಾವುದೇ ಹಮ್ಮುಬಿಮ್ಮುಗಳಿಲ್ಲದೆ ಆಗಸದಲ್ಲಿ ಹಾರಾಡುವ ಹಕ್ಕಿಗಳ ಕಲರವವ ನೋಡುತ್ತಾ ನಮ್ಮ ಗೋಳನೆಲ್ಲ ಮರೆತು ನಾವು ಬಾಳುವ ಬದುಕನು ಸುಂದರಗೊಳಿಸುವ ಪ್ರಯತ್ನವನಾದರೂ ಮಾಡಬಹುದಲ್ಲವೇ.

ಇನ್ನಾದರೂ ಕೊರಗದೇ, ಚಿಂತಿಸದೇ ಪ್ರತಿ ಕ್ಷಣವನ್ನು ಆಸ್ವಾದಿಸಿ ನಗುತ್ತಾ ಬದುಕಿಬಿಡಿ..ಏನಂತೀರಿ?

ಒಂದು ಬಸ್ ಪ್ರಯಾಣ

ಒಂದು ಜೀವನ ಪಾಠ

● ಸತ್ಯನಾರಾಯಣ ರಾವ್

ಮಧ್ಯಾಹ್ನದ ಬಿಸಿಲು. ಬಸ್ ಸ್ಟ್ಯಾಂಡ್‌ನಲ್ಲಿ ಜನರ ಗದ್ದಲ. ಗ್ರಾಮದ ಹಳೆಯ ಕೆಂಪು ಬಸ್ ಧೂಳು ಎಬ್ಬಿಸುತ್ತಾ ಬಂದು ನಿಂತಿತು. ಜನ ಎಲ್ಲ ಒದ್ದಾಡುತ್ತಾ ಬಸ್ ಹತ್ತೋಕೆ ನುಗ್ಗುತ್ತಿದ್ದರು. ಅದರ ಮಧ್ಯೆ ಒಬ್ಬ ಮುದುಕ ತಂದೆ ಬಿಳಿ ಕೂದಲು ಕೈಯಲ್ಲಿ ಹಳೆಯ ಚೀಲ ಕಣ್ಣುಗಳಲ್ಲಿ ದಣಿವು ಬಸ್ ಮೆಟ್ಟಿಲು ನೋಡುತ್ತಾ ನಿಧಾನವಾಗಿ ಕಾಲು ಎತ್ತಿದರು. ಮೊದಲ ಮೆಟ್ಟಿಲೇ ಅವರಿಗೆ ಬೆಟ್ಟದಷ್ಟು ಕಷ್ಟವಾಗಿ ಕಾಣಿಸಿತು. ಹಿಂದೆ ನಿಂತಿದ್ದ ಮಗ ಮಾತ್ರ ಅಸಹನೆಯಿಂದ, ಅಪ್ಪಾ ಬೇಗ ಹತ್ತಿ… ಹಿಂದೆ ಎಲ್ಲರಿಗೂ ಕಾಯುತಿದ್ದಾರೆ ಎಂದು ಜೋರಾದ ಧ್ವನಿಯಲ್ಲಿ ಹೇಳಿದ.

ತಂದೆ ಏನೂ ಮಾತನಾಡಲಿಲ್ಲ. ಮತ್ತೊಂದು ಮೆಟ್ಟಿಲು ಹತ್ತಲು ಪ್ರಯತ್ನಿಸಿದರು. ಕಾಲು ನಡುಗಿತು. ಅಷ್ಟರಲ್ಲಿ ಕಂಡಕ್ಟರ್ ಮುಂದೆ ಬಂದು, ಅಯ್ಯಾ ನಿಧಾನ ನಾನು ಇದ್ದೀನಿ ಎಂದು ಅವರ ಕೈ ಹಿಡಿದು ನಿಧಾನವಾಗಿ ಮೇಲೆ ಕರೆತಂದು ಒಂದು ಸೀಟಿನಲ್ಲಿ ಕೂತಿಸಿದ ನಂತರ ಕಂಡಕ್ಟರ್ ಆ ಹುಡುಗನ ಕಡೆ ನೋಡಿದ. ಅವನ ಧ್ವನಿ ಜೋರಾಗಿರಲಿಲ್ಲ. ಆದರೆ, ಮಾತು ನೇರವಾಗಿ ಹೃದಯಕ್ಕೆ ತಗುಲಿತು. ತಮ್ಮಾ ಇವತ್ತು ನಿಮಗೆ ಇವರ ನಿಧಾನ ಕೋಪ ಬರುತ್ತಿದೆ ಅಲ್ವಾ? ಆದರೆ, ಒಂದು ಕಾಲದಲ್ಲಿ ಇದೇ ಕೈಗಳು ನಿನ್ನನ್ನು ಹಿಡಿದು ನಡೆಯಲು ಕಲಿಸಿರಬಹುದು, ನೀನು ಬಿದ್ದು ಅತ್ತಾಗ ಇದೇ ಭುಜ ನಿನ್ನನ್ನು ಹೊತ್ತಿರಬಹುದು, ಶಾಲೆಗೆ ಬಸ್ ತಪ್ಪಬಾರದೆಂದು ಇದೇ ಕಾಲು ಓಡಿರಬಹುದು. ಈಗ ವಯಸ್ಸಾಗಿದೆ ಅಷ್ಟೇ ಮರ ನಿಧಾನವಾಗಿ ಒಣಗುತ್ತಿದೆ ಅಂದರೆ ಅದರ ನೆರಳನ್ನು ಮರೆತುಬಿಡಬಾರದು ಬಸ್ ಒಳಗೆ ಕ್ಷಣಕಾಲ ಮೌನ. ಕಂಡಕ್ಟರ್ ಶೀಟಿ ಊದಿ ರೈಟ್ ಎಂದರು ಬಸ್ ಮುಂದೆ ಸಾಗಿತು.

ಹುಡುಗನ ಮುಖ ಬದಲಾಗಿತ್ತು. ತಂದೆಯ ಕಡೆ ನೋಡಿದ. ಮೊದಲ ಬಾರಿ ಅವರ ನಡುಗುವ ಕೈ ಅವನಿಗೆ ಕಾಣಿಸಿತು. ಅವನು ನಿಧಾನವಾಗಿ ತಂದೆಯ ಚೀಲ ಕೈಯಲ್ಲಿ ತೆಗೆದುಕೊಂಡು, ಅಪ್ಪನ ಪಕ್ಕ ಕೂತು ಅಪ್ಪಾ ಇಲ್ಲಿ ನಾನು ಇದ್ದೀನಿ ಎಂದು ಕಿವಿಯಲ್ಲಿ ಉಸುರಿದ. ತಂದೆ ಏನೂ ಹೇಳಲಿಲ್ಲ. ಆದರೆ, ಅವರ ಕಣ್ಣಂಚಿನಲ್ಲಿ ಮಿನುಗಿದ ನೀರು ಸಾವಿರ ಮಾತಿಗಿಂತ ದೊಡ್ಡದು. ಕಂಡಕ್ಟರ್ ಟಿಕೆಟ್ ಕೀಳುತ್ತಾ ಸಣ್ಣಗೆ ನಕ್ಕ. ಜೀವನದಲ್ಲಿ ಕೆಲವರು ಟಿಕೆಟ್ ಮಾತ್ರ ಕೊಡುವುದಿಲ್ಲ, ಒಂದು ಪಾಠವನ್ನೂ ಕೊಟ್ಟು ಹೋಗುತ್ತಾರೆ. ಆ ಕ್ಷಣಕ್ಕೆ ಆ ಗಾದೆ ಮತ್ತೆ ನೆನಪಾಯಿತು - ಹಣ್ಣೆಲೆ ಬೀಳುವಾಗ ಹಸಿರೆಲೆ ನಗಾಡುತ್ತೆ, ಆದರೆ, ಒಂದು ದಿನ ಆ ಹಸಿರೆಲೆಯೂ ಹಣ್ಣೆಲೆಯಾಗುತ್ತದೆ ಅನ್ನೋದನು ಜೀವನ ತುಂಬ ನಿಧಾನವಾಗಿ ಕಲಿಸುತ್ತದೆ.

ಒಂದು ಮೀಸೆಯ ಕತೆ!

● ಜಿ.ಎಲ್. ಕೃಷ್ಣ

ಮೊನ್ನೆ ಮೆಟ್ರೋ ರೈಲಿನಲ್ಲಿ ಮನೆಗೆ ಮರಳುವಾಗ ವಿನೋದದ ಸಂಗತಿಯೊಂದು ನಡೆಯಿತು. ಭಾನುವಾರವಾದರೂ ರೈಲು ತುಂಬಿತ್ತು. ನಿಂತೇ ಪ್ರಯಾಣಿಸುತ್ತಿದ್ದೆ. ಮೆಜೆಸ್ಟಿಕ್‌ನಲ್ಲಿ ಬಹುಮಂದಿ ಇಳಿದದ್ದರಿಂದ ನನಗೆ ಕೂರಲು ಸ್ಥಳಾವಕಾಶ ಸಿಕ್ಕಿತು. ನಾನು ಕುಳಿತು ನೋಡುತ್ತೇನೆ ನನ್ನೆದುರು ಸ್ವಲ್ಪ ವಿಲಕ್ಷಣವೂ ಆದರೆ ಅಷ್ಟೇ ಚೆಂದವೂ ಆದ ಕರಿಯ ಮೀಸೆಯನ್ನು ಹೊತ್ತ ಅಗಲವಾದ ಮುಖವೊಂದು ವಿರಾಜಮಾನವಾಗಿತ್ತು. ಮೀಸೆ ಕಪ್ಪು ಮತ್ತು ಸುಂದರ. ಆದರೆ, ಅದರ ಹಿಂದಿನ ಮುಖ ಮಾತ್ರ ಮುಪ್ಪಿನ ಸುಕ್ಕಿನದು. ಇದೇನಪ್ಪಾ ಚೋದ್ಯ?! ಮೀಸೆಗೆ ಬಣ್ಣ ಬಳಿದುಕೊಂಡಿದ್ದಾರೆಯೇ ಎಂದು ನೋಡು ತ್ತೇನೆ. ಮೀಸೆಗೆ ಬಣ್ಣವಲ್ಲ! ಮೀಸೆಯೇ ಇಲ್ಲ ಹೆಂಗಸರು ಬಳಸುವ ಕಣ್ಣು ಕಪ್ಪನ್ನು ತೆಗೆದು ಕೊಂಡು ಮೀಸೆಯನ್ನು ಬರೆದುಕೊಂಡು ಬಂದು ಬಿಟ್ಟಿದ್ದಾರೆ! ನಾನು ಇಷ್ಟನ್ನು ಗ್ರಹಿಸಲು ಕೆಲವು ಕ್ಷಣಗಳು ಬೇಕಾದುವು. ಆ ವೇಳೆಗೆ ಆ ವ್ಯಕ್ತಿಯೂ ನನ್ನನ್ನು ನೋಡಿದರು. ಯಾವಾಗ ಇದು ಚಿತ್ರದ ಮೀಸೆ, ನಿಜವಾದ ಮೀಸೆ ಯಲ್ಲ ಎಂಬುದನ್ನು ನನ್ನ ಮನಸ್ಸು ಗ್ರಹಿಸಿತೋ ಆಗ ನನ್ನ ಮುಖಭಾವದಲ್ಲಿ ಒಂದು ಹುಡುಗುತನದ ನಗೆ ಮಿಂಚಿಬಿಟ್ಟಿತು. ನನ್ನನ್ನೇ ನೋಡಿ ಇವ ನಗುತ್ತಿರುವುದು ಎಂದು ಆ ವ್ಯಕ್ತಿಯೂ ಊಹಿಸಿಬಿಟ್ಟರು. ಆ ವ್ಯಕ್ತಿ ಮುನಿಸಿಕೊಳ್ಳುವುದಕ್ಕೆ ಮುಂಚೆ ಏನಾದರೂ ಮಾಡ ಬೇಕು. ಆಪದ್ಬಾಂಧವನಂತೆ ರೈಲಿನ ಬಾಗಿಲು ತೆರೆಯಿತು. ಯಾವ ನಿಲ್ದಾಣ ಎಂಬುದನ್ನೂ ನೋಡದೆ ಬಾಗಿಲಿನಿಂದ ಆಚೆ ಜಿಗಿದು ಅಳ್ಳೆಬಿರಿಯೇ ನಗಾಡಿದೆ. ಆಹಾ! ಈ ಲೋಕದ ಹಾಸ್ಯಸ್ಥಾನಗಳು ಎಲ್ಲೆಲ್ಲಿರುತ್ತವೋ! ಕಾಣದಂತೆ ಮಾಯವಾಯಿತೋ ಅವರ ಮೀಸೆ, ಕಾಣುತಲೇ ಚಿತ್ರವಾಯಿತೋ!

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	■	■	2	■	3		
	■	4			■		■	■
5			■	6			7	■
■	■	■	■		■	■		■
8	9			■	10	11		
■		■	■	12	■		■	■
■	13	14			■	15		16
■	■		■	17			■	
18			■		■	■	■	

ಎಡದಿಂದ ಬಲಕ್ಕೆ

3. ಕೈಗೆ ಅಂಟಿಕೊಂಡ ರಾಡಿ (3)
4. ಅಡಗಿಕೊಳ್ಳಲು ಸೂಕ್ತವಾದ ಕಾಡು (3)
5. ಮನಸ್ಸಿನ ಚಿಂತೆ (3)
6. ಸಪ್ತಾಹದ ರಜಾ ದಿನವಿದು (4)
8. ನಮ್ರತೆಯಿಂದ ಕೂಡಿದ ಎಂದರ್ಥ (4)
10. ನೀರಿನಲ್ಲಿ ವಾಸಿಸುವ ಮೀನು, ಮೊಸಳೆ ಇತ್ಯಾದಿಗಳನ್ನು ಒಟ್ಟಾಗಿ ಹೀಗೆ ಕರೆಯಬಹುದು (4)
13. ಹಲವರಿಗೆ ಬರುವ ಶಿರೋವೇದನೆ (4)
15. ಆರ್ಥಿಕವಾಗಿ ಶಕ್ತಿವಂತನಲ್ಲದವನು (3)
17. ಲೋಹದ ಭಾಗಗಳನ್ನು ಕಾಯಿಸಿ ಒಂದಕ್ಕೊಂದು ಜೋಡಿಸುವ ಪ್ರಕ್ರಿಯೆ (3)
18. ಕೈಗೆ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)

ಮೇಲಿಂದ ಕೆಳಕ್ಕೆ

1. ಹೊರದೇಶದಿಂದ ವಸ್ತು ಗಳನ್ನು ತರಿಸಿಕೊಳ್ಳುವುದು (3)
2. ನಿರಂತರದ ನಡುವೆ ಮತ್ತೊಬ್ಬ ಸೂರ್ಯ ತಿರುಗಿಬಿದ್ದಿದ್ದಾನೆ (4)
3. ಸಂಪ್ರದಾಯವು ಇಲ್ಲಿ ತಲೆಕೆಳಗಾಗಿದೆ (3)
4. ಮತ್ತೊಂದು ಮರ್ಯಾದೆಯಿರುವ ಒತ್ತೆ (4)
7. ನೂಲುವ ಸಾಧನವೊಂದು ಇಲ್ಲಿ ಚೆಲ್ಲಾಪಿಲ್ಲಿಯಾಗಿದೆ (3)
9. ಸ್ಪರ್ಧೆಯೊಂದರಲ್ಲಿ ಜಯಿಸಿದ (3)
11. ಬಗೆಬಗೆಯ ಅವಸರ (4)
12. ಕಹಿ ಮತ್ತು ಸಿಹಿಯಾದ ವಸ್ತುಗಳು ಜತೆಯಾಗಿ ಬಂದಿವೆ (4)
14. ಎಲ್ಲಿಯೂ ತಪ್ಪಾಗದಂತೆ ಲೆಕ್ಕ ಬರೆಯುವ ಕರಣಿಕ (3)
16. ವೃತ್ತಾಕಾರವಾದುದು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 3. ಕೆಸರು 4. ಅಡವಿ 5. ದುಗುಡ 6. ರವಿವಾರ 8. ಸವಿನಯ 10. ಜಲಚರ 13. ತಲೆನೋವು 15. ಬಡವ 17. ಬೆಸುಗೆ 18. ಕಡಗ

ಮೇಲಿಂದ ಕೆಳಕ್ಕೆ: 1. ಆಮದು 2. ಅವಿರತ 3. ಕೆಡಿವಾ 4. ಅಡಮಾನ 7. ರಕಚ 9. ವಿಜೇತ 11. ಲಗುಬಗೆ 12. ಬೇವುಬೆಲ್ಲ 14. ಲೆಕ್ಕಿಗ 16. ವರ್ತುಲ

ಮಹಾವಿಷ್ಣುವಿನ ವರಾಹ ಅವತಾರ ಮತ್ತು ಭೂದೇವಿಯ ಉದ್ಧಾರ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸತ್ಯಯುಗದ ಆರಂಭದ ಕಾಲವದು. ಕಶ್ಯಪ ಮಹರ್ಷಿ ಮತ್ತು ದಿತಿ ದೇವಿಯ ಪುತ್ರರಾದ ಹಿರಣ್ಯಾಕ್ಷ ಮತ್ತು ಹಿರಣಕಶಿಪು ಎಂಬ ಇಬ್ಬರು ದೈತ್ಯರು ಬ್ರಹ್ಮನಿಂದ ಅಪ್ರತಿಮ ವರಗಳನ್ನು ಪಡೆದು ಅಹಂಕಾರದಿಂದ ವರ್ತಿಸುತ್ತಿರುತ್ತಾರೆ. ಅದರಲ್ಲಿ ಹಿರಣ್ಯಾಕ್ಷನು ಇಡೀ ಬ್ರಹ್ಮಾಂಡವನ್ನೇ ನಡುಗಿಸುವಂತಹ ಮಹಾ ಬಲಶಾಲಿ ಯಾಗಿರುತ್ತಾನೆ. ತನ್ನ ಶಕ್ತಿಯ ಮದದಿಂದ ಆತ ದೇವತೆಗಳಿಗೆ ಪೀಡೆ ಕೊಡಲಾರಂಭಿಸುತ್ತಾನೆ. ಅಷ್ಟೇ ಅಲ್ಲದೆ, ಇಡೀ ಜಗತ್ತಿಗೆ ಆಧಾರವಾಗಿರುವ, ಸಕಲ ಜೀವರಾಶಿಗಳನ್ನು ತನ್ನ ಮಡಿಲಿನಲ್ಲಿ ಸಲಹುತ್ತಿರುವ ಭೂದೇವಿಯನ್ನು ಬಲವಂತವಾಗಿ ಅಪಹರಿಸಿ, ಕಡುಗತ್ತಲಿನಿಂದ ಕೂಡಿದ ಪ್ರಳಯದ ಮಹಾಸಮುದ್ರದ ಆಳದಲ್ಲಿ ಬಚ್ಚಿಡುತ್ತಾನೆ.

ತನ್ನ ಅಸ್ತಿತ್ವವನ್ನೇ ಕಳೆದುಕೊಂಡು, ಸಾಗರದ ಆಳದ ಕತ್ತಲೆಯಲ್ಲಿ ಮುಳುಗುತ್ತಿದ್ದ ಭೂದೇವಿ ಅಸಹಾಯಕಳಾಗಿ ರಕ್ಷಣೆಗಾಗಿ ಆಕ್ರಂದಿಸುತ್ತಾಳೆ. ಇತ್ತ ಭೂಮಿಯಿಲ್ಲದೆ ಜಗತ್ತಿನ ಸೃಷ್ಟಿ ಕಾರ್ಯ ಹೇಗೆ ಸಾಧ್ಯ? ಎಂದು ಚಿಂತಾಕ್ರಾಂತನಾದ ಸೃಷ್ಟಿ ಕರ್ತ ಬ್ರಹ್ಮದೇವನು, ಈ ಸಂಕಟದಿಂದ ಪಾರು ಮಾಡುವಂತೆ ಜಗದ್ರಕ್ಷಕನಾದ ಶ್ರೀಮನ್ನಾರಾಯಣನನ್ನು ಮನಸಾರೆ ಪ್ರಾರ್ಥಿಸುತ್ತಾನೆ. ಆಗ ಬ್ರಹ್ಮನ ಮೂಗಿನ ಹೊಳ್ಳೆಯಿಂದ ಹೆಬ್ಬೆರಳಿನ ಗಾತ್ರದ ಅತ್ಯಂತ ಸಣ್ಣ ಶ್ವೇತ ವರಾಹವೊಂದು (ಬಿಳಿ ಹಂದಿ) ಪ್ರಕಟವಾಗುತ್ತದೆ.

ನೋಡುನೋಡುತ್ತಿದ್ದಂತೆ ಆ ವರಾಹವು ಪರ್ವತದಷ್ಟು ದೈತ್ಯಾಕಾರವಾಗಿ ಬೆಳೆಯುತ್ತದೆ. ಅದರ ಘರ್ಜನೆಗೆ ಇಡೀ ಬ್ರಹ್ಮಾಂಡವೇ ಕಂಪಿಸುತ್ತದೆ. ಆ ನೀಲಮೇಘ ಶ್ಯಾಮಲ ವರ್ಣದ, ತೀಕ್ಷ್ಣ ಕೋರೆಹಲ್ಲುಗಳ ಮಹಾವರಾಹವು ಭೂದೇವಿಯನ್ನು ಹುಡುಕುತ್ತಾ ಸಾಗರದ ಆಳಕ್ಕೆ ಧುಮುಕುತ್ತದೆ.

ಸಮುದ್ರದ ತಳದಲ್ಲಿದ್ದ ಭೂದೇವಿಯನ್ನು ಕಂಡು, ವರಾಹಸ್ವಾಮಿಯು ಆಕೆಯನ್ನು ತನ್ನ ತೀಕ್ಷ್ಣವಾದ ಕೋರೆಹಲ್ಲುಗಳ (ದಾಡೆಗಳ) ಮೇಲೆ ಅತ್ಯಂತ ಮೃದುವಾಗಿ ಎತ್ತಿ ಹಿಡಿಯುತ್ತಾನೆ. ತಾಯಿಯನ್ನು ಸುರಕ್ಷಿತವಾಗಿ ಮೇಲಕ್ಕೆ ತರುತ್ತಿರುವಾಗ, ಅಡ್ಡಬಂದ ಮಹಾಶಕ್ತಿಶಾಲಿ ಅಸುರ ಹಿರಣ್ಯಾಕ್ಷನು ದೇವನಿಗೆ ಸವಾಲು ಹಾಕುತ್ತಾನೆ.

ವರಾಹಸ್ವಾಮಿ ಮತ್ತು ಹಿರಣ್ಯಾಕ್ಷನ ನಡುವೆ ಭೀಕರವಾದ ಗದಾಯುದ್ಧ ನಡೆಯುತ್ತದೆ. ಜಗತ್ತನ್ನೇ ನಡುಗಿಸಿದ ಆ ಯುದ್ಧದ ಕೊನೆಯಲ್ಲಿ, ಭಗವಾನ್ ವರಾಹಮೂರ್ತಿಯು ತನ್ನ ಸುದರ್ಶನ ಚಕ್ರ ಮತ್ತು ಗದೆಯಿಂದ ಹಿರಣ್ಯಾಕ್ಷನನ್ನು ಸಂಹರಿಸಿ ಲೋಕಕ್ಕೆ ಕಂಟಕವಾಗಿದ್ದ ಅಧರ್ಮವನ್ನು ಅಳಿಸುತ್ತಾನೆ. ತದನಂತರ, ಮಹಾಸಾಗರದಿಂದ ಭೂದೇವಿಯನ್ನು ಮೇಲಕ್ಕೆ ತಂದು, ವಿಶ್ವದ ಕೇಂದ್ರಸ್ಥಾನದಲ್ಲಿ ಆಕೆಯನ್ನು ಮತ್ತೆ ಸ್ಥಿರವಾಗಿ ಪ್ರತಿಷ್ಠಾಪಿಸುತ್ತಾನೆ. ಆಕೆಗೆ ಅಭಯವನ್ನು ನೀಡಿ ಸಕಲ ಜೀವರಾಶಿಗಳ ಪಾಲನೆಗೆ ದಾರಿ ಮಾಡಿಕೊಡುತ್ತಾನೆ.

ಶ್ರೀಮನ್ನಾರಾಯಣನು ತಳೆದ ವರಾಹ



ಅವತಾರದ ಈ ಪೌರಾಣಿಕ ಕಥೆ ನಮಗೆ ಕೇವಲ ಭಕ್ತಿಯನ್ನಷ್ಟೇ ಅಲ್ಲ, ಪ್ರಕೃತಿಯನ್ನು ರಕ್ಷಿಸುವ ಪರಮ ಕರ್ತವ್ಯವನ್ನು ನೆನಪಿಸುತ್ತದೆ. ಆದರೆ, ಇಂದು ಪ್ಲಾಸ್ಟಿಕ್ ಮಾಲಿನ್ಯ, ಜಾಗತಿಕ ತಾಪಮಾನ, ಮತ್ತು ಅರಣ್ಯ ನಾಶದಂತಹ ಮಾನವ ನಿರ್ಮಿತ ಪ್ರಳಯದ ಸಾಗರದಲ್ಲಿ ಭೂಮಿ ಮತ್ತೆ ಮುಳುಗುತ್ತಿದೆ. ಈ ಭೂಮಿ ಕೇವಲ ನಾವು ವಾಸಿಸುವ ಜಾಗವಲ್ಲ, ನಮ್ಮನ್ನು ಹೆತ್ತು ಹೊತ್ತ ತಾಯಿ. ಈ ಭೂಮಿ ದಿನ ದಿನವೂ ಕರಗುತ್ತಿದ್ದರೆ, ನಾವು ಮತ್ತೊಬ್ಬ ರಕ್ಷಕನಿಗಾಗಿ ಕಾಯುತ್ತಾ ಕೂರಲು ಸಾಧ್ಯವಿಲ್ಲ. ನಾವೇ ಆ ರಕ್ಷಕರಾಗಬೇಕಿದೆ.

ದೇವಸ್ಥಾನಗಳಿಗೆ ದೇವರ ಪೂಜೆ ಮಾಡಲು ಹೋಗುವ ನಾವು, ಉಸಿರಾಡುತ್ತಿರುವ, ನಮಗೆ ಅನ್ನ ನೀಡುತ್ತಿರುವ ಭೂಮಿಯನ್ನು ಸ್ವಚ್ಛವಾಗಿರಿಸುವ, ಪೂಜಿಸುವ ಹೊಣೆಯನ್ನು ಮರೆತೆಹೋಗಿದ್ದೇವೆ. ಹಬ್ಬ ಹರಿದಿನಗಳ ನಂತರ ಟನ್ ಗಟ್ಟಲೆ ಕಸ ಪ್ರತಿ ನಗರದಲ್ಲೂ ಉತ್ಪಾದನೆಯಾಗುತ್ತದೆ. ಇದನ್ನೆಲ್ಲ ಊರ ಜನ ಯಾವುದೋ ಒಂದು ಭೂಭಾಗದಲ್ಲಿ ಹೂಳಲಾಗುತ್ತದೆ. ಹಬ್ಬಗಳ ನಂತರ ನದಿ ಕೆರೆಗಳ ಪರಿಸ್ಥಿತಿಯೂ ಬೇರೆ ಏನಲ್ಲ. ದೇವರ ಪೂಜೆಯ ನೆಪದಲ್ಲಿ, ನಮ್ಮ ಸುಖದ ಸೋಗಿನಲ್ಲಿ ನಾವಿರುವ ಭೂಮಿಯನ್ನು ಕಲುಷಿತಗೊಳಿಸುತ್ತಿರುವ ನಾವು ಭೂಮಿಯಲ್ಲಿ ಬದುಕಲು ಎಷ್ಟು ಅರ್ಹರು ಎಂದು ಪ್ರಶ್ನಿಸಿಕೊಳ್ಳಬೇಕಿದೆ. ಇನ್ನಾದರೂ ಎಚ್ಚೆತ್ತುಕೊಂಡು ಪ್ಲಾಸ್ಟಿಕ್ ವಸ್ತುಗಳನ್ನು ಕಡಿಮೆ ಬಳಸೋಣ. ಆದಷ್ಟು ಪ್ರಕೃತಿಗೆ ಹತ್ತಿರವಾಗುತ್ತಾ ನಮ್ಮ ಮಕ್ಕಳಿಂದ ಸಾಲವಾಗಿ ಪಡೆದಿರುವ ಭೂಮಿಯನ್ನು ಕಡಿಮೆ ಕಲುಷಿತಗೊಳಿಸಿ ಮಾನವೀಯತೆ ಮೆರೆಯೋಣ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com